ರಾ.ಕು.ಅವರ ಲಲಿತಪ್ರಬಂಧ ಸಾಹಿತ್ಯ

ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಕೆಂಚಣ್ಣವರ ಶಾಂತಪ್ಪ ರಾಮಣ್ಣ

ಮಾರ್ಗದರ್ಶಕರು
ಡಾ.ಎಸ್.ಆರ್.ಚನ್ನವೀರಪ್ಪ
ಹಿರಿಯಶ್ರೇಣಿ ಅಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩.೨೭೬

೨೦೦೮

510

ರಾ.ಕು.ಅವರ ಲಲಿತಪ್ರಬಂಧ ಸಾಹಿತ್ಯ

ಒಂದು ಅಧ್ಯಯನ

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್.ಪದವಿಗಾಗಿ
ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ
ಕೆಂಚಣ್ಣವರ ಶಾಂತಪ್ಪ ರಾಮಣ್ಣ

ಮಾರ್ಗದರ್ಶಕರು
ಡಾ.ಎಸ್.ಆರ್.ಚನ್ನವೀರಪ್ಪ
ಹಿರಿಯಶ್ರೇಣಿ ಅಧ್ಯಾಪಕರು

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

೨೦೦೮

ಸಂಶೋಧಕರ ಪ್ರಮಾಣ ಪತ್ರ

ರಾ.ಕು.ಅವರ ಲಲಿತಪ್ರಬಂಧ ಸಾಹಿತ್ಯ : ಒಂದು ಅಧ್ಯಯನ ಎಂಬ ನಿಬಂಧವನ್ನು ಡಾ.ಎಸ್.ಆರ್. ಚನ್ನವೀರಪ್ಪ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಕೆಂಚಣ್ಣವರ ಶಾಂತಪ್ಪ ರಾಮಣ್ಣ
ಸಂಶೋಧಕ
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ

ದಿನಾಂಕ : ೨೦-೯-೨೦೦೮

ಮಾರ್ಗದರ್ಶಕರ ದೃಢೀಕರಣ ಪತ್ರ

ರಾ.ಕು.ಅವರ ಲಲಿತಪ್ರಬಂಧ ಸಾಹಿತ್ಯ : ಒಂದು ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಕೆಂಚಣ್ಣವರ ಶಾಂತಪ್ಪ ರಾಮಣ್ಣ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ.ಎಸ್.ಆರ್.ಚನ್ನವೀರಪ್ಪ
ಹಿರಿಯಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೦-೬-೨೦೦೮

ಕೃತಜ್ಞತೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್.ಅಧ್ಯಯನ ಮಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಕುಲಪತಿಗಳಾದ ಡಾ.ಎ.ಮುರಿಗೆಪ್ಪ ಮತ್ತು ಈ ಹಿಂದಿನ ಕುಲಪತಿಗಳಾದ ಡಾ.ಕೆ.ವಿ.ನಾರಾಯಣ ಅವರಿಗೆ ಹಾಗೂ ಪ್ರಸ್ತುತ ಕುಲಸಚಿವರಾದ ಡಾ.ಹಿ.ಚಿ.ಬೋರಲಿಂಗಯ್ಯ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಡಾ.ಡಿ.ಪಾಂಡುರಂಗಬಾಬು ಅವರಿಗೆ, ಅಧ್ಯಯನದ ಕ್ರಮವನ್ನು ಬೋಧಿಸಿ ಪ್ರೀತಿಯಿಂದ ಕಾಳಜಿ ವಹಿಸಿ ಮಾರ್ಗದರ್ಶನ ಮಾಡಿದ ಡಾ.ಎಸ್.ಆರ್.ಚನ್ನವೀರಪ್ಪ ಅವರಿಗೆ, ಅಧ್ಯಯನದ ಅವಧಿಯಲ್ಲಿ ಪೂರಕ ಮಾಹಿತಿಯನ್ನು ನೀಡಿದ ಹಸ್ತಪ್ರತಿಶಾಸ್ತ್ರ ವಿಭಾಗದ ನನ್ನ ವಿದ್ಯಾಗುರುಗಳಾದ ಡಾ.ವೀರೇಶ ಬಡಿಗೇರ, ಡಾ.ಎಫ್.ಟಿ.ಹಳ್ಳಿಕೇರಿ, ಡಾ.ಎಸ್.ಎಸ್.ಅಂಗಡಿ, ಡಾ.ಕೆ.ರವೀಂದ್ರನಾಥ ಅವರಿಗೆ,

ನನ್ನ ಅಧ್ಯಯನಕ್ಕೆ ಒತ್ತಾಸೆಯಾಗಿ ನಿಂತಿದ್ದ ಇಹ ಲೋಕವನ್ನು ತ್ಯಜಿಸಿರುವ ಶಿಕ್ಷಣ ಪ್ರೇಮಿ ನನ್ನ ತಂದೆ ಶ್ರೀ ರಾಮಣ್ಣ ಕೆಂಚಣ್ಣವರ ಸದ್ಯ ನನ್ನ ಅಧ್ಯಯನಕ್ಕೆ ಬೆಂಗವಲಾಗಿರುವ ನನ್ನ ತಾಯಿ ರುದ್ರವ್ವಾ, ಅಣ್ಣಂದಿರಾದ ಯಲ್ಲಪ್ಪ, ಪರಶುರಾಮ, ಈರಣ್ಣ, ರೇವಣ್ಣಪ್ಪಾ, ಪ್ರಕಾಶ್, ನನ್ನ ಅಕ್ಕ ಚನ್ನಮ್ಮಾ, ತಮ್ಮ ಶಿವು, ಭಾವ ವೀರಪ್ಪ ಅಗಿಮನಿ ಹಾಗೂ ಚಿಕ್ಕಪ್ಪಂದಿರಾದ ದೇವಿಂದ್ರಪ್ಪಾ, ಬಸಪ್ಪ, ಮಾದೇವಪ್ಪ ಅವರಿಗೆ,

ನನ್ನ ಶ್ರೇಯಸ್ಸಿಗಾಗಿ ಸದಾ ನನಗೆ ಮಾರ್ಗದರ್ಶನ ಮಾಡುತ್ತಿರುವ ಚಿಕ್ಕಪ್ಪರಾದ ಶ್ರೀ ಟಿ.ಬಿ.ಸೊಲಬಕ್ಕನವರಿಗೆ, ನನ್ನ ಅಧ್ಯಯನ ಆಸಕ್ತಿಯನ್ನು ಹೆಚ್ಚಿಸಿ ಪ್ರೋತ್ಸಾಹಿಸಿದ ನನ್ನ ಗುರುಗಳಾದ ಡಾ. ಭೋಜರಾಜ ಭಿ.ಪಾಟೀಲ, ಡಾ.ಕೆ.ಎಚ್.ಮುಕ್ಕಣ್ಣವರ, ಶ್ರೀ ಶಿವಾನಂದ ನಾಗನೂರ, ಸತೀಶ ಕುಲಕರ್ಣಿ ಹಾಗೂ ಹಾವೇರಿಯ ಸಾಹಿತಿ ಬಳಗದವರಿಗೆ, ಅನಿಕೇತನ ವಿದ್ಯಾರ್ಥಿನಿಲಯದ ಹಿರಿಯ ಸ್ನೇಹಿತರಾದ ವೀರೇಶ ಉತ್ತಂಗಿ, ನಿರಂಜನ, ಈರಣ್ಣ, ಗವಿಸಿದ್ಧಪ್ಪ ಹಾಗೂ ನಿಲಯದ ಇನ್ನುಳಿದ ಸ್ನೇಹಿತರಿಗೆ,

ನನ್ನ ಅಧ್ಯಯನಕ್ಕೆ ಸಲಹೆ ಸಹಕಾರವನ್ನು ನೀಡಿದ ಹಾವೇರಿಯ ಕೆ.ಎಲ್.ಇ.ಸಂಸ್ಥೆಯ ಗುದ್ಲೆಪ್ಪಾ ಹಳ್ಳಿಕೇರಿ ಪದವಿ ಕಾಲೇಜಿನ ಪ್ರಾಚಾರ್ಯರಾದ ಶ್ರೀ ಬಿ.ಎಸ್.ಗವಿ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯರಾದ ಸಿ.ಎಮ್.ಮಠ, ಕನ್ನಡ ವಿಭಾಗದ ಮುಖ್ಯಸ್ಥರಾದ ಬಿ.ವಿ.ಬೆನಕಟ್ಟಿ, ಜೆ.ಎಫ್. ಹೊಸಮನಿ, ಎಸ್.ಆರ್.ನಾಯಕ, ಮಹೇಶ ಬೆಂಡಗೇರಿ, ಸಂಜಯ ಬಡಿಗೇರ, ನವೀನಾ ರಡ್ಡೇರ, ಗ್ರಂಥಪಾಲಕರಾದ ಬಿ.ಎಸ್.ಅಮ್ಮೋಜಿ ಹಾಗೂ ಸಹ ಅಧ್ಯಾಪಕರುಗಳಿಗೆ,

ನನ್ನ ಆತ್ಮೀಯ ಗೆಳತಿ ಶ್ರೀದೇವಿ ಈ ಅರಗಾಂವಿ, ಗೌರಿ ಸಿಂಧೆ, ಶಂಕ್ರಮ್ಮಾ, ಮೇಟಿ, ಇಟ್ಟೇಣ್ಣವರ, ಶೀಲವಂತರ ಹಾಗೂ ಗೆಳೆಯರಾದ ಮುತ್ತಪ್ಪ, ಬಣಿಜಿಗೇರ, ಬಸವರಾಜ, ಸಂಕದಾಳ, ಅರುಣ, ಹನುಮಂತ, ಉಮೇಶ, ಮಂಜುನಾಥ, ಅಕ್ಕಿಮಠ, ಸುರೇಶ ಹನಗಂಡಿ, ಮೈಲಾರಪ್ಪ, ತೇಲಿ, ಈಶ್ವರ ಚೋಬಾರಿ ಹಾಗೂ ಇನ್ನುಳಿದ ಗೆಳೆಯರಿಗೆ ಮತ್ತು ಗ್ರಂಥಪಾಲಕರಿಗೆ ಹಾಗೂ ಸಿಬ್ಬಂದಿ ವರ್ಗದವರಿಗೆ, ಹಸ್ತಪ್ರತಿಶಾಸ್ತ್ರ ವಿಭಾಗದ ಆಡಳಿತ ಸಿಬ್ಬಂದಿಗಳಿಗೆ, ಅಕ್ಷರ ಸಂಯೋಜಿಸಿದ ಶ್ರೀಮತಿ ಬಿ.ರಶ್ಮಿ ಮತ್ತು ಶ್ರೀ ಎ.ಎಂ.ಕೃಪಾಶಂಕರ್ ಅವರಿಗೆ,

ಕೃತಜ್ಞತೆಗಳು

ಕೆಂಚಣ್ಣವರ. ಶಾಂತಪ್ಪ. ರಾಮಣ್ಣ

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

೧

ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹತ್ತು ಹಲವು ಸಾಹಿತ್ಯ ರೂಪಗಳು ಬೆಳೆದು ಬಂದವು. ಅಂಥವುಗಳಲ್ಲಿ ಲಲಿತ ಪ್ರಬಂಧ ಪ್ರಕಾರವೂ ಒಂದು. ಲಲಿತಪ್ರಬಂಧ ಸಾಹಿತ್ಯ ಕನ್ನಡದಲ್ಲಿ ಇತ್ತೀಚೆಗೆ ಒಂದು ಆಕರ್ಷಣೀಯ ಸಾಹಿತ್ಯ ಪ್ರಕಾರವಾಗಿ ಬೆಳೆದು ನಿಂತಿದೆ. ಇದು ಇಂಗ್ಲಿಷ್ ಸಾಹಿತ್ಯದ ಪ್ರಭಾವದಿಂದಾಗಿ ಬಂದಿತಾದರೂ ಈ ಬರವಣಿಗೆಯ ಜಾಯಮಾನದ ಮೂಲಧಾತು ನಮ್ಮಲ್ಲಿಯೂ ಇತ್ತು. ಗಳಗನಾಥರ ಕಾದಂಬರಿಗಳಲ್ಲಿ, ಗುಲ್ವಾಡಿ ವೆಂಕಟರಾಯರ ಕೃತಿ ಇಂದಿರಾಬಾಯಿಯಲ್ಲಿ ಕನ್ನಡ ಲಲಿತಪ್ರಬಂಧದ ಕೆಲವು ಲಕ್ಷಣಗಳು ಕಂಡುಬರುತ್ತವೆ. ಭಾವವೇ ಪ್ರಧಾನವಾಗಿರುವ ಲೇಖಕನ ಮೋಹಕ ವ್ಯಕ್ತಿತ್ವದ ಅಭಿವ್ಯಕ್ತಿಯಾಗಿ ಗದ್ಯದ ಭಾವಗೀತೆಯೇ ಆಗಿರುವ ಭಾವ ಪ್ರಧಾನ ಅಂಶ ಲಲಿತ ಪ್ರಬಂಧದ ಮುಖ್ಯ ಶಾಖೆಯಾಗಿರುವಂತೆ ಹಾಸ್ಯ ಪ್ರಧಾನವಾಗಿರುವ ಹರಟೆ ಇದರ ಮತ್ತೊಂದು ಶಾಖೆಯಾಗಿದೆ. ಲಲಿತ ಪ್ರಬಂಧ ಸಾಹಿತ್ಯ ಕನ್ನಡಕ್ಕೆ ಇಂಗ್ಲಿಷ್ ಸಾಹಿತ್ಯದ ಕೊಡುಗೆಯಾದರೂ ಇಂಗ್ಲಿಷ್ ಇದರ ಜನ್ಮಸ್ಥಳವಲ್ಲ ಇದು ಹುಟ್ಟಿದ್ದು ಫ್ರಾನ್ಸ್‌ನಲ್ಲಿ. ಅದು ೧೬ನೇ ಶತಮಾನದಲ್ಲಿ ಇಂಥದೊಂದು ಸಾಹಿತ್ಯ ರೂಪವನ್ನೇ ಮೊದಲ ಬಾರಿಗೆ ಸೃಷ್ಟಿ ಮಾಡಿದ ಕೀರ್ತಿ ಫ್ರಾನ್ಸ್‌ನ ಮೂಂಟೇನ್ ಎಂಬುವನಿಗೆ ಸಲ್ಲುತ್ತದೆ. ಈತ ೧೫೮೦ರಲ್ಲಿ ೨ ಸಂಕಲನಗಳನ್ನು 'ಎಸ್ಸೆಯ್' ಎಂಬ ಹೆಸರಿನಲ್ಲಿ ಪ್ರಕಟಿಸಿದ. ೧೬೦೩ರಲ್ಲಿ ಇಂಗ್ಲಿಷ್‌ಗೆ ಅನುವಾದಗೊಂಡ ಇವನ ಪ್ರಬಂಧಗಳು ಪ್ರಚಾರ ಪಡೆದವು. ನಂತರ ಈತನ ಮಾದರಿಯನ್ನು ಅನುಸರಿಸಿ ಇಂಗ್ಲೆಂಡಿನಲ್ಲಿ ಹುಲುಸಾಗಿ ಲಲಿತ ಪ್ರಬಂಧ ಸಾಹಿತ್ಯದ ಫಸಲು ಬಂದಿತು.

ಪ್ರಬಂಧ ಇದು ಸಂಸ್ಕೃತ ಪದ ಪ್ರ ಬಂಧ ಎಂದರೆ ಚೆನ್ನಾಗಿ ಕಟ್ಟಿದ್ದು ಎಂದರ್ಥ. ವಿಷಯುಗಳ ಬಂಧ ಒಳ್ಳೆಯ ರಚನೆ ಎಂದೂ ಇದು ತಿಳಿಸುತ್ತದೆ. ಅನುಚಿತಾರ್ಥಸಂಬಂಧ ಪರಿವಿಡಿಯು ಹೊಂದಿಕೆಯೂ ಕೆಡದಂತೆ ವಿಷಯಗಳನ್ನು ಮಂಡಿಸುವುದೇ ಪ್ರಬಂಧ. ಇಂಗ್ಲಿಷ್‌ನಲ್ಲಿಯ ಎಸ್ಸೆ ಪದಕ್ಕೆ ಪರ್ಯಾಯವಾಗಿ 'ಪ್ರಬಂಧ' ಪದವನ್ನು ಕನ್ನಡದಲ್ಲಿ ಬಳಸುತ್ತಿದ್ದೇವೆ. ಎಸ್ಸೆ ಶಬ್ದಪ್ರಪಂಚ ಭಾಷೆಯ ಎಸ್ಸೆಯಿಂದ ಬಂದಿದೆ. ಇದರರ್ಥ ಪ್ರಯೋಗ, ಉದ್ಯಮ ಎಂತಾಗುತ್ತದೆ. ಲಲಿತ ಪ್ರಬಂಧಕಾರರ ಲೇಖನಿಯು ಸಮಾಜದ ಸಕಲ ಪಾರ್ಶ್ವಗಳನ್ನು ಸ್ಪರ್ಶಿಸುತ್ತದೆ. ಇದರ ತುದಿಯಲ್ಲಿ ನಗೆ, ನೋವುಗಳು ಅರಳುತ್ತವೆ. ಲೇಖಕನ ಆಸೆ, ಆಕಾಂಕ್ಷೆಗಳು ಪ್ರಬಂಧದಲ್ಲಿ ಕಲೆಗೊಳ್ಳುತ್ತವೆ. ಪ್ರಬಂಧದ ಆತ್ಮೀಯತೆ ಉಳಿದೆಲ್ಲ

ಲಕ್ಷಣಗಳಿಗಿಂತ ಅಧಿಕವಾಗಿರುತ್ತದೆ. ಲೋಕವೆಲ್ಲಾ ಮಲಗಿದಾಗ ಪ್ರಬಂಧಕಾರನಿಗೆ ಎಚ್ಚರ, ಲೋಕವೆಲ್ಲಾ ಎಚ್ಚರಗೊಂಡಾಗ ಇವನಿಗೆ ನಿದ್ರೆ. ಜಗತ್ತು ಆಳುವಾಗ ನಗುವ ಪುಣ್ಯಾತ್ಮನಿವನು. ಲೇಖಕನ ಮನೋವಿಲಾಸ ಅವನ ಪ್ರತಿಭೆಯ ನೆರವಿನಿಂದ ಕಲಾತ್ಮಕ ರೂಪ ಪಡೆದು ಲಲಿತಪ್ರಬಂಧವಾಗಿ ವಾಚಕನ ಮನೋಲ್ಲಾಸಕ್ಕೆ ನೆರವಾಗುತ್ತದೆ. ಕನ್ನಡದಲ್ಲಿ ಲಲಿತ ಪ್ರಬಂಧವು ಸಾಂಸ್ಕೃತಿಕ ಪುನರುಜ್ಜೀವನದ ಸಂದರ್ಭದಲ್ಲಿ ಮೊದಲು ಅನುವಾದದ ಮೂಲಕ ಆರಂಭವಾಯಿತು. ಬಂಗಾಳದ ಬಂಕಿಮಚಂದ್ರ ಚಟರ್ಜಿ ಅವರ ಲೋಕರಹಸ್ಯದ ಬಿ.ವೆಂಕಟಾಚಾರ್ಯರ ಕನ್ನಡ ಅನುವಾದ ಮೊದಲ ಲಲಿತಪ್ರಬಂಧವಾಗಿದೆ. ಇವರದೇ ಕನ್ನಡದ ಮೊದಲ ಸ್ವತಂತ್ರ ಲಲಿತ ಪ್ರಬಂಧವು ೧೯೧೫ರಲ್ಲಿ ದಾಡಿಯಹೇಳಿಕೆ ಎಂಬುದು ಪ್ರಕಟವಾಯಿತು. ಈ ಎಲ್ಲಾ ಪ್ರೇರಣೆಯಿಂದಾಗಿ ಕನ್ನಡದಲ್ಲಿ ಹಲವು ಶ್ರೇಷ್ಠ ಲಲಿತ ಪ್ರಬಂಧಕಾರರು ಬೆಳೆದುಬಂದರು. ಅಂಥವರಲ್ಲಿ ವಿ.ಸೀತಾರಾಮಯ್ಯ, ಎ.ಎನ್.ಮೂರ್ತಿರಾವ್, ಪು.ತಿ.ನರಸಿಂಹಚಾರ್ಯ, ಗೊರೂರು ರಾಮಸ್ವಾಮಿ ಅಯ್ಯಂಗಾರ, ನಾಕಸ್ತೂರಿ, ಕುವೆಂಪು, ಶಿವರಾಮಕಾರಂತ, ಬೇಂದ್ರೆ, ಸಿಂಪಿಲಿಂಗಣ್ಣನಂತಹ ಹಲವಾರು ಲೇಖಕರು ಈ ಲಲಿತ ಪ್ರಬಂಧ ಸಾಹಿತ್ಯವನ್ನು ತಮ್ಮ ಕ್ಷೇತ್ರವನ್ನಾಗಿ ಮಾಡಿಕೊಂಡವರು. ಅವರಲ್ಲಿ ರಾ.ಕು. ಎಂದೇ ಖ್ಯಾತರಾದ ರಾಮಚಂದ್ರ ವೆಂಕಟೇಶ ಕುಲಕರ್ಣಿ ಅವರು ಪ್ರಮುಖರು. ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ತಮ್ಮದೇ ಆದ ವಿಶಿಷ್ಟ ಪಾಂಡಿತ್ಯದ ಫಲವಾಗಿ ಅವಿಸ್ಮರಣೀಯ ಕೊಡುಗೆಯನ್ನು ನೀಡಿದ್ದಾರೆ. ಇವರ ಪ್ರಮುಖ ಮೂರು ಪ್ರಬಂಧ ಸಂಕಲನಗಳೆಂದರೆ **ಗಾಳಿಪಟ(೧೬೭೯), ದೇವಕನ್ಯೆ(೧೯೭೦), ಶೇಷವಿಶೇಷ(೧೯೯೬)** ಎಂಬ ಮೂರು ಅಮೂಲ್ಯ ಲಲಿತಪ್ರಬಂಧ ಸಂಕಲನಗಳನ್ನು ಕೊಟ್ಟಿರುವರು. ಇವರ ಈ ಲಲಿತ ಪ್ರಬಂಧ ಸಂಕಲನಗಳನ್ನು ನಾನು ನನ್ನ ಅಧ್ಯಯನಕ್ಕೆ ಒಳಪಡಿಸಿ ಅದರಲ್ಲಿರುವ ಹಲವು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ವಿಚಾರಗಳನ್ನು, ಫಲಿತಗಳನ್ನು ಚರ್ಚೆಗೆ ಒಳಪಡಿಸುವುದೇ ನನ್ನ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಎರಡು ಮುಖ್ಯ ಪರಂಪರೆಯನ್ನು ಸಾಹಿತ್ಯ ಕೃತಿಗಳು ಬೆಳೆದುಬಂದ ಬಗೆ ಹಾಗೂ ವಿಚಾರ ವಸ್ತುಗಳ ಹಿನ್ನೆಲೆಯಲ್ಲಿ ಹೀಗೆ ಗುರುತಿಸಬಹುದಾಗಿದೆ.

೧. 'ಎ.ಎನ್.ಮೂರ್ತಿರಾವ್ ಅವರ ಪರಂಪರೆ', ೨. 'ಕುವೆಂಪು, ಕಾರಂತರ ಪರಂಪರೆ' ಎಂದು. ಮೂರ್ತಿರಾವ್ ಅವರಿಂದ ಭಾವ ಪ್ರಧಾನ, ಹಾಸ್ಯಮಯವಾದ ಆತ್ಮೀಯ ಲಲಿತ ಪ್ರಬಂಧಗಳು ಬೆಳೆದು ಬಂದರೆ, ಕುವೆಂಪು, ಕಾರಂತರ ಪರಂಪರೆಯಲ್ಲಿ ಚಿಂತನಾತ್ಮಕ ಪ್ರಯೋಗಾತ್ಮಕ ರೀತಿಯ ಗಂಭೀರವಾದ ರೀತಿಯ ಲಲಿತ ಪ್ರಬಂಧಗಳು ಕಂಡುಬರುತ್ತದೆ. ಹಾಗೆ ದಕ್ಷಿಣ ಕರ್ನಾಟಕ ಲಲಿತ ಪ್ರಬಂಧ ಸಾಹಿತ್ಯಕ್ಕೆ ಎ.ಎನ್.ಮೂರ್ತಿರಾವ್ ಅವರು ದಿಗ್ಗಜರಾದರೆ, ಉತ್ತರ ಕರ್ನಾಟಕದ ಲಲಿತ ಪ್ರಬಂಧ ಸಾಹಿತ್ಯಕ್ಕೆ ರಾ.ಕು.ಅವರು ದಿಗ್ಗಜರಾಗಿದ್ದಾರೆ. ಅಷ್ಟರಮಟ್ಟಿಕ್ಕೆ ಅವರ ಲಲಿತ ಪ್ರಬಂಧಗಳು ಪ್ರಬುದ್ಧವಾಗಿವೆ. ರಾ.ಕು.ಅವರ ಲಲಿತ ಪ್ರಬಂಧಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ರಾ.ಕು.ಅವರಲ್ಲಿರುವ ವಿಶಿಷ್ಟ ಶಕ್ತಿಯು ನಮ್ಮ ಮನದ ಲಹರಿಯ ಮೇಲೆ ಬಂದು ಹೋಗುತ್ತದೆ. ಏಕೆಂದರೆ ಇವರ ಲಲಿತ ಪ್ರಬಂಧ

ಸಾಹಿತ್ಯವನ್ನು ಓದಲು, ಓದಿರುವುದನ್ನು ಅರ್ಥೈಸಿಕೊಳ್ಳಲು ನಿಪುಣತೆ ಅವಶ್ಯಕ. ಲಲಿತ ಪ್ರಬಂಧ ಸಾಹಿತ್ಯದಲ್ಲಿ ಬೌದ್ಧಿಕವಾಗಿ ಎಷ್ಟೇಲ್ಲಾ ವೈವಿಧ್ಯಮವಾಗಿ ಚಿಂತಿಸಬಹುದು ಎಂಬುದಕ್ಕೆ ರಾ.ಕು.ಅವರ ಪ್ರಬಂಧಗಳು ಉತ್ತಮ ನಿದರ್ಶನವಾಗಿವೆ. ಸಾಮಾನ್ಯವಾಗಿ, ಸರಳವಾಗಿ, ಲಲಿತವಾಗಿ, ಹಾಸ್ಯಮಯವಾಗಿ ಕಂಡುಬರುವುದು ಲಲಿತ ಪ್ರಬಂಧ ಸಾಹಿತ್ಯದ ಒಂದು ಒಪ್ಪಿತ ಲಕ್ಷಣ. ಆದರೆ ರಾ.ಕು.ಅವರ ಪ್ರಬಂಧಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಇವರ ಪ್ರಬಂಧ ರಚನಾ ಶೈಲಿಯು ಗಂಭೀರತೆಯಿಂದ ಒಡಗೂಡಿ ಲಘುತ್ವದ ಜೊತೆಯಲ್ಲಿ ಸರಾಗವಾಗಿ ಅರ್ಥವಾಗುವಂತೆ 'ಲಲಿತಗಂಭೀರ'ವೆಂಬ ವಿಭಿನ್ನ ದರ್ಶನಕ್ಕೆ ಕಾರಣವಾಗುತ್ತದೆ. ಅಷ್ಟೇ ಅಲ್ಲದೆ ಇವರ ಪ್ರಬಂಧಗಳು ಕಲ್ಪನಾವಿಲಾಸ ಇಲ್ಲವೇ ಹಾಸ್ಯ ಲಹರಿಗಳಾಗಿರದೆ, ಅವುಗಳು ನಗೆಯ ಹಿಂದಿನ ನೋವು ವೇದನೆಗಳನ್ನು ವ್ಯಕ್ತಪಡಿಸುತ್ತವೆ. ಆಲೋಚನೆಯ ಅಧ್ಯಯನದ ಯೋಗ್ಯ ಬಳಕೆ ಜೀವನವನ್ನು ಅರ್ಥೈಸುವ ವಕ್ರವಿಧಾನ, ವಿಡಂಬನೆಯ ಮೋಜು, ಅಭಿವ್ಯಕ್ತಿಯ ಕಲಾವಂತಿಕೆ ಇವರ ಪ್ರಬಂಧಗಳ ವಿಶಿಷ್ಟ ಗುಣವಾಗಿವೆ. ಮುಖ್ಯಸೂತ್ರವನ್ನು ಇವರು ಕನ್ನಡ ಭಾಷೆಯ ಜೊತೆಯಲ್ಲಿ ಇಂಗ್ಲಿಷ್, ಸಂಸ್ಕೃತ ಭಾಷೆಯ ಪ್ರಾವೀಣ್ಯರಾಗಿದ್ದು, ತಮ್ಮ ಲಲಿತ ಪ್ರಬಂಧಗಳಲ್ಲಿ ಇಂಗ್ಲಿಷ್ ಹಾಗೂ ಸಂಸ್ಕೃತದ ಹೆಚ್ಚು ಭಾಷಾಂಶಗಳನ್ನು ಬಳಸಿರುವರು. ಈ ಹಿನ್ನೆಲೆಯಲ್ಲಿ ಇಂಥ ಭಾಷೆಯ ಪಾಂಡಿತ್ಯವುಳ್ಳ ಲೇಖಕರ ಕೃತಿಗಳು ಅಧ್ಯಯನಕ್ಕೆ ಅಗತ್ಯವೆಂದು ಭಾವಿಸಲಾಗಿದೆ.

ಡಾ.ರಂ.ಶ್ರೀ.ಮುಗಳಿ ಅವರು ವಕ್ರೋಕ್ತಿ ವಿಲಾಸಗಳ ಒಡಲಲ್ಲಿ ಗಂಭೀರವು ಅವಿತುಕೊಂಡಿರುವುದೇ ರಾ.ಕು.ಅವರ ಬರವಣಿಗೆಯ ಜೀವಾಳವೆಂದು ನಾನು ತಿಳಿದಿರುತ್ತೇನೆ ಎಂದಿದ್ದಾರೆ. ರಾ.ಕು.ಪ್ರಬಂಧಗಳಲ್ಲಿ ಕಂಡುಬರುವ ಅಮೇರಿಕನ್ ಪ್ರತಿರೋಧ ಎದ್ದು ಕಾಣುವಂತಹದು. ಬಾಳಿನಲ್ಲಿ ಏಕರೂಪಾತ್ಮಕ ನಡೆ ನುಡಿಗಳನ್ನು ಹೇರುತ್ತಿರುವ ಜಗದೇಕ ವೀರರನ್ನು ರಾ.ಕು. ಬಗೆಬಗೆಯಾಗಿ ವಿಡಂಬಿಸಿದ್ದಾರೆ. ಒಟ್ಟಿನಲ್ಲಿ ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ರಾ.ಕು.ಎಂಬ ಹೆಸರೆ ಸಾಕು. ಎನ್ನುವಷ್ಟರ ಮಟ್ಟಿಗೆ ಇವರು ತಮ್ಮ ಪ್ರಬಂಧಗಳಲ್ಲಿ ಅನೇಕ ವಾಸ್ತವ ವಿಚಾರಗಳನ್ನು ಓದುಗರಿಗೆ ಪರಿಚಯಿಸುತ್ತಾ ಯಾವುದನ್ನೂ ನಿರ್ಲಕ್ಷಿಸದೆ ಎಲ್ಲದಕ್ಕೂ ತನ್ನದೆಯಾದ ಆವಸ್ಥೆ ಇದ್ದೆ ಇರುತ್ತದೆ ಎಂಬುದನ್ನು ಸ್ನಾನಸಂಗೀತ, ಡೀಲಕ್ಸಕೋಟು, ಬದಲಿಛತ್ರಿ, ಗಾಳಿಪಟ, ರಾಶಿಯಭವಿಷ್ಯ, ತೋಟಗಾರಿಕೆ ಇಂಥ ಹಲವು ವಿಚಾರಗಳನ್ನು ಪ್ರಬಂಧ ರೂಪದಲ್ಲಿ ಅತ್ಯಂತ ಸೊಗಸಾಗಿ ಹೆಣೆಯುತ್ತ ಓದುಗರಿಗೆ ಅದರ ಸಾರವನ್ನು ಉಣಬಡಿಸಿದ್ದಾರೆ. ಅಷ್ಟೆ ಅಲ್ಲದೆ ಅ.ರಾ.ಮಿತ್ರ ಅವರು 'ಚಿನ್ನದ ಬೆಳೆಸು' ಗ್ರಂಥದಲ್ಲಿ ರಾ.ಕು. ಅವರ ಪ್ರಬಂಧಗಳ ಬಗ್ಗೆ, ಭಾಷೆಯನ್ನು ಫಲವತ್ತಾಗಿ ಮಾಡಲು ರಾ.ಕು. ಹಳೆ ಹೊಸ ಕವಿವಾಣಿ, ಜನರ ಪ್ರಚಲಿತ ರೂಢಭಾವಗಳು ಸಾಮಾನ್ಯ ವಿಚಾರ ಸರಣಿ ಇವೆಲ್ಲವನ್ನು ಒಂದು ವಿಚಿತ್ರ ಮಿಶ್ರಣದಲ್ಲಿ ವಿರುದ್ಧ ದಿಕ್ಕಿನಲ್ಲಿ ಬಳಸುತ್ತಾರೆ. ವಿಮರ್ಶೆ, ಅನುಕಂಪ, ಅಸಡ್ಡೆ ಎಲ್ಲ ಸ್ತರಗಳಲ್ಲಿ ವಿಚಾರದ ಕೊಂಡಿಯನ್ನು ವಿಷಯ ಪ್ರತಿಪಾದನೆ ಮಾಡುತ್ತಾರೆ. ಇಂಥದೊಂದು ಸಂಕೀರ್ಣ ಭಾಷೆಯ ಸೃಷಿ ರಾ.ಕು.ಅವರ ವೈಯಕ್ತಿಕ ಸಾಧನೆ ಎನ್ನಬಹುದು

ಎಂದಿದ್ದಾರೆ. ಅಷ್ಟೆ ಅಲ್ಲದೆ ಸಾಮಾಜಿಕ ಅಂಶಗಳಾದ ವರ್ಣಭೇದ, ಆರ್ಥಿಕಾಂಶ, ನೀತಿಬೋಧನೆ, ಮೂಢನಂಬಿಕೆ, ಹವ್ಯಾಸಗಳು, ವಸಾಹತುಶಾಹಿಗಳಂಥ ಮಹತ್ತರ ವಿಷಯಗಳ ಕುರಿತು ತಮ್ಮ ವಿಶಿಷ್ಟ ಭಾಷಾಪಾಂಡಿತ್ಯವನ್ನು ಬಳಸಿಕೊಂಡು ರಾ.ಕು.ಅವರು ಪ್ರಬಂಧಗಳನ್ನು ರಚಿಸಿದರು. ಈ ಎಲ್ಲ ಅಂಶಗಳನ್ನು ಅನುಲಕ್ಷಿಸಿ ಅಧ್ಯಯನಕ್ಕೆ ಆಯ್ದುಕೊಂಡು ಅವರ ಸಾಹಿತ್ಯರೂಪಿ, ಭಾಷಾ ಪಾಂಡಿತ್ಯಗಳಂತಹ ವಿಷಯಗಳನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ, ಅವರ ನೆಚ್ಚಿನ ಲಲಿತ ಪ್ರಬಂಧ ಕ್ಷೇತ್ರಕ್ಕೆ ರಾ.ಕು.ಅವರು ಸಲ್ಲಿಸಿರುವ ಕಾಣಿಕೆಯ ವಿಚಾರಪೂರ್ಣ ಅಧ್ಯಯನವನ್ನು "ರಾ.ಕು.ಅವರ ಲಲಿತಪ್ರಬಂಧ ಸಾಹಿತ್ಯ ಒಂದು ಅಧ್ಯಯನ" ಎಂಬ ಕಿರು ನಿಬಂಧವನ್ನು ಕೈಗೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಆರು ಅಧ್ಯಾಯಗಳನ್ನು ಈ ಮುಂದಿನಂತೆ ರೂಪಿಸಿಕೊಳ್ಳಲಾಗಿದೆ.

ಅಧ್ಯಾಯ ೧ ಅಧ್ಯಯನದ ಉದ್ದೇಶ ಹಾಗೂ ಸ್ವರೂಪ

ಇಲ್ಲಿ ರಾ.ಕು.ಅವರ ಪ್ರಬಂಧ ಸಾಹಿತ್ಯವನ್ನು ಅಧ್ಯಯನಕ್ಕೆ ಒಳಪಡಿಸಿಕೊಂಡಿರುವುದರ ಉದ್ದೇಶ ಕುರಿತು ಎಲೆಮರೆಯ ಕಾಯಿಯಂತೆ ಅಪಾರವಾದ ಅಮೂಲ್ಯ ಸಾಹಿತ್ಯವನ್ನು ರಚಿಸಿ ಸಾಹಿತ್ಯಲೋಕಕ್ಕೆ ಪರಿಚಿತರಾಗದೆ ಉಳಿದಿರುವ ರಾ.ಕು.ಅವರನ್ನು ನನ್ನ ಅಧ್ಯಯನಕ್ಕೆ ಆಯ್ದುಕೊಂಡು ಅವರ ಸಾಹಿತ್ಯಿಕರುಚಿ, ಭಾಷಾಪಾಂಡಿತ್ಯ, ಸಾಮಾಜಿಕ ಆಯಾಮಗಳಂತಹ ವಿಷಯಗಳನ್ನು ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಅವರ ಸಾಹಿತ್ಯದ ಮಹತ್ವವನ್ನು ತಿಳಿಸುವ ಉದ್ದೇಶದಿಂದಾಗಿ ಹಾಗೂ ಇಂಥ ಒಂದು ಅದ್ಭುತವಾದ ಪಾಂಡಿತ್ಯವುಳ್ಳ ಪ್ರಬುದ್ಧ ಸಾಹಿತಿಯನ್ನು ಅವರು ನೀಡಿರುವ ಸಾಹಿತ್ಯಿಕ ಕೊಡುಗೆಗಳೊಂದಿಗೆ ಸ್ಥೂಲವಾಗಿ ಪರಿಚಯಿಸುವ ಸಲುವಾಗಿ ಈ ವಿಷಯವನ್ನು ಆಯ್ದುಕೊಂಡಿದ್ದೇನೆ ಎಂಬುದನ್ನು ಈ ಅಧ್ಯಯನದಲ್ಲಿ ಸ್ಪಷ್ಟಪಡಿಸಲಾಗಿದೆ.

ಅಧ್ಯಾಯ ೨ ರಾ.ಕು.ಅವರ ಜೀವನ ಮತ್ತು ಸಾಧನೆ

ಇಲ್ಲಿ ಅವರ ಜನನ, ಬಾಲ್ಯಜೀವನದ ಮಧುರ ಕ್ಷಣಗಳ ಸವಿನೆನಪುಗಳು ಹಾಗೂ ಬಾಲ್ಯದಲ್ಲಿಯ ಕಷ್ಟಕರವಾದ ದಿನಗಳನ್ನು ಕಳೆದ ಪ್ರಸಂಗ, ಅಜ್ಜ ಶಾನಭೋಗರ ಪಟ್ಟಣ ಬದುಕಿನ ವಿರೋಧಿ ಧೋರಣೆ ಅವರ ಬಾಲ್ಯದ ಮೇಲೆ ಬೀರಿದ ಪ್ರಭಾವ, ಜೀವನಕ್ಕೆ ಅತ್ಯಮೂಲ್ಯವಾದ ಶಿಕ್ಷಣವನ್ನು ಪಡೆಯುವಲ್ಲಿ ರಾ.ಕು.ಅವರು ಪಟ್ಟಶ್ರಮ, ನಂತರ ಕಾಲೇಜು ಶಿಕ್ಷಣಕ್ಕಾಗಿ ಸಾಂಗ್ಲಿಗೆ ಹೋದಬಳಿಕ ಅಲ್ಲಿನ ಶಿಕ್ಷಣ ಜೊತೆಯಲ್ಲಿ ಸಾಹಿತ್ಯ ಸ್ನೇಹಿತರೊಡನೆಯ ಸಹಬಾಳ್ವೆ ಕುರಿತು, ನಂತರ ವೃತ್ತಿ ಹಾಗೂ ಸೇವೆಗಳನ್ನು ಕುರಿತು ವಿದ್ಯಾರ್ಥಿಯಾಗಿರುವಾಗಲೇ ಉದ್ಯೋಗವನ್ನು ಮಾಡುವಂತ ಪರಿಸ್ಥಿತಿ ರಾ.ಕು.ಅವರಿಗೆ ಒದಗಿ ಬಂದಿತು ಎಂಬುದನ್ನು ಗಮನಹರಿಸಿ ನಂತರ ಇವರು ಕನ್ನಡ ನಿಘಂಟು ರಚನೆಗೆಂದು ಕನ್ನಡ ಸಾಹಿತ್ಯ ಪರಿಷತ್ತಿಗೆ ಇವರು ನೀಡಿದ ಎರವಲು ಸೇವೆ ಕುರಿತಾಗಿ, ಇವರ ವಿವಾಹ, ಮಕ್ಕಳು, ಅಷ್ಟೇ ಅಲ್ಲದೆ

ನಿವೃತ್ತಿಯ ನಂತರದ ಇವರ ಕಷ್ಟಕರ ಜೀವನದ ನೋವು-ನಲಿವುಗಳಂತಹ ವಿಷಯ-ವಿಚಾರಗಳನ್ನು ಈ ಅಧ್ಯಯನದಲ್ಲಿ ವಿಷದೀಕರಿಸಲಾಗಿದೆ.

ಅಧ್ಯಾಯ ೩ ಕನ್ನಡ ಲಲಿತ ಪ್ರಬಂಧ ಪರಂಪರೆ ಮತ್ತು ರಾ.ಕು.

ಈ ಅಧ್ಯಾಯದಲ್ಲಿ ಇದುವರೆಗೂ ಕನ್ನಡ ಲಲಿತ ಪ್ರಬಂಧ ಸಾಹಿತ್ಯವು ಯಾವ ರೀತಿಯಾಗಿ ಪಾಶ್ಚಿಮಾನತ್ಯರ ಪ್ರೇರಣೆಯಿಂದ ಕನ್ನಡ ಸಾಹಿತ್ಯದಲ್ಲಿ ಬೆಳೆದುಬಂದಿತು ಮತ್ತು ಈ ಲಲಿತ ಪ್ರಬಂಧ ಸಾಹಿತ್ಯವು ಬೆಳೆದು ಬರಲು ಪ್ರೇರಣೆ ಹಾಗೂ ಇಂಗ್ಲಿಷ್ ಸಾಹಿತ್ಯದಲ್ಲಿ ಹುಟ್ಟಿ ಮುಂದೆ ಹೇಗೆ ಜಗತ್ಪ್ರಸಿದ್ಧ ಪ್ರಸಿದ್ಧವಾಯಿತು. ಇದನ್ನು ಬೆಳೆಸಿದ ಇಂಗ್ಲಿಷ್ ಸಾಹಿತಿಗಳ ಕೊಡುಗೆಗಳಂಥವು. ಹಲವು ವಿಚಾರಗಳ ಜೊತೆ ಕನ್ನಡ ಲಲಿತ ಪ್ರಬಂಧ ಸಾಹಿತ್ಯವು ಸಮೃದ್ಧವಾಗಿ ಬೆಳೆದು ಬರುವಲ್ಲಿ ಕನ್ನಡ ಲಲಿತ ಪ್ರಬಂಧಕಾರರ ಶ್ರಮವನ್ನು ಹಾಗೂ ಅಧ್ಯಯನದ ಬಹುಮುಖ್ಯ ಆಶಯವಾದ ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ರಾ.ಕು.ಅವರ ಕೊಡುಗೆ ಎಷ್ಟೊಂದು ಮಹತ್ವರವಾದದ್ದು ಎಂಬುದನ್ನು ಅವರ ಮೂರು ಲಲಿತ ಪ್ರಬಂಧ ಸಂಕಲನಗಳನ್ನು ಆಧರಿಸಿ ಇಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ೪ ರಾ.ಕು.ಅವರ ಲಲಿತ ಪ್ರಬಂಧಗಳ ಸಾಮಾಜಿಕ ಆಯಮಗಳು

ಈ ಅಧ್ಯಾಯದಲ್ಲಿ ರಾ.ಕು.ಅವರ ಮೂರುಪ್ರಬಂಧ ಸಂಕಲನಗಳನ್ನು ಆಧಾರವಾಗಿಟ್ಟುಕೊಂಡು ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸಿ ವರ್ಣಭೇದ, ಆರ್ಥಿಕಾಂಶ, ಮೂಢನಂಬಿಕೆ, ನೈತಿಕ ಬೋಧನೆ, ವಸಾಹತುಶಾಹಿ ಧೋರಣೆ, ಕೌಟುಂಬಿಕ ನೆಲೆಯಲ್ಲಿ ಕಂಡುಬರುವ ಕೆಲವು ಸೂಕ್ಷ್ಮ ವಿಚಾರಗಳು, ಸಮಾಜದಲ್ಲಿನ ದೌರ್ಜನ್ಯಗಳನ್ನು ಕುರಿತು ವಿಷದವಾದ ಚರ್ಚೆ, ನಗೆಯ ಹಿಂದಿನ ನೋವುಗಳು, ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಪಟ್ಟಂಥ ಹದಗೆಟ್ಟಿರುವ ಸ್ಥಿತಿಗತಿಗಳ ವಿವೇಚನೆಯು ಇಲ್ಲಿ ಅಧ್ಯಯನಕ್ಕೊಳಪಟ್ಟಿರುವ ಬಹುಮುಖ್ಯ ಸಂಗತಿಗಳಾಗಿವೆ.

ಅಧ್ಯಾಯ ೫ ರಾ.ಕು.ಅವರ ಲಲಿತ ಪ್ರಬಂಧಗಳಲ್ಲಿನ ಭಾಷೆ ಮತ್ತು ಶೈಲಿ

ರಾ.ಕು.ಅವರ ಪ್ರಬಂಧಗಳಲ್ಲಿ ಕಂಡುಬರುವ ಭಾಷಿಕ ವಿಚಾರಗಳಾದ ಆಡುಭಾಷೆಯ ಶಬ್ದಗಳ ಹೇರಳ ಪ್ರಯೋಗ, ಜೀವನದ ಸಹಜ ಸಂಗತಿಗಳನ್ನು ಸಾಹಿತ್ಯಿಕರಿಸಿದ ಕ್ರಮ, ವ್ಯಂಗ್ಯ, ವಿಡಂಬನೆ, ತರ್ಕ, ಕಟೋಕ್ತಿ ಉಪಮೆಗಳು, ಹಾಸ್ಯಗಳ ಸಮಂಜಸ ಸಮೀಕರಣ, ಹಳಗನ್ನಡ ಕಾವ್ಯೋಕ್ತಿಗಳು, ಕನ್ನಡದ ನಿಘಂಟಿನಲ್ಲಿ ದಾಖಲಾಗದೆ ಇರುವ ಹೊಸ ಹೊಸ ಕನ್ನಡ ಶಬ್ದಗಳ ಶೋಧದ ಜೊತೆಯಲ್ಲಿ ಅವುಗಳನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳುವಿಕೆ, ನಿರೂಪಣಾಶೈಲಿ ಮೊದಲಾದ ವೈವಿಧ್ಯಮಯ ಲಲಿತಗಂಭೀರವಾದ ಇವರ ಪ್ರಬಂಧ ರಚನಾ ಶೈಲಿ ಇನ್ನು ಮೊದಲಾದ ಅಂಶಗಳನ್ನು ಕುರಿತು ಸಾಧಾರವಾಗಿ, ಸೋದಾರಣವಾಗಿ ಇಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ೬ ಸಮಾರೋಪ

ಈ ಭಾಗದಲ್ಲಿ ಈ ಹಿಂದಿನ ಐದು ಅಧ್ಯಾಯಗಳ ಅಧ್ಯಯನದ ಹಿನ್ನೆಲೆಯಲ್ಲಿ ಕಂಡುಕೊಂಡಂತಹ ರಾ.ಕು.ಅವರ ಲಲಿತ ಪ್ರಬಂಧಗಳ ವೈಶಿಷ್ಟ್ಯ ಹಾಗೂ ಪ್ರಬಂಧ ಪ್ರಪಂಚಕ್ಕೆ ರಾ.ಕು.ಅವರು ನೀಡಿದ ಕಾಣಿಕೆ, ಅವರದೇ ಆದ ಅನನ್ಯತೆಗಳನ್ನು ಕುರಿತು ವಿವೇಚಿಸಲಾಗಿದೆ.

ಕೊನೆಯದಾಗಿ ಅನುಬಂಧ ಭಾಗದಲ್ಲಿ 'ರಾ.ಕು.ಅವರ ಜೀವನದ ಮುಖ್ಯ ಘಟನೆಗಳು', 'ರಾ.ಕು.ಅವರ ವಂಶಾವಳಿ', 'ಕೃತಿ ಸೂಚಿ', 'ರಾ.ಕು.ಅವರ ಲಲಿತ ಪ್ರಬಂಧ ಸಾಹಿತ್ಯ'ವನ್ನು ಕುರಿತು ವಿವಿಧ ವಿದ್ವಾಂಸರು ನೀಡಿದ ಅಭಿಪ್ರಾಯಗಳನ್ನು ಕ್ರೋಢೀಕರಿಸಲಾಗಿದೆ. ಕೊನೆಯಲ್ಲಿ ಅಧ್ಯಯನಕ್ಕೆ ಪೂರಕವಾಗಿ ಉಪಯೋಗಿಸಿದ ಪರಾಮರ್ಶನ ಗ್ರಂಥಗಳ ಸೂಚಿ'ಯನ್ನು ನೀಡಲಾಗಿದೆ.

ಅಧ್ಯಾಯ ೨

ರಾ.ಕು.ಅವರ ಜೀವನ ಮತ್ತು ಸಾಧನೆ

೨

ರಾ.ಕು.ಅವರ ಜೀವನ ಮತ್ತು ಸಾಧನೆ

ಕನ್ನಡ ಸಾಹಿತ್ಯದಲ್ಲಿ ಹೊಸ-ಹೊಸ ಸಾಹಿತ್ಯ ರೂಪಗಳು ವೈವಿಧ್ಯತೆಗಳಿಂದ ಸಮೃದ್ಧವಾಗಿ ಬೆಳೆಯುತ್ತಿದೆ. ಹೊಸಗನ್ನಡ ಸಾಹಿತ್ಯದಲ್ಲಿ ಅನೇಕ ಪಾಶ್ಚಿಮಾತ್ಯ ಸಾಹಿತ್ಯ ರೂಪಗಳು ಕನ್ನಡದಲ್ಲಿ ಬೆಳೆದುಬಂದವು. ಅವುಗಳೆಂದರೆ ಕಾದಂಬರಿ, ಕಾವ್ಯ, ಸಣ್ಣಕಥೆ, ಪ್ರಬಂಧ, ವಿಮರ್ಶೆ, ಚುಟುಕು, ಆತ್ಮಚರಿತ್ರೆ, ಜೀವನ ಚರಿತ್ರೆ, ಇಂಥ ಹತ್ತು ಹಲವು ಜನಸಾಮಾನ್ಯ ಸಾಹಿತ್ಯರೂಪಗಳು ಆಧುನಿಕ ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಬೆಳೆದು ಬಂದವು. ಅಷ್ಟೇ ಅಲ್ಲದೆ ಆಧುನಿಕ ಕನ್ನಡ ಸಾಹಿತ್ಯವು ಪ್ರಮುಖವಾಗಿ ನವೋದಯ, ನವ್ಯ, ಪ್ರಗತಿಶೀಲ, ದಲಿತ-ಬಂಡಾಯ ಎಂಬ ಸಾಹಿತ್ಯ ಘಟ್ಟಗಳಾಗಿ ಅತ್ಯಂತ ಜನಪ್ರಿಯವಾಗಿ ಸಾಹಿತ್ಯ ಬೆಳೆದು ಬಂದಿತು. ಇದರ ಫಲವೇ ಇಂದು ಈ ಎಲ್ಲ ಸಾಹಿತ್ಯ ರೂಪಗಳು ಅತ್ಯಂತ ಹುಲಸಾಗಿ ಬೆಳೆಯಲು ಸಾಧ್ಯವಾಯಿತು. ಇಂಥ ಜನಪ್ರಿಯ ಸಾಹಿತ್ಯರೂಪ ಗದ್ಯರೂಪದಲ್ಲಿರುವ ಭಾವಪ್ರಧಾನವಾದ ಲಲಿತ ಪ್ರಬಂಧವು ಆಧುನಿಕ ಸಾಹಿತ್ಯ ರೂಪಗಳಲ್ಲಿ ಒಂದಾಗಿ ಕನ್ನಡದಲ್ಲಿ ಬೆಳೆದು ಬಂದಿತು.

ಲಲಿತ ಪ್ರಬಂಧ ಹೊಸಗನ್ನಡ ಸಾಹಿತ್ಯದ ಒಂದು ವಿಶಿಷ್ಟ ಸಾಹಿತ್ಯ ರೂಪವಾಗಿದ್ದು, ಕತೆ, ಕಾದಂಬರಿಗಳು ರೂಪಗೊಂಡಂತೆ ಪಾಶ್ಚಿಮಾತ್ಯರ ಪ್ರೇರಣೆಯಿಂದಲೇ ನಮ್ಮ ಗದ್ಯಸಾಹಿತ್ಯದಲ್ಲಿ ಆಕಾರ ಗೊಂಡ ಪ್ರಕಾರವಿದು. ಅತ್ಯಂತ ಲವಲವಿಕೆಯ ಹಾಗೂ ರಂಜನಿಯವಾದ ಈ ಪ್ರಕಾರ ನವೋದಯದ ಮಹತ್ವದ ಲೇಖಕರಿಂದ ಅರ್ಥಪೂರ್ಣವಾಗಿಯೇ ಬೆಳೆದು ಬಂದಿತು. ಕುವೆಂಪು, ಬೇಂದ್ರೆ, ಬಿ.ಸೀ. ನಾ.ಕಸ್ತೂರಿ, ಶ್ರೀರಂಗ, ಎ.ಎನ್.ಮೂರ್ತಿರಾವ್, ರಾ.ಕು. ರಾ.ಯ.ಧಾರವಾಡಕರಗಳಂಥ ಸಾಹಿತಿಗಳು, ಈ ಲಲಿತ ಪ್ರಬಂಧ ಸಾಹಿತ್ಯವನ್ನು ತಮ್ಮ ಕೃಷಿಕ್ಷೇತ್ರವನ್ನಾಗಿ ಮಾಡಿಕೊಂಡವರು ಅಂತೆ 'ರಾ.ಕು. ಅವರು ಕೂಡಾ ಒಬ್ಬರಾಗಿ ಈ ಸಾಹಿತ್ಯ ಪ್ರಕಾರಕ್ಕೆ ತಮ್ಮನ್ನು ತಾವು ಭಾವಪೂರ್ಣವಾಗಿ ಅರ್ಪಿಸಿಕೊಂಡವರು ಹಾಗೂ ಇದೇ ಕ್ಷೇತ್ರದಲ್ಲಿ ತಮ್ಮ ಯಶಸ್ಸಿನ ಗಾಳಿಪಟವನ್ನು ಹಾರಿಸಿದವರು. ರಾ.ಕು. ಅವರು ಅದಮ್ಯ ಜೀವನ ಪ್ರೀತಿಯಿಂದಲೇ ಒಂಬತ್ತು ದಶಕಗಳನ್ನು ಕಳೆದಿದ್ದಾರೆ. ಈ ಸಾರ್ಥಕ ಯಶಸ್ವಿ ಬದುಕಿನಲ್ಲಿ ಅವರ ಸಾಧನೆಗಳು ಹಲವಾರು ಆದರೆ ಕನ್ನಡ ಸಾಹಿತ್ಯದಲ್ಲಿ ಪ್ರಬುದ್ಧರೆನ್ನುವ ಅನೇಕ ಸಾಹಿತಿ ಮಹನಿಯರ ಎಲೆಮರೆಕಾಯಿಯಂತೆ ತಮ್ಮ ಬದುಕನ್ನು ಕಳೆದವರು ಅಂಥವರ ಸಾಲಿನಲ್ಲಿ ರಾ.ಕು.

ಅವರು ಒಬ್ಬರಾಗಿದ್ದಾರೆ. ಬಹುಮುಖ್ಯವಾಗಿ ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಇವರ ಕೃತಿಗಳು ವಿಶಿಷ್ಟವಾದ ಸ್ಥಾನದಲ್ಲಿ ನಿಲ್ಲುವಂತೆ ಮಾಡಿದ ಅವರ 'ಗಾಳಿಪಟ', 'ದೇವಕನ್ಯೆ', 'ಶೇಷವಿಶೇಷ' ಇಂಗ್ಲೀಷ್, ಸಂಸ್ಕೃತ ಭಾಷೆಗಳ ಪಾಂಡಿತ್ಯವನ್ನು ಯೋಚಿಸಿ ಕನ್ನಡದಲ್ಲಿ ಬರೆದ ಅವರಂಥ ಸವ್ಯಸಾಚಿಗಳು ಅತಿವಿರಳ. ಈ ಕಾರಣಕ್ಕೆ ರಾ.ಕು. ಅವರ ಬದುಕು-ಬರಹಗಳೆರಡು ಯುವ ಪೀಳಿಗೆಗೆ ಅಧ್ಯಯನ ಯೋಗ್ಯವಾಗಿ ಆದರ್ಶಪ್ರಾಯವಾಗಿವೆ.

೨.೧. ಬಾಲ್ಯ ಜೀವನ

ಸಾಹಿತ್ಯ ಪ್ರಪಂಚಕ್ಕೆಲ್ಲಾ ರಾ.ಕು. ಎಂದೇ ಖ್ಯಾತರಾದ ಶ್ರೀ ರಾಮಚಂದ್ರ, ವೆಂಕಟೇಶ ಕುಲಕರ್ಣಿ ಅವರು 'ಕರ್ನಾಟಕ ಕಥಾಮಂಜರಿ' ಕರ್ತೃ ಕನ್ನಡದ ಮಹಾಕವಿ ಗದುಗಿನ ವೀರನಾರಾಯಣಪ್ಪನ ತವರು ಜಿಲ್ಲೆಯಾದ ಗದಗ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿಯವರು. ಇವರು ದಿನಾಂಕ ೪-೧-೧೯೧೮ರಂದು (ಶಾಲಾದಾಖಲಾತಿಯ ಪ್ರಕಾರ) ತಮ್ಮ ತಾಯಿ 'ಯಮುನಾಬಾಯಿಯವರ ತವರೂರ ಆದ ಹುಬ್ಬಳ್ಳಿ'ಯಲ್ಲಿ ಅಬ್ಬಿಗೇರಿಯ ಶಾನಭೋಗರಾದ ಕುಲಕರ್ಣಿಯವರ ವಂಶದ 'ವೆಂಕಟೇಶ' ಹಾಗೂ 'ಯಮೂನಾಬಾಯಿ' ಎಂಬ ಬ್ರಾಹ್ಮಣ ದಂಪತಿಗಳ ೧೪ನೇ ಮಗನಾಗಿ ಜನಿಸಿದರು.

ರಾ.ಕು. ಅವರ ಅಜ್ಜ ರೋಣ ತಾಲೂಕಿನ ಕಂದಾಯ ಇಲಾಖೆಯಲ್ಲಿ ಅಬ್ಬಿಗೇರಿಯ ಶಾನಭೋಗರಾಗಿದ್ದರು. ಶಿಸ್ತು, ಸಂಸ್ಕೃತಿ, ಸಂಪ್ರದಾಯ ಸಹಬಾಳ್ವೆಯನ್ನು ಮೆಚ್ಚಿಕೊಂಡು ಹಳ್ಳಿ ಬದುಕಿನ ಸೊಗಡನ್ನು ಮೈಗೂಡಿಸಿಕೊಂಡವರು. ಸ್ವತಃ ಈ ಜೀವನ ಪದ್ಧತಿಯನ್ನು ಸವಿದವರು. ಒಂದು ಕಡೆ ಆಧುನಿಕತೆಯ ಕೂಸು ವಿಜ್ಞಾನ ಬೆಳಯುತ್ತಲೇ ಅದರೊಂದಿಗೆ ಮಾನವ ಬದುಕು ದಿನದಿಂದ ದಿನಕ್ಕೆ ಯಾಂತ್ರೀಕರಣಗೊಂಡಂತೆಲ್ಲಾ, ಹಳ್ಳಿಗಾಡಿನ ಮಾನವ ಸಹಜ ಸಂಬಂಧಗಳು ಸೆಳೆತ, ಅಕ್ಕರೆ, ವಾತ್ಸಲ್ಯಗಳು ವ್ಯವಹಾರಿಕ ಜಗತ್ತಿನಲ್ಲಿ ಮುಸುಕಾಗುತ್ತ ಸಾಗಿರುವುದು ವಿಷಾದನೀಯವೆಂದೇ ಹೇಳುತ್ತಿದ್ದರು. ಇದರಿಂದಾಗಿಯೇ ಇವರ ಅಜ್ಜನವರು ಪಟ್ಟಣದ ಬದುಕು ಎಂದರೆ ಪೆಟ್ಟಿಗೆಯ ಬದುಕಿನಂಥೆ, ಸಂಕುಚಿತ ಸ್ವಾರ್ಥಮಯ ಬದುಕೆಂದು ನಗರ ಪ್ರದೇಶದ ಜನರ ಬದುಕನ್ನು ವಿರೋಧಿಸುತ್ತಾ ತಮ್ಮ ಗ್ರಾಮ್ಯಬದುಕು, ಪರಿಸರ ಸೌಹಾರ್ದ ಬದುಕನ್ನು ಮೆಚ್ಚಿಕೊಂಡಿದ್ದರು. ಖಾಂಕ್ರೀಟ್ ನಾಡಿನಲ್ಲಿ ನೌಕರಿ ಮಾಡುವುದೆಂದರೆ ಆಗತೀರದ ಸಮಸ್ಯೆ. ಒಟ್ಟಾರೆ ಪಟ್ಟಣ ಬದುಕಿನ ವಿರೋಧಿ ಧೋರಣೆಯಾಗಿತ್ತು. ರಾ.ಕು. ಅವರ ತಂದೆ ವೆಂಕಟೇಶ ಕುಲಕರ್ಣಿಯವರು ಆಗಿನ ಮೇಟ್ರುಕುಲೇಷನ್ ಪಾಸಾಗಿ 'ರೋಣ' ಪಟ್ಟಣದಲ್ಲಿ ನೌಕರಿಯನ್ನು ಮಾಡುತ್ತಿದ್ದರು. ಆದರೆ ಪಟ್ಟಣದಲ್ಲಿನ ಉದ್ಯೋಗವನ್ನು ತಂದೆ ಬೇಡವೆಂದಿದ್ದರು. ಆದರೂ ಇವರು ಹಟಮಾಡಿ ನೌಕರಿಯನ್ನು ಮಾಡಲು ಬಂದಿದ್ದರು. ಆಗ ಅವರ ತಂದೆ ಮಗನನ್ನು ಉಪಾಯದಿಂದ 'ಅಜಾರಿ'(ನನ್ನ ಆರೋಗ್ಯ ಸ್ಥಿತ ಚೆನ್ನಾಗಿಲ್ಲ) ಎಂದು ತಂತಿ ಸಂದೇಶದ ಸುಳ್ಳುನೇವದ ಮೇಲೆ ಮಗನನ್ನು ಊರಿಗೆ ಕರೆಸಿಕೊಂಡರು. ಸುಮಾರು ೫ ರಿಂದ ೬ ತಿಂಗಳವರೆಗೆ ತಮ್ಮನ್ನು ಬಿಟ್ಟು ಮಗ ಎಲ್ಲಿಯೂ

ಹೋಗಲಾರದ ಹಾಗೆ ಉಪಾಯ ಮಾಡಿದರು. ಇದರ ಫಲವಾಗಿ ವೆಂಕಟೇಶ ಕುಲಕರ್ಣಿಯವರು ಉತ್ತಮ ಸಂಬಳವಿರುವ ಪಟ್ಟಣದ ಪ್ರಥಮ ನೌಕರಿಯನ್ನು ಕಳೆದುಕೊಂಡರು. ಮತ್ತೊಂದು ಸಾರಿ ಬೇರೆ ಪಟ್ಟಣದಲ್ಲಿ ವೆಂಕಟೇಶರವರು ನೌಕರಿಗೆಂದು ಸೇರಿದರು. ಆಗಲು ಇದನ್ನು ಅವರ ತಂದೆಯ ಬಲವಾಗಿ ವಿರೋಧಿಸಿದರು. ಮತ್ತೆಂದೂ ಪಟ್ಟಣದ ಉದ್ಯೋಗ ಮಾಡುವ ಆಸೆಯನ್ನು ಮಾಡಕೂಡದೆಂದರು, ಇವರನ್ನ ಜರಿದರು. ಇದರಿಂದ ತುಂಬ ಬೇಸತ್ತರು ಆಗಲು ಇದ್ದ ನೌಕರಿ ಬಿಡುವಂತೆ ಹಟಮಾಡಿ ಬಿಡಿಸಿದರು. ಇದರಿಂದ ಮನನೊಂದ ಇವರು ಕೆಲಸಕ್ಕೆ ಹೋಗದೆ ಮನೆಯಲ್ಲಿ ಉಳಿಯತೊಡಗಿದರು. ಆದರೆ ಆಗ ಮನೆಯ ಆರ್ಥಿಕ ಪರಿಸ್ಥಿತಿ ದಿನೇ ದಿನೇ ಅಷ್ಟೊಂದು ಚೆನ್ನಾಗಿರದ ಕಾರಣ ಬೇರೆ ದಾರಿಯೇ ತೋರದಿದ್ದಾಗ ಬದುಕು ಸ್ವಾವಲಂಬಿಯಾಗಿ ನಡೆಯಬೇಕೆಂಬ ಆಪೇಕ್ಷೆಯಿಂದಾಗಿ ವೆಂಕಟೇಶ ಕುಲಕರ್ಣೀಯವರು ತಮ್ಮ ತಂದೆಯ ಮಾತನ್ನು ಧಿಕ್ಕರಿಸಿ, ಜಗಳವಾಡಿ ಅಬ್ಬಿಗೇರಿಯನ್ನು ಬಿಟ್ಟು ಗದಗಿಗೆ ಬಂದು ವಾಸಮಾಡತೊಡಗಿದರು. ಆಗ ಉಪಜೀವನಕ್ಕಾಗಿ ಉದ್ಯೋಗ ಅನಿವಾರ್ಯವಾಯಿತು. ಗದಗನಲ್ಲಿ ಆಗ ಬ್ರಿಟೀಷರ ಆಡಳಿತವಿದ್ದ ಕಾರಣ, ಮಿಶನರಿಗಳೇ ಶಿಕ್ಷಣವನ್ನು ಕೊಡುತ್ತಿದ್ದವು. ಈ ಮಿಶನರಿಗಳಲ್ಲಿ ಕನ್ನಡ ಕಲಿಸಲೆಂದು ಜೊತೆಗೆ ಸರಕಾರಿ ಪ್ರೌಢಶಾಲೆಯಲ್ಲಿ ಇಂಗ್ಲೀಷ್ ಪಾಠ ಹೇಳಿ ಜೀವನ ನಡೆಸುತ್ತಿದ್ದರು.

ವೆಂಕಟೇಶ ಕುಲಕರ್ಣಿಯವರು ಅಷ್ಟೊತ್ತಿಗಾಗಲೇ ಹುಬ್ಬಳ್ಳಿ ಮೂಲದವರಾದ 'ಯಮನಾಬಾಯಿ' ಯನ್ನು ಅವರ ಜೀವನ ಸಂಗಾತಿಯಾಗಿ ಮಾಡಿಕೊಂಡಿದ್ದರು. ಏಕೋ ಏನೋ ಇವರ ಕುಟುಂಬಕ್ಕೆ ಅನೇಕ ವಿಘ್ನಗಳು ಕಾಡತೊಡಗಿದವು. ಈ ದಂಪತಿಗಳಿಗೆ ಮೇಲಿಂದ ಮೇಲೆ ಒಂದರಂತೆ ಹಲವು ತೊಂದರೆ, ಕಷ್ಟಗಳು ಬಂದವು. ಅಷ್ಟೆ ಅಲ್ಲದೆ ಹುಟ್ಟಿದ ಮಕ್ಕಳೆಲ್ಲವು ತೀರಿಕೊಳ್ಳುತ್ತಿದ್ದವು. ಇದರಿಂದ ಬೇಸತ್ತ ವೆಂಕಟೇಶ ಕುಲಕರ್ಣಿ ಮನನೊಂದು ಜಾತಕ, ಸಂಪ್ರದಾಯ, ಆಚಾರಗಳಂತಹ ಸತ್ ಸಂಪ್ರದಾಯಗಳನ್ನು ಧಿಕ್ಕರಿಸಿ, ದೇವರಲ್ಲಿ ನಂಬಿಕೆಯನ್ನು ಕಳೆದುಕೊಂಡು ನಾಸ್ತಿಕರಾಗಿ ಬದುಕ ತೊಡಗಿದರು. ಹೀಗೆ ಯಾವುದರಲ್ಲಿಯೂ ನಂಬಿಕೆ, ವಿಶ್ವಾಸ ಇಲ್ಲದವರಾಗಿ ಅದರಲ್ಲಿಯೂ ಜಾತಕಗಳನ್ನು ಬರೆಸುವುದನ್ನು ನಿಲ್ಲಿಸಿ ಬಿಟ್ಟಿದ್ದರು. ಇದರಿಂದಾಗಿ ರಾ.ಕು. ಅವರು ಹುಟ್ಟಿದ ದಿನಾಂಕದಲ್ಲಿ ಗೊಂದಲವಿದ್ದು ಸರಿಯಾಗಿ ಇವರ ತಂದೆ ನಮೂದಿಸದೆ ಇರುವುದೇ ಇದಕ್ಕೆ ಕಾರಣ. ಆದ್ದರಿಂದಲೇ ಇಂದು ರಾ.ಕು.ಅವರ ಜನ್ಮಾ ದಿನಾಂಕವನ್ನು ಶಾಲಾ ದಾಖಲಾತಿಯ ಪ್ರಕಾರವೇ ಗುರುತಿಸಲಾಗಿದೆ. ರಾ.ಕು.ಅವರೇ ಹೇಳಿದಂತೆ ಅವರ ಹುಟ್ಟಿದ ದಿನಾಂಕವು ೪-೧-೧೯೧೮ ನಿರ್ದಿಷ್ಟವಾದುದಲ್ಲ. ಅವರ ತಂದೆ-ತಾಯಿಗಳಿಗೆ ೧೦ ಜನ ಮಕ್ಕಳು ಬೇಗನೆ ತೀರಿಕೊಂಡಿದ್ದರಿಂದ ಮನನೊಂದಿದ್ದ ಅವರ ತಂದೆ ಇವರ ಜಾತಕವನ್ನು ಬರೆಸುವ ಮನಸಾಗಲಿಲ್ಲವಂತೆ. ಬದುಕುಳಿದ ನಾಲ್ಕು ಜನ ಮಕ್ಕಳಲ್ಲಿ ಇಬ್ಬರು ಅಕ್ಕಂದಿರು, 'ಸುಂದರಕ್ಕಾ' 'ಅಂಬಕ್ಕಾ', ಓರ್ವ ಅಣ್ಣ 'ಗೋಪಾಲರಾವ್' ಕೊನೆಯವರೆ 'ರಾಮಚಂದ್ರ'ರು. ರಾ.ಕು. ಚಿಕ್ಕವರು ಇರುವಾಗ ಅವರ ಕುಟುಂಬವು ತುಂಬಾ ಕಷ್ಟದಲ್ಲಿತ್ತು. ರಾ.ಕು. ಬಾಲ್ಯ ಜೀವನ ಎಂಬುವುದು ಬರಿ

ದುಃಖದಿಂದ ಕೂಡಿದ ಸರೋವರವಾಗಿತ್ತು. ರಾ.ಕು. ಅವರು ತಮ್ಮ ಬಾಲ್ಯ ಜೀವನದ ನೆನಪುಗಳನ್ನು ಆಗಾಗ್ಗೆ ಸ್ಮರಿಸಿಕೊಳ್ಳುತ್ತಿದ್ದರು. ಶಿಕ್ಷಣದಲ್ಲಿ ಮಾತ್ರ ರಾ.ಕು. ಅವರ ಕುಟುಂಬ ಶ್ರೀಮಂತಿಕೆ ಎಲ್ಲಿತ್ತು. ಬಾಲ್ಯ ಜೀವನ ಮುಂದೆ ಸಮೃದ್ಧವಾಗಿ ಬೆಳೆಯುವಲ್ಲಿ ಶಿಕ್ಷಣ ಮಹತ್ತರ ಪಾತ್ರವಹಿಸಿತು.

೨.೨. ಶಿಕ್ಷಣ

ವ್ಯಕ್ತಿಯ ವ್ಯಕ್ತಿತ್ವ ವಿಕಸನವಾಗಲು ಹಾಗೂ ಜೀವನ ನೆಲೆಕಂಡುಕೊಳ್ಳಲು ಶಿಕ್ಷಣ ಅವಶ್ಯಕವಾಗಿ ಬೇಕು. ಆದರೆ ರಾ.ಕು. ಅವರ ಪ್ರಾರಂಭಿಕ ಶೈಕ್ಷಣಿಕ ಜೀವನ ಮಾತ್ರ ಸ್ಥಿರವಾಗಿರಲಿಲ್ಲ. ಅದಕ್ಕೆ ಅವರ ಕೌಟುಂಬಿಕ ತೊಂದರೆಯೇ ಕಾರಣ. ತಂದೆ ಶಾನಭೋಗರ ಮಗನಾಗಿದ್ದರೂ ಮನೆಯಿಂದ ಆರ್ಥಿಕವಾಗಿ ಯಾವುದೇ ರೀತಿಯಲ್ಲಿಯೂ ಸಹಾಯ ಬಾರದೆ ಇರುವುದು. ಏಕೆಂದರೆ 'ವೆಂಕಟೇಶ ಕುಲಕರ್ಣಿಯವರು ತಮ್ಮ ತಂದೆಯ ಮನಸ್ಸಿಗೆ ವಿರುದ್ಧವಾಗಿ ಪಟ್ಟಣ ನೌಕರಿ ಸೇರಿದ್ದರಿಂದಾಗ, ಅವರು ಯಾವುದೇ ರೀತಿಯ ಸಹಾಯ ಮಾಡಲಿಲ್ಲ. ಆಗ ರಾ.ಕು. ಅವರ ಮನೆಯಲ್ಲಿ ಕಿತ್ತು ತಿನ್ನುವಂತಹ ಬಡತನ. ಇಂಥ ಸಂದರ್ಭದಲ್ಲಿ ಅವರು ಜೀವನ ಸಾಗಿಸಿದರು. ಇದರ ಪರಿಣಾಮವಾಗಿ ರಾ.ಕು. ಕೆಲವು ಶೈಕ್ಷಣಿಕ ವರ್ಷಗಳನ್ನು ಕಳೆದುಕೊಳ್ಳಬೇಕಾಯಿತು. ಶಾಲೆಗೆ ಹೋಗಿ ಫೀ ತುಂಬಲಾಗದೆ ಇರುವುದೇ ಇದಕ್ಕೆ ಕಾರಣ.

ಉತ್ತಮ ವಿದ್ಯಾರ್ಥಿಯಾದ ಅವರು 'ಬೆಳೆಯುವ ಸಿರಿ ಮೊಳಕೆಯಲ್ಲಿಯೇ ನೋಡು' ಎಂಬಂತೆ ಇವರ ಬಾಲ್ಯದಲ್ಲಿಯೇ ಇವರಲ್ಲಿರುವ ಪ್ರತಿಭೆ ಅಗಾಧವಾದದ್ದು. ಅವರು ಹೇಗೂ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣವನ್ನು ಗದಗನಲ್ಲಿ ಪಡೆದರು. ಶಾಲೆಯಲ್ಲಿ ಆದರ್ಶ ಹಾಗೂ ಉತ್ತಮ ಪ್ರತಿಭಾವಂತ ವಿದ್ಯಾರ್ಥಿಯೆಂಬ ಹೆಸರು ಗಳಿಸಿದ್ದರು. ಇದರ ಫಲವಾಗಿ ಅವರಿಗೆ ಪ್ರೌಢಶಿಕ್ಷಣಕ್ಕಾಗಿ ಈ ಶಾಲೆಯವರೇ ಬಡವಿದ್ಯಾರ್ಥಿಗಳಿಗೆ ಕೊಡಮಾಡುವ ಸಹಾಯ ಧನದಿಂದ ಶಾಲಾ ಫೀ ಹಣ ತುಂಬಿ ಶಾಲೆಯ ಶಿಕ್ಷಣವನ್ನು ಪಡೆದರು. ಮುಂದೆ ಶಾಲೆಗೆ ಮೊದಲಿಗರಾಗಿ ಮೆಟ್ರೀಕುಲೇಷನ್ ಪಾಸಾಗಿ ಶಿಕ್ಷಣವನ್ನು ಮುಂದುವರಿಸಿದರು. ಶಾಲೆಯವರು ಕೊಡುವ ಪ್ರತಿತಿಂಗಳ ವಿದ್ಯಾರ್ಥಿ ಶಿಷ್ಯವೇತನ ರೂಪಾಯಿ ೧೦ಕ್ಕೆ ಅರ್ಹರಾದರು. ರಾ.ಕು. ಹೇಗೆ ಕಷ್ಟುಪಟ್ಟು ತಮ್ಮ ಶಿಕ್ಷಣವನ್ನು ಮೆಟ್ರುಕುಲೇಷನ್‌ವರೆಗೆ ಪಡೆಯಲು ಅವರಿಗೆ ಶಾಲೆಗಳು ನೆರವಾದವು. ಮುಂದೆ ಉನ್ನತ ಶಿಕ್ಷಣವನ್ನು ಧಾರವಾಡಕ್ಕೆ ಹೋಗಿ ಕಲಿಯುವ ಬೆಂಬಲವಿರಲಿಲ್ಲ. ಈ ರೀತಿ ತೊಂದರೆಗಳು ಬಂದಾಗ ರಾ.ಕು. ತಮ್ಮ ಸ್ನೇಹಿತರೊಡನೆ ಬಾಲ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿರುವಾಗ ಆಟವಾಡಲೆಂದು ಹೋಗುತ್ತಿದ್ದ ಭೀಷ್ಮಕೆರೆಯ ದಂಡೆಯ ಮೇಲೆ ಕುಳಿತು ತುಂಬಾ ಯೋಚನೆ ಮಾಡುವುದು. ನೋವು ದುಃಖಗಳನ್ನು ಹೇಳಿಕೊಳ್ಳುವುದು, ಸ್ನೇಹಿತರೊಡನೆ ಗದಗನ್ನು ಸುತ್ತಾಡುತ್ತಿದ್ದರು.

ಧಾರವಾಡಕ್ಕೆ ಹೋಗಿ ಕಾಲೇಜು ಶಿಕ್ಷಣವನ್ನು ಪಡೆಯುವುದು. ನನ್ನ ಕನಸೆಂದು ಬೇಸರಗೊಂಡು ನಿರುತ್ಸಾಹಿಗಳಾಗಿದ್ದರು. ಕಾರಣ ಆರ್ಥಿಕ ಪರಿಸ್ಥಿತಿ ಚೆನ್ನಾಗಿರದೆ ಇರುವುದು. ಆಗ ಧಾರವಾಡಕ್ಕೆ

ಹೋಗುವುದೆಂದರೆ ಅಪಾರ ಹಣದ ಅವಶ್ಯಕತೆ ಇತ್ತು. ಆದ್ದರಿಂದ ಅಲ್ಲಿಗೆ ಹೋಗುವುದು ಹೇಗೆ? ಅಂದುಕೊಂಡಿದ್ದರು. ಪ್ರತಿಭಾನ್ವಿತರಾದ ಇವರನ್ನು ಸಮಯಕ್ಕೆ ಸರಿಯಾಗಿ ಗುರುತಿಸಿ ಇವರ ನೆರವಿಗೆ ಬಂದವರು ಆತ್ಮೀಯ ಸ್ನೇಹಿತ 'ವರದರಾಜ ಹುಯಿಲಗೋಳರು' ಇವರು ತಮ್ಮ ಸೋದರ ಮಾವ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದ ಡಾ. ರಂ.ಶ್ರೀ.ಮುಗಳಿಯವರು ೧೯೪೦ರಲ್ಲಿ ಅಪದ್ಬಾಂಧವರಂತೆ ಬಂದು ಸಹಾಯ ಸಹಕಾರ ನೀಡುವುದರ ಜೊತೆಯಲ್ಲಿ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರೆಸಲು ಅನುವು ಮಾಡಿಕೊಟ್ಟರು. ಅಷ್ಟೇ ಅಲ್ಲದೆ ರಂ.ಶ್ರೀ.ಮುಗಳಿಯವರು ರಾ.ಕು.ಅವರಲ್ಲಿರುವ ಅಪಾರ ವಿದ್ವತ್ತು, ಜ್ಞಾನವನ್ನು ಅರಿತು ಪ್ರತಿಭಾವಂತರಾದ ಇವರಿಗೆ ಉತ್ತಮ ವಿದ್ಯಾರ್ಥಿಗಳಿಗೆ ದೊರೆಯಬೇಕಾದ ಶಿಷ್ಯವೇತನವು ದೊರೆಯುವಂತೆ ನೋಡಿಕೊಂಡರು. ಇದನ್ನು ರಾ.ಕು. ಅವರ ಜೀವನದ ಅತಿ ಅಮೂಲ್ಯ ಘಟ್ಟವೆಂದು ಗುರುಗಳಾದ ಡಾ.ರಂ.ಶ್ರೀ.ಮುಗಳಿಯವರು ಹೇಳಿದ್ದರು. ೧೯೪೨ರಲ್ಲಿ ಸಾಂಗ್ಲಿವಿಲ್ಲಿಂಗ್ಡನ್ ಕಾಲೇಜನಲ್ಲಿ ಇವರಿಗೆ ಉತ್ತಮವಾದ ಸಾಹಿತ್ಯದ ಸ್ನೇಹಿತರು ಇವರಿಗೆ ದೊರೆಯುವುದರ ಜೊತೆಗೆ ಒಳ್ಳೆಯ ಸಾಹಿತ್ಯದ ಪರಿಸರವೂ ಇಲ್ಲಿ ಸೃಷ್ಟಿಯಾದಂತಿತ್ತು. ಹಿರಿಯರಾದ ರಾ.ಯ.ಧಾರವಾಡಕರಂಥವರು ತಮ್ಮ ಸ್ನೇಹಿತರಾಗಿದ್ದರು. ಇದರ ಫಲವಾಗಿಯೇ ಸಾಂಗ್ಲಿ ವಿಲ್ಲಿಂಗ್ಡನ್ ಕಾಲೇಜಿನ ಇಂಗ್ಲೀಷ್ ಸಂಘ(೧೯೪೨)ದಲ್ಲಿ ರಾ.ಕು. ಅವರು ಒಕ್ಕೂಟದ ಸದಸ್ಯರಾಗಿ ನೇಮಕಗೊಂಡಿದ್ದರು ಎಂಬುದು ವಿಶೇಷವಾಗಿತ್ತು. ಇದೇ ವೇಳೆ ಸಾಂಗ್ಲಿಯಲ್ಲಿ ಡಾ.ವಿ.ಕೃ.ಗೋಕಾಕರು ಕಾಲೇಜಿನ ಪ್ರಿನ್ಸಿಪಾಲರಾಗಿದ್ದರು. ರಾ.ಕು.ನಲ್ಲಿರುವ ಇಂಗ್ಲೀಷ್‌ನ ಜ್ಞಾನ, ಪ್ರತಿಭೆ, ಶಬ್ದಬಂಡಾರ ಭಾಷೆಯಲ್ಲಿನ ಪ್ರಾವಿಣ್ಯತೆ, ಹೆಚ್ಚು ಹೆಚ್ಚು ಅಂಕಗಳನ್ನು ಇದೇ ವಿಷಯದಲ್ಲಿ ಪಡೆಯುತ್ತಿದ್ದದು. ವಿ.ಕೃ.ಗೋಕಾಕರು ಶಿಷ್ಯನ ಬಗ್ಗೆ ಈ ಎಲ್ಲ ವಿಷಯಗಳನ್ನು ಅತ್ಯಂತ ಸೂಕ್ಷ್ಮವಾಗಿ ಅರಿತಿದ್ದರು. ಆದ್ದರಿಂದ ಈತನನ್ನು ಕಂಡರೆ ಗೋಕಾಕರಿಗೆ ಅಪಾರ ಮೆಚ್ಚುಗೆ ಅಷ್ಟೇ ಅಲ್ಲ ರಾ.ಕು. ಅವರ ಇಂಗ್ಲೀಷ್ ಭಾಷೆಯ ಪ್ರತಿಭೆಯನ್ನು ಪ್ರೋತ್ಸಾಹಿಸುತ್ತಾ ಬಿ.ಎ.ಗೆ ಇಂಗ್ಲಿಷ್ ನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೋ ಎಂದು ಸೂಚಿಸಿದ್ದರು. ಅದಲ್ಲದೆ ಈತನ ಕೌಟುಂಬಿಕ ಜೀವನವನ್ನು ಬಡತನವನ್ನು ಹತ್ತಿರದಿಂದ ತಿಳಿದು, ನಿಮಗೆ ಮುಂದೆ ನೌಕರಿಯಲ್ಲಿ ಹೆಚ್ಚಿನ ಅವಕಾಶವಿರುವುದಾಗಿ ಹೇಳಿದ್ದರು. ಆದರೆ ರಾ.ಕು. ತಮ್ಮ ನಿರ್ಧಾರವನ್ನು ಬೇಗನೆ ತಿಳಸದೆ, ಯೋಚನೆ ಮಾಡಿದ ನಂತರ ಒಂದು ನಿರ್ಧಾರಕ್ಕೆ ಬಂದರು. ಒಂದು ವೇಳೆ ಪ್ರಾಚಾರ್ಯರ ಸಲಹೆಯಂತೆ ಇಂಗ್ಲಿಷ್‌ನ್ನು ಮುಖ್ಯ ವಿಷಯವನ್ನಾಗಿ ತೆಗೆದುಕೊಂಡು ಓದಿದರೆ ಆಕಸ್ಮಿಕವಾಗಿ ಯಾವುದಾದರೂ ಒಂದು ವರ್ಷ ಇಂಗ್ಲೀಷನಲ್ಲಿ ಕಡಿಮೆ ಅಂಕಗಳೆನಾರ ಬಂದರೆ ಬರುವ ವಿದ್ಯಾರ್ಥಿ ವೇತನವು ಎಲ್ಲಿ ಕೈತಪ್ಪಿ ಹೋಗುವುದೋ ಎಂಬ ಶಂಕೆಯಿಂದ ಮತ್ತು ಆತ್ಮವಿಶ್ವಾಸದ ಕೊರತೆ ಜೊತೆಗೆ ಭಯದಿಂದ ರಾ.ಕು. ಕನ್ನಡ ಭಾಷೆಯನ್ನು ಮುಖ್ಯ ವಿಷಯವನ್ನಾಗಿ ಮತ್ತು ಇಂಗ್ಲಿಷನ್ನು ಎರಡನೆಯ ವಿಷಯವನ್ನಾಗಿ ತೆಗೆದುಕೊಂಡು ಬಿ.ಎ. ಆನರ್ಸ ಪದವಿಯನ್ನು ೧೯೪೩ರಲ್ಲಿ ಪ್ರಥಮದರ್ಜೆಯಲ್ಲಿ ಪಾಸಾದರು.

೧೯೪೩ರಲ್ಲಿ ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಲ್ಲಿ ಪ್ರಾಚಾರ್ಯರು ರಾ.ಕು. ಅವರ ಕನ್ನಡ ಮತ್ತು ಇಂಗ್ಲಿಷನಲ್ಲಿನ ಪಾಂಡಿತ್ಯವನ್ನು ಅರಿತು ಇಲ್ಲಿಯೇ ಒಂದು ವರ್ಷ ಇಂಗ್ಲಿಷ್ ಭಾಷೆಯ ಟೋಟರಾಗಿ ಕೆಲಸ ಮಾಡುವಂತೆ ಸೂಚಿಸಿದ್ದರು. ರಾ.ಕು.ಒಪ್ಪಿಕೊಂಡು ಕೆಲಸ ಜೊತೆಯಲ್ಲಿಯೇ ತಮ್ಮ ಪ್ರಥಮ ವರ್ಷದ ಉನ್ನತ ಶಿಕ್ಷಣವನ್ನು ಪಡೆಯುವ ಬಯಕೆಯಿಂದ ೧೯೪೩ರಲ್ಲಿ ಎಂ.ಎ. ಒಂದು ವರ್ಷ ಪ್ರಾರಂಭಿಸಿದರು. ನಂತರ ಇಲ್ಲಿಯೇ ಟ್ಯೂಟರ್ ಕೆಲಸವು ಒಂದು ವರ್ಷಕ್ಕೆ ಮಾತ್ರ ಸೀಮಿತವಾದ ಕಾರಣ ಇವರು ತಮ್ಮ ಎರಡನೇ ವರ್ಷ ಎಂ.ಎ. ಅಭ್ಯಾಸವನ್ನು ಆರ್ಥಿಕ ಮುಗ್ಗಟ್ಟಿನ ಫಲವಾಗಿ ೧೯೪೪ರಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಸ್ಥಗಿತಗೊಳಿಸಿದರು. ೧೯೪೪ರಲ್ಲಿ ಬಳ್ಳಾರಿ ಜಿಲ್ಲೆಯ ಸಂಡೂರಿನ ಪ್ರೌಢಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡಿದರು. ಆದರೆ ಅಲ್ಲಿಂದ ತಮ್ಮ ಉನ್ನತ ಶಿಕ್ಷಣಕ್ಕೆ ತೊಂದರೆಯಾಗ ತೊಡಗಿದಾಗ ಇಲ್ಲಿ ಕೆಲಸವನ್ನು ಬಿಟ್ಟು ಎರಡನೇ ವರ್ಷದ ಎಂ.ಎ. ಶಿಕ್ಷಣವನ್ನು ಮುಂದುವರಿಸಲೆಂದೇ ೧೯೪೫ರಲ್ಲಿ ಧಾರವಾಡದ ಕೆ.ಇ.ಬೋರ್ಡ್ಸ್ ಸಂಸ್ಥೆಯ ವಿದ್ಯಾರಣ್ಯ ಪ್ರೌಢಶಾಲೆಯಲ್ಲಿ ಕೆಲಸ ಜೊತೆ ಎಂ.ಎ. ಅಂತಿಮ ವರ್ಷದ ಅಭ್ಯಾಸ ಪ್ರಾರಂಭಿಸಿದರು. ಅಲ್ಲಿ ಇವರ ಗುರುಗಳಾದ ಶ್ರೀ.ಸ.ಸ.ಮಾಳವಾಡರು ಇವರು ಅನುಭವಿಸುವ ಕಷ್ಟಗಳನ್ನು ಕಂಡು ರಾ.ಕು. ಅವರನ್ನು ತಮ್ಮ ಚೇಂಬರಿಗೆ ಕರೆಸಿ ಉದ್ಯೋಗ ಇಲ್ಲಾ ಎಂ.ಎ ಶಿಕ್ಷಣ ವ್ಯಾಸಾಂಗ ಈ ಎರಡರಲ್ಲಿ ಯಾವುದಾದರು ಒಂದನ್ನು ಮಾಡಲು ಸಲಹೆಯ ಜೊತೆಗೆ ಸೂಚನೆಯನ್ನು ಕೊಟ್ಟರು. ಆಗ ಯೋಚನೆ ಮಾಡಿದ ರಾ.ಕು. ಕೆಲಸ ಬೇಕಾದರೆ ಮತ್ತೆ ಸಿಗಬಹುದು. ಆದರೆ ಓದು ನಿಂತು ಹೋದರೆ ತಮ್ಮ ಭವಿಷ್ಯಕ್ಕೆ ಅಪಾಯವೆಂದು ಅರಿತು, ರಾ.ಕು. ಬೇಗನೆ ವ್ಯಾಸಂಗ ಮುಗಿಸಿದರೆ ಉತ್ತಮ ಎಂದು ತಿಳಿದು ನೌಕರಿಯನ್ನು ಬಿಟ್ಟರು. ಮುಂದೆ ಕೆಲಸವನ್ನು ಬಿಟ್ಟು ವ್ಯಾಸಂಗದತ್ತ ಗಮನಹರಿಸಿದಾಗ ಮತ್ತೆ ಅವರಿಗೆ ಆರ್ಥಿಕತೆಯ ತೊಂದರೆ ಬೆನ್ನುಬಿಡಲೇ ಇಲ್ಲ. ಏನು ಮಾಡುವುದು ಎಂದು ಚಿಂತಿಸುತ್ತಾ ನೆರವಿಗೆ ಇರಬೇಕಾದರೆ, ಆಗ ತಮ್ಮ ನೇರವಾಗಿ ಬಂದವರು ಬೇರೆಯಾರು ಅಲ್ಲ ತಮ್ಮ ಒಡಹುಟ್ಟಿದ ಅಣ್ಣ ಗೋಪಾಲರಾವ್. ಇವರು ರಾ.ಕು.ರವರ ಎಂ.ಎ. ಎರಡನೇ ವರ್ಷದ ವ್ಯಾಸಾಂಗ ಸಂಪೂರ್ಣವಾಗುವರೆಗೂ ಇವರ ಬೆನ್ನಿಗೆ ನಿಂತು ಆರ್ಥಿಕವಾಗಿ ಎಲ್ಲ ರೀತಿಯ ಸಹಾಯ ಮಾಡಿದರ ಫಲವಾಗಿ ರಾ.ಕು. ಮತ್ತೆ ತಮ್ಮ ದ್ವಿತೀಯ ವರ್ಷದ ಎಂ.ಎ ಕನ್ನಡ, ಸಂಸ್ಕೃತ ವಿಷಯಗಳನ್ನು ತೆಗೆದುಕೊಂಡು ೧೯೪೫ರಲ್ಲಿ ಎಂ.ಎ. ಸ್ನಾತಕೋತ್ತರ ಪದವಿಯನ್ನು ಮುಂಬಯಿ ವಿಶ್ವವಿದ್ಯಾಲಯದ ಧಾರವಾಡ ಸ್ನಾತಕೋತ್ತರ ಕೇಂದ್ರದಿಂದ ಈ ಪದವಿಯನ್ನು ಕೊನೆಗೂ ಪಡೆಯುವಲ್ಲಿ ಯಶಸ್ವಿಯಾದರು.

೧೯೪೫ರಲ್ಲಿ, ಧಾರವಾಡದ ಕರ್ನಾಟಕ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನಾ ವಿದ್ಯಾರ್ಥಿಯಾಗಿ ಸಂಶೋಧನೆಯಲ್ಲಿ ತೊಡಗಿಸಿಕೊಂಡರು. ಮತ್ತು ಸಂಶೋಧನ ವಿದ್ಯಾರ್ಥಿಗೆ ಬರತಕ್ಕಂಥಹ ಶಿಷ್ಯವೇತನವನ್ನು ಎರಡು ವರ್ಷದವರೆಗೆ ಪಡೆದುಕೊಂಡರು. ಮತ್ತೆ ೧೯೪೭ರಲ್ಲಿ ಹಾವೇರಿಯ ಮುನ್ಸಿಫಲ್ ಪ್ರೌಢಶಾಲೆಯಲ್ಲಿ

ಕನ್ನಡ, ಇಂಗ್ಲೀಷ್, ಶಿಕ್ಷಕರಾಗಿ ವೃತ್ತಿ ಮಾಡುವುದರ ಜೊತೆಯಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ 'ಬಿ.ಇಡಿ' ಪದವಿಯನ್ನು ಪಡೆದುಕೊಂಡರು. ರಾ.ಕು. ಅವರು ಒಟ್ಟಾರೆ ತಮ್ಮ ಜೀವನದ ಅವಿಭಾಜ್ಯ ಅಂಗವಾದ ಶಿಕ್ಷಣವನ್ನು ಪಡೆದುಕೊಳ್ಳಬೇಕಾದರೆ ಅವರ ಕೌಟುಂಬಿಕ ಆರ್ಥಿಕತೆಯು ಹೇಗೆ ಅವರ ಮೇಲೆ ಪ್ರಭಾವವನ್ನು ಬೀರಿತ್ತು ಹಾಗೂ ಅದರ ಪರಿಣಾಮವಾಗಿ ಇವರು ಕೆಲವು ಶೈಕ್ಷಣಿಕ ವರ್ಷಗಳನ್ನೇ ಕಳೆದುಕೊಳ್ಳುವಂತ ಪರಿಸ್ಥಿತಿ ರಾ.ಕು. ಪಡೆದ ಶೈಕ್ಷಣಿಕ ಅವಧಿಯಲ್ಲಿ ಬಹುಮುಖ್ಯವಾಗಿ ಕಂಡುಬರುತ್ತದೆ. ಹೀಗೆ ತಮ್ಮ ಅಮೂಲ್ಯವಾದ ಶಿಕ್ಷಣವನ್ನು ಪಡೆದವರು ಈ ರಾ.ಕು.

೩.೩. ವೃತ್ತಿ ಹಾಗೂ ಸೇವೆ

ರಾ.ಕು. ಅವರು ತಾವು ವಿದ್ಯಾರ್ಥಿಗಳಾಗಿರುವಾಗಲೇ ಉದ್ಯೋಗವನ್ನು ಮಾಡುವಂಥ ಸ್ಥಿತಿಯನ್ನು ಅವರ ಬಡತನದ, ಸಮಸ್ಯೆಗಳು ಕಾಡುತ್ತಿದ್ದವು. ಆದ್ದರಿಂದಲೇ ಅವರು ತಮ್ಮ ಶಿಕ್ಷಣವನ್ನು ಅದರಲ್ಲಿಯು ಉನ್ನತ ಶಿಕ್ಷಣವನ್ನು ಪಡೆದಂಥಹ ರೀತಿಯಂತು ವಿಶೇಷವಾದದ್ದು.

೧೯೪೩ರಲ್ಲಿ ಸಾಂಗ್ಲಿಯಲ್ಲಿ ಬಿ.ಎ. ಆನರ್ಸ ಪದವಿಯನ್ನು ಪಡೆದ ತಕ್ಷಣವೇ ಅವರ ಇಂಗ್ಲಿಷ್, ಕನ್ನಡ ಭಾಷೆಗಳಲ್ಲಿನ ಪಾಂಡಿತ್ಯದ ಫಲವಾಗಿ ಅದೇ ಕಾಲೇಜಿನಲ್ಲಿ ಅಂದರೆ 'ವಿಲ್ಲಿಂಗ್ಡನ್' ಕಾಲೇಜಿನಲ್ಲಿ ಒಂದು ವರ್ಷ ಟ್ಯೂಟರ್' ಎಂದು ಕೆಲಸ ಮಾಡುವುದರ ಮೂಲಕ, ತಮ್ಮ ವೃತ್ತಿ ಜೀವನದ ಮೊದಲ ಹೆಜ್ಜೆಯನ್ನು ಸಾಂಗ್ಲಿಯಿಂದಲೇ ಪ್ರಾರಂಭಿಸಿದರು. ನಂತರ ಒಂದು ವರ್ಷದ ಬಳಿಕ ಅಲ್ಲಿ ಟ್ಯೂಟರ್ ಕೆಲಸ ಇಲ್ಲದ ಕಾರಣ ಇವರು ತಮ್ಮ ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸಿ ಮುಂದೆ ಬಳ್ಳಾರಿ ಜಿಲ್ಲೆಯ ಸೊಂಡೂರಿನಲ್ಲಿ ಖಾಸಗಿ ಪ್ರೌಢಶಾಲೆಯೊಂದರಲ್ಲಿ ಒಂದು ವರ್ಷ ಮಾತ್ರ ಸೇವೆಯನ್ನು ಮಾಡಲು ಸಾಧ್ಯವಾಯಿತು. ಮುಂದೆ ಮತ್ತೆ ಎಂ.ಎ ಶಿಕ್ಷಣವನ್ನು ಪಡೆಯಲೆಂದು ವೃತ್ತಿಯ ಜೊತೆಗೆ ಓದು ಅವರಿಗೆ ಅನಿವಾರ್ಯ ಆದ ಕಾರಣ ಸೊಂಡೂರು ಬಿಟ್ಟು ಬಂದು ಧಾರವಾಡದಲ್ಲಿನ 'ಕೆ.ಇ.ಬೋರ್ಡ್ಸ್' ಸಂಸ್ಥೆಯ ವಿದ್ಯಾರಣ್ಯ ಸ್ಕೂಲಿನಲ್ಲಿ ೧೯೪೪ರಲ್ಲಿ ಮತ್ತೆ ಶಿಕ್ಷಕರಾಗಿ ವೃತ್ತಿಯನ್ನು ಪ್ರಾರಂಭಿಸಿದರು. ಆದರೆ ಇಲ್ಲಿಯೂ ಅವರಿಗೆ ಎಂ.ಎ ಶಿಕ್ಷಣ ಪಡೆಯಲು ತೊಂದರೆಯಾದ ಕಾರಣ ಇವರ ಗುರುಗಳಾದ ಸ.ಸ.ಮಾಳವಾಡರ ಸಲಹೆಯಂತೆ ಈ ವೃತ್ತಿಯನ್ನು ಬಿಟ್ಟು ಉನ್ನತ ಶಿಕ್ಷಣವನ್ನು ಮುಂದುವರಿಸಿದರು.

೧೯೪೭ರ ಹೊತ್ತಿಗೆ ಇವರು ಎಂ.ಎ ಪದವಿಯನ್ನು 'ಕನ್ನಡ ಮತ್ತು ಸಂಸ್ಕೃತ' ವಿಷಯ ತೆಗೆದುಕೊಂಡು ಉತ್ತಮದರ್ಜೆಯಲ್ಲಿ ಪಾಸಾದರು. ಆಗ ಮತ್ತೆ ಕೆಲಸಕ್ಕಾಗಿ ಅಲೆದಾಡತೊಡಗಿದರು. ಆ ಕಾಲದಲ್ಲಿ ಕಾಲೇಜುಗಳು ಬಹಳ ಕಡಿಮೆ. ಆದ್ದರಿಂದ ಕನ್ನಡ ಉಪನ್ಯಾಸಕರ ಹುದ್ದೆಗಳು ಕಡಿಮೆ. ಇಷ್ಟೇ ಅಲ್ಲದೆ ಆಗಿನ ಸಂದರ್ಭದಲ್ಲಿ ಉತ್ತಮ ಅಂಕಗಳಿದ್ದರೆ ಮಾತ್ರ ಸಾಲದಾಗಿತ್ತು, ಜೊತೆಗೆ ಪ್ರತಿಷ್ಠಿತರ ಬೆಂಬಲದ ಅವಶ್ಯಕತೆ ಇತ್ತು. ಆದರೆ ಇವರಿಗೆ ಮಾತ್ರ ಅಂಥ ಯಾವ ಮಹಾನುಭಾವರ

ಬೆಂಬಲವು ಇಲ್ಲದ್ದರಿಂದ ಉಪನ್ಯಾಸಕರ ಕೆಲಸವು ಬೇಗನೆ ಸಿಗಲಿಲ್ಲ. ಆದ್ದರಿಂದ ಇವರು ಕೆಲವು ತಿಂಗಳವರೆಗೆ ಮುಂಬಯಿ ಪ್ರಾಂತ್ಯದ ಪ್ರಾಚ್ಯವಸ್ತುಶಾಸ್ತ್ರ ವಿಭಾಗ ಇಲಾಖೆಯಲ್ಲಿ ಅರೆಕಾಲಿಕರಾಗಿ ಸಂಕಾಲಿಯರ್ನ್ ಕೈ ಕೆಳಗೆ ಕೋಲ್ಹಾಪುರ ಬಳಿ ನಡೆಯುತ್ತಿದ್ದ ಭೂ ಉತ್ಖನನ ಕಾರ್ಯದಲ್ಲಿ ಕೆಲವು ತಿಂಗಳವರೆಗೆ ಕೆಲಸ ಮಾಡಿದರು. ಇಲ್ಲಿಯ ಕೆಲಸದ ಅನುಭವ ಹಾಗೂ ಶ್ರೀ ಸಂಕಾಲಿಯವರ ಸಲಹೆ, ಮಾರ್ಗದರ್ಶನದ ಮೇರೆಗೆ ಭಾರತದ ನಾಗರಿಕತೆಯ ತೊಟ್ಟಿಲು ಎಂದು ಕರೆಸಿಕೊಳ್ಳುವ ಸಿಂಧೂನಾಗರಿಕತೆಯ ಪುರಾತನ ಸ್ಥಳವಾದ ಹರಪ್ಪಾದಲ್ಲಿ ಕೆಲ ತಿಂಗಳು ಸೇವೆಯನ್ನು ಮಾಡಿದರು. ಇಲ್ಲಿಯೂ ಸ್ಥಿರವಾಗಿ ನಿಲ್ಲಲಾಗದೆ, ಮತ್ತೆ ಕೆಲಸಕ್ಕಾಗಿ ಬೇರೆಡೆಗೆ ಹಾತೊರೆಯುತ್ತಿರುವಾಗ ಮತ್ತೆ ಶಿಕ್ಷಣದೆಡೆಗೆ ಗಮನಹರಿಸಿದ ಅವರು ಹುಬ್ಬಳ್ಳಿಯಲ್ಲಿ ಪತ್ರಕರ್ತರಾಗಿ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಒಂದು ತಿಂಗಳು ಕೆಲಸ ಮಾಡಿದರು. ನಂತರ ಧಾರವಾಡದಲ್ಲಿ ಕರ್ನಾಟಕ ಸಂಶೋಧನಾ ಸಂಸ್ಥೆಯಲ್ಲಿ ಸಂಶೋಧನೆಗೆ ತೊಡಗಿಸಿಕೊಂಡರು. ೧೯೪೭ರಲ್ಲಿ ಧಾರವಾಡದ ಕೆ.ಇ.ಬೋರ್ಡ್ಸ್ ಶಾಲೆಯಲ್ಲಿ ಶಿಕ್ಷಕರಾಗಿ ಕೆಲಸ ಮಾಡತೊಡಗಿದರು. ಏನೋ ಸಂತೋಷವಾಗಿ ಜೀವನ ಸಾಗುತ್ತಿರುವಾಗಲೇ ಇವರ ಒಂದು ವರ್ಷದ ಮೊದಲ ಮಗು ತೀರಿಕೊಂಡಿತು. ಇದರಿಂದ ಮಾನಸಿಕವಾಗಿ ತುಂಬಾ ಕುಗ್ಗಿದರು. ಅಷ್ಟೇ ಅಲ್ಲದೆ ಇವರಿಗೆ ಮಗನ ಸಾವು ಮನಸ್ಸಿನಲ್ಲಿ ಕೊರಗತೊಡಗಿತು. ಇದು ಮನಸ್ಸನ್ನು ಸ್ಥಿತ್ಯಂತರ ಮಾಡತೊಡಗಿದ್ದನ್ನು ಅರಿತ ಇವರ ಸ್ನೇಹಿತರು ಹಾಗೂ ಸಹೋದ್ಯೋಗಿ ಮಿತ್ರರು ಆದ ಎಂ.ಕೆ.ವರಗೇರಿಯವರು ಈ ಪೂರ್ವದಲ್ಲೆ ತಾವು ಶಿಕ್ಷಕರಾಗಿ ಸೇವೆ ಸಲ್ಲಿಸಿ ಬಂದಿದ್ದ ಹಾವೇರಿಯ ಮುನ್ಸಿಫಲ್ ಶಾಲೆಯಲ್ಲಿ ಕನ್ನಡ, ಇಂಗ್ಲೀಷ್ ಬೋಧಿಸುವ ಶಿಕ್ಷಕರ ಹುದ್ದೆ ಖಾಲಿ ಇರುವುದೆಂದು ಮತ್ತು ರಾ.ಕು. ಅವರನ್ನು ಕುರಿತು ನಿಮಗೆ ಮಗುವಿನ ಸಾವಿನ ನೋವಿನಿಂದ ಹೊರಬರಲು ನೀವು ಈ ಸ್ಥಳವನ್ನು ಬಿಟ್ಟು ಹಾವೇರಿ ಮುನ್ಸಿಫಲ್ ಶಾಲೆಯನ್ನು ಸೇರಿ ಆಗ ನಿಮ್ಮ ಮಾನಸಿಕತೆ ಸ್ವಲ್ಪವಾದರೂ ಬದಲಾವಣೆಯಾಗುತ್ತೆ ಹಾಗೂ ಅದರ ಒಂದು ಅವಶ್ಯಕತೆ ನಿಮಗಿದೆ ಎಂದು ಸಲಹೆಕೊಟ್ಟರು. ಇದನ್ನರಿತ ರಾ.ಕು. ಧಾರವಾಡ ಬಿಟ್ಟು ಹಾವೇರಿಯ ಮುನ್ಸಿಫಲ್ ಶಾಲೆಗೆ ಶಿಕ್ಷಕರಾಗಿ ಸೇವೆಸಲ್ಲಿಸಲು ಹೊರಟು ಬಂದಿದ್ದರು.

೧೯೪೮ ರಿಂದ ೧೯೬೭ರವರೆಗೆ ಹಾವೇರಿಯ ಮುನ್ಸಿಫಲ್ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಕನ್ನಡ ಮತ್ತು ಇಂಗ್ಲೀಷ್ ಕಲಿಸುತ್ತಿದ್ದರು. ಇಲ್ಲಿರುವಾಗಲೇ ೧೯೫೨ರಲ್ಲಿ ಬಿ.ಇಡಿ ಪದವಿಯನ್ನು ಪಡೆದರು. ನಂತರ ಇಲ್ಲಿಯೇ ಖಾಯಂ ಶಿಕ್ಷಕರಾಗಿ ಅವರು ಆ ವೃತ್ತಿಯನ್ನು ಅತ್ಯಂತ ಗೌರವದಿಂದ ಕಾಯಕ ನಿಷ್ಠೆಯಿಂದ ಮಾಡುತ್ತಿದ್ದರು. ಭಾಷೆಯ ಪಾಂಡಿತ್ಯ ಅಪಾರ ಅಗೋಚರ ಆದ್ದರಿಂದ ಅವರ ಪಾಠ ಮಾಡುವ ಶೈಲಿಯಂತು ಇನ್ನು ಅದ್ಭುತಮಯವೆಂದು ಅವರ ಶಿಷ್ಯ ಬಳಗದವರು ಹೇಳುತ್ತಿದ್ದರು. ಹಾವೇರಿಯಲ್ಲಿ ಶಿಕ್ಷಕರಾಗಿದ್ದಾಗಲೇ ಅವರ ಗುರುಗಳಾದ ಡಾ. ರಂ.ಶ್ರೀ.ಮುಗಳಿಯವರು ಕನ್ನಡ ಸಾಹಿತ್ಯ ಪರಿಷತ್ತಿನವರು ಕೈಗೊಂಡಿದ್ದ ಕನ್ನಡ-ಕನ್ನಡ, ಕನ್ನಡ ನಿಘಂಟು ಕಾರ್ಯಕ್ಕೆ ಸಲಹೆಗಾರರಾಗಿ, ರಚನಾ

ಮಂಡಳಿಯ ಉಪಾಧ್ಯಕ್ಷರಾಗಿಯೂ, ಬೆಂಗಳೂರಿಗೆ ಹೋಗಿ ಬರುತ್ತಿದ್ದರು. ಆದ್ದರಿಂದ ರಾ.ಕು. ಅವರ ಪಾಂಡಿತ್ಯವನ್ನು ಅರಿತಿದ್ದ ರಂ.ಶ್ರೀ.ಮುಗಳಿಯವರು "ಆರ್ .ವಿ.ಕುಲಕರ್ಣಿಯವರೆ ನಿಮ್ಮ ಪಾಂಡಿತ್ಯವು ಉಪಯೋಗವಾಗದೇ ಇಲ್ಲೇ ವ್ಯರ್ಥವಾಗುತ್ತದೆ. ನೀವು ನಿಘಂಟಿನ ಕಾರ್ಯಕ್ಕೆ ಸೇರಿದರೆ ಒಳಿತು" ಇದರಿಂದ ನಿಮ್ಮ ಜ್ಞಾನವು ಇತರರಿಗೆ ಪರಿಚಯಿಸಿದಂತಾಗಿ ಅವರಿಗೂ ಇದರ ಉಪಯೋಗವಾಗಬಲ್ಲದು"[೧] ಎಂದಿದ್ದರು. ಅಲ್ಲದೆ ಈ ನಿಘಂಟು ಕೆಲಸಕ್ಕೆ ನಿಮ್ಮ ಪಾಂಡಿತ್ಯದ ಅತ್ಯವಶ್ಯಕತೆಯಿದ್ದು, ಅದರಲ್ಲಿಯ ಉತ್ತರ ಕರ್ನಾಟಕದ ಭಾಷೆಯ ಶಬ್ದಭಂಡಾರವನ್ನು ಅರಿತಿರುವ ನಿಮ್ಮ ಈ ಸರ್ವೇ ಪದ್ದತಿಗೆ ಬೇಕಾಗಿದೆ ಎಂದು ಹೇಳಿ ಅವರೆ ಅದಕ್ಕೆ ಶಿಫಾರಸ್ಸು ಮಾಡಿದ್ದರು.

ಡಾ.ರಂ.ಶ್ರೀ ಮುಗಳಿಯವರ ಅಭಿಲಾಷೆಯಂತೆ ಶಿಷ್ಯ ರಾ.ಕು.'೧೯೬೭'ರಲ್ಲಿ ಎರವಲು ಸೇವಕರಾಗಿ ಪ್ರೊ ಜಿ.ವೆಂಕಟಸುಬ್ಬಯ್ಯರವರ ಪ್ರಧಾನ ಸಂಪಾದಕತ್ವದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನವರು ಕೈಗೊಂಡಿದ್ದ 'ಕನ್ನಡ ನಿಘಂಟು' ರಚನೆಯ ಉಪಸಂಪಾದಕರಾಗಿ ಸೇವೆಗೈಯಲು ಬೆಂಗಳೂರಿಗೆ ಹೋದರು. ಅಲ್ಲಿ ಅನೇಕ ಉತ್ತರ ಕರ್ನಾಟಕದ ಶಬ್ದಗಳನ್ನು ಹುಡುಕಿಕೊಟ್ಟವರು ಈ ರಾ.ಕು. ಅಲ್ಲಿಯ ಕೆಲಸ ೧೯೭೫ರವರೆಗೆ ಸರಾಗವಾಗಿ ನಡೆಯುತ್ತಿದ್ದಾಗ ಒಮ್ಮೆಲೆ ಧೂಮಕೇತುವಿನಂತೆ ಕಾಣಿಸಿಕೊಂಡಿತು ಇವರ ನಿವೃತ್ತಿಯ ಬಗೆಗಿನ ಪತ್ರ. ಈ ಪತ್ರವು ಹಾವೇರಿಯ ಮುನ್ಸಿಫಲ್ ಶಾಲೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿಗೆ ಬಂತು. ತಕ್ಷಣ ಕೆಲಸದಿಂದ ನಿವೃತ್ತಿಯಾಗಬೇಕು ಎಂದು ಸೂಚನೆ(ನೋಟೀಸ್) ಬಂದೇ ಬಿಟ್ಟಿತ್ತು. ಆದರೆ ಇವರ ಪಾಂಡಿತ್ಯ ಎಷ್ಟೊಂದು ಅವಶ್ಯಕವಾಗಿತ್ತು ಎಂದರೆ ಸರಕಾರಿ ದಾಖಲೆಗಳ ಪ್ರಕಾರ ಇವರಿಗೆ ನಿವೃತ್ತಿಯ ವಯಸ್ಸಾಗಿತ್ತೇ ಹೊರತು ಇವರಲ್ಲಿರುವ ಜ್ಞಾನದ ಪಾಂಡಿತ್ಯಕ್ಕೆ ಮಾತ್ರ ಅಲ್ಲ. ಅದು ಇನ್ನು ಹಲವು ಶಬ್ದಗಳ ಜ್ಞಾನಗಳ ಸಂಗ್ರಹಣೆ ಸಂಪಾದನೆಯಲ್ಲಿಯೇ ಮುನ್ನುಗ್ಗುತ್ತಿತ್ತು. ಆದ್ದರಿಂದ ನಿಘಂಟಿನ ಪ್ರಧಾನ ಸಂಪಾದಕರಾಗಿದ್ದ ಜಿ.ವೆಂಕಟಸುಬ್ಬಯ್ಯನವರ ಕೋರಿಕೆಯ ಆಗ್ರಹದ ಮೇರೆಗೆ ಮತ್ತೆ ನಿಘಂಟು ಕಾರ್ಯಕ್ಕೆ ವಿಶೇಷ ಸೇವೆಯಡಿ ಮರುನೇಮಕ ಮಾಡಿಕೊಂಡರು. ಮತ್ತೆ ಎರಡು ವರ್ಷ ಕೆಲಸ ಮಾಡುತ್ತಿದ್ದಾಗ 'ನಿವೃತ್ತ ನೌಕರರನ್ನು ಕೆಲಸಕ್ಕೆ ನೇಮಿಸಿಕೊಳ್ಳಬಾರದು ಎಂದು ಸರಕಾರದ ಸುತ್ತೋಲೆಯು ಬಂದಿದ್ದರಿಂದ ಕೆಲಸವನ್ನು ಮತ್ತೆ ಬಿಟ್ಟು ಬರಬೇಕಾಯಿತು. 'ಹಂ.ಪಾ.ನಾಗರಾಜಯ್ಯನವರು' ಪರಿಷತ್ತಿನ ಅಧ್ಯಕ್ಷರಾಗಿದ್ದಾಗ ದಿನಗೂಲಿಯ ಆಧಾರದ ಮೇಲೆ ಕೆಲಸಕ್ಕೆ ತೆಗೆದುಕೊಂಡರು. ೧೯೮೫ರಲ್ಲಿ ಹಂಪನಾಗಯ್ಯನವರ ಅಧ್ಯಕ್ಷಾವಧಿ ಮುಗಿದ್ದರಿಂದ ರಾ.ಕು. ಅವರು ಕೆಲಸದಿಂದ ಆಗ ಸಂಪೂರ್ಣವಾಗಿ ನಿವೃತ್ತರಾದರು. ಇದು ಒಟ್ಟಾರೆ ರಾ.ಕು. ಅವರು ೧೯೪೩ರಲ್ಲಿ ವಿದ್ಯಾರ್ಥಿಯಾಗಿರುವಾಗಲೇ ಉದ್ಯೋಗವನ್ನು ಪ್ರಾರಂಭ ಮಾಡಿ ಸೇವೆ ಮಾಡಿದ ಎಲ್ಲ ಕಡೆಯಲ್ಲಿಯೂ ಇವರ ಕಾರ್ಯವೈಖರಿಯು ಪ್ರಶಂಸನೀಯವಾದದ್ದು. ತಮ್ಮ ಜ್ಞಾನದ ಪಾಂಡಿತ್ಯವನ್ನು ಸ್ವಯಂಪ್ರೇರಿತವಾಗಿ, ಗುಂಜಿಯಷ್ಟು ಕಲ್ಮಶವಿಲ್ಲದೆ, ಧಾರೆ ಎರದುಕೊಟ್ಟಿದ್ದರು. ಇದರ ಪ್ರತಿಫಲವೇ ಇಂದು ಅವರ ಕೈಕೆಳಗೆ ಕಲಿತ ಅಪಾರ

ಶಿಷ್ಯ ಬಳಗವು ಸಮಾಜದಲ್ಲಿ ಗೌರವಾನ್ವಿತವಾದ ಉನ್ನತ ಹುದ್ದೆಗಳಲ್ಲಿ ಸೇವೆಸಲ್ಲಿಸುತ್ತಿರುವುದು ನಮಗೆ ಅಧ್ಯಯನದಿಂದ ತಿಳಿದುಬರುತ್ತದೆ. ಅಂತಹ ಪ್ರಮುಖರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರೂ ನಾಡಿನ ಶ್ರೇಷ್ಠ ಸಾಹಿತಿ, ಡಾ. ಚಂದ್ರಶೇಖರ ಪಾಟೀಲರು(ಚಂ.ಪಾ), ಡಾ.ಬೋಜರಾಜ ಪಾಟೀಲ, ಶ್ರೀ ಶಿವಾನಂದ ನಾಗನೂರ, ಡಾ.ಸತೀಶ ಪಂಡಿತ, ಡಾ.ಆರ್.ಎಮ್.ಲೋಡಾಯಿ, ಸಿ.ಎಮ್.ಬ್ಯಾಡಗಿ (ನಿವೃತ್ತ ಸೂಪ್ರಡೆಂಟ್ ಆಫ್ ಇಂಜಿನಿಯರ್), ವಿ.ಕೆ.ಕಳ್ಳಿಕರ (ಚಾರ್ಟಂಟ್ ಅಕೊಂಟೆಂಟ್ ಬಾಂಬೆ), ಆರ್.ವಿ. ಹೊರಡಿ ಸಾಹಿತಿಗಳು, ಶ್ರೀಮತಿ ಲೀಲಾವತಿ ಬೋಜರಾಜ ಪಾಟೀಲ, ವಿಜಯಭಾರತಿ ಹಿರೇಮಠ ಇನ್ನು ಅನೇಕ ಮಹನೀಯರು ಹಲವು ಕ್ಷೇತ್ರದಲ್ಲಿ ಉನ್ನತವಾದ ಸೇವೆಯನ್ನು ಸಲ್ಲಿಸುವಲ್ಲಿ ಇವರ ಜ್ಞಾನದ ಹಂಚಿಕೆ ಮಹತ್ವದ ಪಾತ್ರವಹಿಸಿತು. ಕೇವಲ ಶಿಷ್ಯರಿಗೆ ಮಾತ್ರ ಜ್ಞಾನವನ್ನು ಧಾರೆಯೆರೆಯದೆ ತಮ್ಮೊಡನೆ ಸಾಹಿತ್ಯರಂಗದಲ್ಲಿ ಗುರುತಿಸಿಕೊಂಡಿದ್ದ ಸತೀಶ್ ಕುಲಕರ್ಣಿ, ಗಂಗಾಧರ ನಂದಿ, ಮಾರುತಿ ಶಿಡ್ಲಾಪೂರ, ಡಾ.ಕೆ.ಹೆಚ್.ಮುಕ್ಕಣ್ಣನವರ, ಸಿ.ಎಸ್.ಮರಳಿಹಳ್ಳಿ, ಎಸ್.ಎಮ್.ದೊಡ್ಡಗೌಡರು, ವಿರೂಪಾಕ್ಷಪ್ಪ ಕೊರಗಲ್ಲ ಇನ್ನು ಮುಂತಾದ ಸಾಹಿತ್ಯ ಆಸಕ್ತರಿಗೂ ಇವರು ತಮ್ಮ ಜ್ಞಾನವನ್ನು ಬೋದಿಸಿದವರು ಅಷ್ಟೇ ಅಲ್ಲ ರಾ.ಕು. ಅವರ ಜೊತೆಗೆ ಕೊನೆವರೆಗೂ ಅವರಿಗೆ ನೆರವಾಗಿದ್ದವರು. ಈ ಎಲ್ಲ ಶಿಷ್ಯವೃಂದ ಹಾಗೂ ಸಾಹಿತಿ ಬಳಗದವರು ಇವರ ಪ್ರಯತ್ನದ ಫಲವೇ ರಾ.ಕು. ಅವರ ಮೂರನೇ ಪ್ರಬಂಧ ಸಂಕಲನ 'ಶೇಷ ವಿಶೇಷ' ಪ್ರಕಟಗೊಂಡಿತು.

೨.೪. ನಿವೃತ್ತಿ ಬದುಕು

ರಾ.ಕು.ಅವರು ಅಧಿಕೃತವಾಗಿ ೧೯೭೫ರಲ್ಲಿಯೇ ನಿವೃತ್ತರಾದರು. ನೌಕರಿಯನ್ನು ಮಾಡಿ ನಿವೃತ್ತಿಯಾದ ಬಳಿಕ ಎಲ್ಲರಂತೆ ಇವರು "ಇನ್ನೇನಪ್ಪಾ ಮನೆ ಆಯಿತು ನಾನಾಯಿತು" ಎನ್ನದೆ ಸಕ್ರಿಯವಾಗಿ ಸಾಹಿತ್ಯ ಕೃಷಿಯಲ್ಲಿಯೇ ಮಗ್ನರಾಗಿ ಅದರ ಕಡೆಗೆ ಹೆಚ್ಚು ಒಲವನ್ನು ಕೊಟ್ಟರು. ರಾ.ಕು ಅವರ ನಿವೃತ್ತಿ ಬದುಕು ಎಲ್ಲರಂತೆ ಸರಳವಾಗಿರದೆ ಎಲ್ಲಾ ಕಷ್ಟಗಳನ್ನು ಅಹ್ವಾನಿಸಿದಂತೆ ಇವರಿಗೆ ಮೇಲಿಂದ ಮೇಲೆ ಅನೇಕ ಕಷ್ಟಗಳ ಸರಮಾಲೆಗಳು ಇವರನ್ನು ಹುಡುಕಿಕೊಂಡು ಬಂದಂತಿತ್ತು. ನಿವೃತ್ತಿಯ ವೇತನ, ಆರೋಗ್ಯ, ಕೌಟುಂಬಿಕದಲ್ಲಿ ಆಕಸ್ಮಿಕ ಘಟನೆಗಳು, ಆರ್ಥಿಕ ಕುಸಿತದಂತಹ ಹಲವು ವಿಷಯಗಳು ಇವರನ್ನು ಸುತ್ತಿಕೊಂಡಂತಿದ್ದವು.

ರಾ.ಕು.ಸೇವೆಯಿಂದ ೧೯೭೫ರಲ್ಲಿಯೇ ನಿವೃತ್ತಿ ಹೊಂದಿದ್ದರೂ, ಅವರಿಗೆ ನಿವೃತ್ತಿ ವೇತನ ದೊರಕದಿರುವುದೇ ಇವರ ಕಷ್ಟಗಳಿಗೆ ಆಹ್ವಾನಿಸಿದಂತಿತ್ತು. ಇದಕ್ಕೆ ಕಾರಣ ಶಿಕ್ಷಣ ಇಲಾಖೆಯಲ್ಲಿನ ಮೇಲಾಧಿಕಾರಿಶಾಹಿ ಜನಾಂಗ, ಒಂದು ರೀತಿಯಲ್ಲಿ ಇವರು ನಿವೃತ್ತಿಯ ವೇತನವನ್ನು ಪಡೆಯಲು ಪೂರ್ಣಚಂದ್ರ ತೇಜಸ್ವಿಯವರ 'ತಬರನ ಕಥೆ'ಯಲ್ಲಿ ಬರುವ ಒಬ್ಬ ನಿವೃತ್ತಿ ವ್ಯಕ್ತಿ ತನ್ನ ಪಿಂಚಣಿಗಾಗಿ

ಅಲೆದು - ಅಲೆದು ಜೀವನವೇ ಬೇಸರವಾಗಿದ್ದಂತಹ ರೀತಿ ರಾ.ಕು ಅವರಿಗೂ ಅಧಿಕಾರಿಶಾಹಿಗಳು ಬ್ರಿಟಿಷರಿಗಿಂತ ಕ್ರೂರವಾಗಿ ಕಾಡಿದರು. ಅಂದರೆ ಇವರು ನಿವೃತ್ತ ವೇತನ ಬಿಡುಗಡೆಗೆ ಅಷ್ಟೊಂದು ಅಲೆದಾಡಿಸಿದರು.

ಹಾವೇರಿಯ ಮುನ್ಸಿಪಲ್ ಶಾಲೆಯು ಖಾಸಗಿ ಸಂಸ್ಥೆಯಾಗಿದ್ದುದರಿಂದ ಇವರ ಸೇವೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿಗೆ ಎರವಲು ಕೊಡಲು ಬರುವುದಿಲ್ಲ ಎಂದು ಸರಕಾರಿ ನಿಯಮದಲ್ಲಿರುವುದೇ ಇದಕ್ಕೆ ತೊಡಕಾಯಿತು. ಹೀಗಾಗಿ ಇವರ ಸಾಹಿತ್ಯ ಪರಿಷತ್ತಿನ ಸೇವಾವಧಿಯನ್ನು ಗಣನೆಗೆ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ಇವರ ಹೈಸ್ಕೂಲ್ ಸೇವಾವಧಿ ನಿವೃತ್ತಿ ವೇತನಕ್ಕೆ ಅರ್ಹವಿಲ್ಲ" ಎಂದು ಆಗಿನ ಹಾವೇರಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಿಳಿಸಿದರು. ಆದರೆ ಸಾಹಿತ್ಯ ಪರಿಷತ್ತಿನ ಸೇವೆಗೆ ಬರುವ ಮುನ್ನ ಶಿಕ್ಷಣ ಇಲಾಖೆಯವರ ಒಪ್ಪಿಗೆ ಪಡೆದಿದ್ದರು ಎಂಬ ವಿಷಯದ ಬಗ್ಗೆ ಅಧಿಕಾರಿಗಳು ಪರಾಮರ್ಶಿಸುವ ಗೋಜಿಗೆ ಹೋಗುತ್ತಿರಲಿಲ್ಲ. ನಿವೃತ್ತಿ ವೇತನವಿಲ್ಲದೆ ರಾ.ಕು. ಬಹಳ ತೊಂದರೆಗೊಳಗಾಗಬೇಕಾಯಿತು. ಈ ಸಂದರ್ಭದಲ್ಲಿ ರಾ.ಕು. ಅವರ ಬದುಕು ಅಕ್ಷರಶಹ ನರಕವೇ ಆಗಿತ್ತು. ೧೯೮೩ರ ವರೆಗೂ ಇವರು ಬೆಂಗಳೂರಿನ ಮನೆಯಲ್ಲಿ ವಾಸವಾಗಿದ್ದರು. ನಂತರ ಇವರಿಗೆ ೧೯೮೩ರಲ್ಲಿ ಇವರ ಬಾಳಸಂಗಾತಿಯಾದ 'ಸೀತಾಬಾಯಿ'ವರಿಗೆ 'ಬ್ಲೇನಕ್ಯೂಮರ್'ನಿಂದ ತುಂಬಾ ಅನಾರೋಗ್ಯಕ್ಕೆ ಒಳಗಾದರು. ನಂತರ ಸ್ವಲ್ಪ ತಿಂಗಳ ನಂತರ ದಿನಾಂಕ ೦೪-೦೫-೧೯೮೩ ರಂದು 'ಸೀತಾಬಾಯಿ'ಯವರು ತೀರಿಕೊಂಡರು. ಇದರಿಂದ ನೊಂದುಕೊಂಡ ರಾ.ಕು. ಅವರು ನೇರವಾಗಿ ಹಾವೇರಿಯಲ್ಲಿನ ಮನೆಯಲ್ಲಿ ಇರಲು ನಿಶ್ಚಯಿಸಿ ಇಲ್ಲಿಗೆ ಬಂದರು ಅಷ್ಟೆ ಅಲ್ಲದೆ ಇದೇ ಸಂದರ್ಭಕ್ಕೆ ಇವರ ಅತ್ತೆ ಅಂದರೆ ಸೀತಾಬಾಯಿಯವರ ತಾಯಿ ಗಂಡು ಮಕ್ಕಳು ಇಲ್ಲದ ಕಾರಣ ಇವರ ಆರೋಗ್ಯವು ಚಿಂತಾನಕವಾಗಿತ್ತು ಅವರನ್ನು ನೋಡಿಕೊಳ್ಳಲೆಂದೇ ಹಾವೇರಿಯಲ್ಲಿ ವಾಸಮಾಡತೊಡಗಿದರು. ಅಷ್ಟೇ ಅಲ್ಲದೆ ಇವರ ಅತ್ತೆಯವರು ಕೌಟುಂಬಿಕ ಕೆಲವು ವಿಷಯಗಳಲ್ಲಿ ಇವರ ಮನನೋಯಿಸಿದ್ದರೆಂದು ತಿಳಿದುಬರುತ್ತದೆ. ಆಗ ಇವರನ್ನು ಬಡತನ ಎಂಬ ಬೇತಾಳವು ಕಿತ್ತು ತಿನ್ನುತ್ತಿತ್ತು.

ಸುಮಾರು ವರ್ಷಗಳ ಕಾಲ ಕಳೆದರು ನಿವೃತ್ತಿಯ ವೇತನ ಬಾರದೆ ಆರ್ಥಿಕವಾಗಿ ತುಂಬಿ ಕಷ್ಟಗಳನ್ನು ಎದುರಿಸತೊಡಗಿದ್ದರು. ಈ ಎಲ್ಲ ವಿಚಾರವು ಇವರ ಶಿಷ್ಯಬಳಗ ಹಾಗೂ ಪರಿಚಿತ ಎಲ್ಲ ಸ್ನೇಹಿತರು, ಗುರುಗಳಿಗೂ ತಿಳಿದಿತ್ತು. ಆದ್ದರಿಂದ ಇವರ ಗುರುಗಳಾದ ರಂ.ಶ್ರೀ.ಮುಗುಳಿಯವರು ರಾ.ಕು.ಅವರ ನೆರವಿಗೆ ಬಂದವರಲ್ಲಿ ಪ್ರಮುಖರು. ಬೆಂಗಳೂರಿನಲ್ಲಿ ರೋಹಿಡೇಕರ ಎಂಬ ನಿವೃತ್ತ ನೌಕರರು ತಮ್ಮ ಸ್ನೇಹಿತರೊಂದಿಗೆ ಒಂದು ಸಂಘಕಟ್ಟಿ ನಿವೃತ್ತ ನೌಕರರ ತೊಂದರಗಳ ನಿವಾರಣೆ ಸಂಬಂಧಪಟ್ಟ ಕಛೇರಿಗಳೊಂದಿಗೆ ವ್ಯವಹರಿಸುತ್ತಿದ್ದರು. ಒಮ್ಮೆ ರಂ.ಶ್ರೀ.ಮುಗಳಿಯವರು ತಮ್ಮ ಶಿಷ್ಯ ರಾ.ಕು.ಅವರ ನಿವೃತ್ತಿ ವೇತನದ ಬಗ್ಗೆ ರೋಹಿಡೇಕರಲ್ಲಿ ಪ್ರಸ್ತಾಪಿಸಿದರು. ಅವರು ರಾ.ಕು ಅವರನ್ನು

ಹುಡುಕಿಕೊಂಡು ಬಂದು ಅವರಲ್ಲಿದ್ದ ದಾಖಲೆ ಕಾಗದ ಪತ್ರಗಳನ್ನು ತೆಗೆದುಕೊಂಡು ಕಾರ್ಯ ಪ್ರವೃತ್ತರಾಗಿ ಕೊನೆಗೂ ೧೯೯೧ರಲ್ಲಿ ನಿವೃತ್ತಿ ವೇತನವು ದೊರೆಯುವಂತೆ ಮಾಡುವಲ್ಲಿ ಯಶಸ್ವಿಯಾದರು. ಇಷ್ಟು ವರ್ಷಗಳ ಹಿಂದಿನ ಬಾಕಿ ಹಣ ಬಂದದ್ದಲ್ಲದೆ ಪ್ರತಿ ತಿಂಗಳೂ ನಿವೃತ್ತಿ ವೇತನ ಬರುವಂತಾಯಿತು. ಇದರಿಂದ ನೊಂದ ಜೀವಿಗೆ ಸ್ವಲ್ಪವಾದರೂ ಆರ್ಥಿಕ ನೆರವಿನಿಂದಾಗಿ ಇವರ ತದನಂತರದ ಜೀವನವು ಸ್ವಲ್ಪ ಆರಾಮದಾಯಕವಾಯಿತು. ದೈಹಿಕವಾಗಿ ಕೆಲವು ನೋವುಗಳು ಮಾತ್ರ ಇವರನ್ನು ಕಾಡಿದವು. ಇದರಿಂದ ತುಂಬಾ ತೊಂದರೆಗೆ ಒಳಗಾಗಿದ್ದರೆಂದು ಇವರನ್ನು ಹತ್ತಿರದಿಂದ ಕಂಡಿದ್ದ ಇವರ ಶಿಷ್ಯರು ಹೇಳುತ್ತಾರೆ.

ಅನೇಕ ವರ್ಷಗಳ ಹಿಂದೆಯೇ (೧೯೮೩) ಪತ್ನಿಯನ್ನು ಕಳೆದುಕೊಂಡ ರಾ.ಕು. ಕೊನೆಗೆ ವೃದ್ಧಾಪ್ಯ ಆಸಕ್ತತೆ, ಕಣ್ಣಿನ ತೊಂದರೆಗಳಿಂದಾಗಿ ಏಕಾಂಗಿತನದಲ್ಲಿದ್ದರು. ರೇಡಿಯೋವನ್ನೇ ಸಂಗಾತಿಯನ್ನಾಗಿ ಮಾಡಿಕೊಂಡು ದೇಶ ವಿದೇಶಗಳ ಆಗೂ ಹೋಗುಗಳನ್ನು ಅರಿಯುತ್ತಾ ಸ್ಥಿತ ಪ್ರಜ್ಞನಂತೆ ಮನೆಯಲ್ಲಿ ಕಾಲಕಳೆಯುತ್ತಿದ್ದರು. ಜೊತೆಗೆ ನಿಸರ್ಗವೆಂದರೆ ಇವರಿಗೆ ತುಂಬಾ ಇಷ್ಟ ಆದ್ದರಿಂದ ತಮ್ಮ ಮನೆಯ ಮುಂದೆ ಕೈತೋಟವನ್ನು ತುಂಬಾ ಚೆನ್ನಾಗಿ ಬೆಳೆಸಿದ್ದರು. ಸುಮಾರು ಒಂಭತ್ತು ದಶಕಗಳನ್ನು ಕಳೆದರು. ಅವರ ಬುದ್ಧಿ ಆಗಲೂ ಚಿಗುರು ಹೊಮ್ಮಿಸುತಿತ್ತು. ಜ್ಞಾಪಕ ಶಕ್ತಿ ಎಷ್ಟು ಕುಂದದೆ ಪ್ರಕಾಶಿಸುತ್ತಿತ್ತು. ಇದು ನಿಜಕ್ಕೂ ಆಶ್ಚರ್ಯಕರವಾದ ಸಂಗತಿ.

ಕೌಟುಂಬಿಕ ಜೀವನ

ರೋಣ ತಾಲೂಕಿನ ಅಬ್ಬಿಗೇರಿಯ ಶಾನಭೋಗರು ಈ ಊರಿನ ಕುಲಕರ್ಣಿ ಎಂಬ ಬ್ರಾಹ್ಮಣ ವಂಶದ ಸುಸಂಸ್ಕೃತ ಮನೆತದಲ್ಲಿ ಶಾನಭೋಗರ ಮಗನಾಗಿ ಶ್ರೀವೆಂಕಟೇಶ ಕುಲಕರ್ಣಿಯವರು ಜನಿಸಿದರು. ಇವರು ಮುಂದೆ ಅಬ್ಬಿಗೇರಿಯನ್ನು ಬಿಟ್ಟು ಗದಗನಲ್ಲಿ ಬಂದು ನೆಲೆಸಿದರು. ವೆಂಕಟೇಶ, ಸುಂದರಾಬಾಯಿ ಎಂಬ ದಂಪತಿಗಳಿಗೆ, ಒಟ್ಟು ಹದಿನಾಲ್ಕು ಜನ ಮಕ್ಕಳು. ಆದರೆ ಹುಟ್ಟಿದ ಎಲ್ಲ ಮಕ್ಕಳು ಬದುಕದೆ, ಹತ್ತು ಜನ ಮಕ್ಕಳು ಬೇಗನೆ ತೀರಿಕೊಂಡವು. ಆದ್ದರಿಂದ ಮನನೊಂದ ವೆಂಕಟೇಶರವರು ಸಂಪ್ರದಾಯಗಳನ್ನು ವಿರೋಧಿಸುತ್ತಾ ಬದುಕುಳಿದ ನಾಲ್ಕು ಜನ ಮಕ್ಕಳನ್ನು ತುಂಬಾ ಚೆನ್ನಾಗಿ ಸಾಕಿದರು. ಇವರಲ್ಲಿ ಎರಡು ಹೆಣ್ಣು ಮಕ್ಕಳು, ಎರಡು ಗಂಡು ಮಕ್ಕಳು. ಸುಂದರಕ್ಕಾ ಮತ್ತು ಅಂಬಕ್ಕಾ ಎಂಬ ಎರಡು ಹೆಣ್ಣು ಮಕ್ಕಳು, ಹಿರಿಯ ಗಂಡು ಮಗ ಗೋಪಾಲರಾವ್, ಕಿರಿಯಮಗನೇ ರಾಮಚಂದ್ರ(ರಾ.ಕು) ಹಿರಿಯನಾದ ಗೋಪಾಲರಾವ್ ತಮ್ಮ ಊರಾದ ಅಬ್ಬಿಗೇರಿಯಲ್ಲಿಯೇ ವ್ಯವಸಾಯವನ್ನು ಮಾಡುತ್ತ ಅಲ್ಲೇ ವಾಸವಾದರು. ಕೊನೆಯ ಮಗ ರಾಮಚಂದ್ರ ಮಾತ್ರ ಓದಿನೆಡೆಗೆ ಹೆಚ್ಚು ಗಮನಕೊಟ್ಟರು. ರಾಮಚಂದ್ರರು ಬಾಲ್ಯದಿಂದಲೇ ಪ್ರತಿಭಾವಂತರಾದ ಕಾರಣ ಅವರು ಹೆಚ್ಚು-

ಹೆಚ್ಚು ಓದಬೇಕು, ಓದಿ ಉತ್ತಮ ನೌಕರಿಯನ್ನು ಮಾಡಬೇಕೆಂಬ ಮಹಾದಾಸೆಯಿಂದ ಗದಗ ಬಿಟ್ಟು ಧಾರವಾಡ ಕಡೆಗೆ ಪಯಣ ಮಾಡಿದರು. ಕೆ.ಇ.ಬೋರ್ಡ್ಸ್ ಶಾಲೆಯನ್ನು ಶಿಕ್ಷಕರಾಗಿ ನೇಮಕವಾದ ನಂತರ ೧೯೪೫ರಲ್ಲಿ ಅವರ ತವರೂರಾದ ಅಬ್ಬಿಗೇರೆಯವರೆ ಆದ ಸುಂದರಾಬಾಯಿ ಎಂಬ ಬ್ರಾಹ್ಮಣ ಮನೆತನದವರ ಮಗಳಾದ 'ಸೀತಾಬಾಯಿ ಎಂಬುವವರನ್ನು ಅವರು ಬಾಳ ಸಂಗಾತಿಯನ್ನಾಗಿ ಮಾಡಿಕೊಂಡರು. ಸುಂದರಾಬಾಯಿಯವರಿಗೆ ಗಂಡು ಮಕ್ಕಳು ಇರಲಿಲ್ಲ. ಇರುವ ಇಬ್ಬರು ಹೆಣ್ಣು ಮಕ್ಕಳಾಗಿದ್ದರು. ಆದ್ದರಿಂದ ರಾ.ಕು. ಅವರು ಅವರ ಮನೆಗೆ ಅಳಿಯ ಮಾತ್ರವಾಗಿರದೆ, ಈ ಮನೆಯ ಗಂಡು ಮಗನ ಸ್ಥಾನವನ್ನು ತುಂಬಿದ್ದರು. ಆದ್ದರಿಂದಲೇ ರಾ.ಕು ಅವರು ಸುಂದರಾಬಾಯಿಯವರನ್ನು ತಾವು ಬೆಂಗಳೂರಿಗೆ ಹೋದರೂ ಅಲ್ಲಿಗೆಯೇ ಕರೆದುಕೊಂಡು ಹೋಗಿದ್ದರು. ಒಟ್ಟಾರೆ ಸುಂದರಾಬಾಯಿಯವರನ್ನೆ ಕೊನೆವರೆಗೂ ರಾ.ಕು ಅವರು ಸಾಕಿದರು.

ರಾ.ಕು. ಅವರ ಪತ್ನಿ 'ಸೀತಾಬಾಯಿ' ಅವರು ಅಸಾಧಾರಣ ತಾಳ್ಮೆ, ಸ್ವಾರ್ಥರಹಿತ, ತ್ಯಾಗಶೀಲತೆಯಿಂದ ಬದುಕಿನುದ್ದಕ್ಕೂ ರಾ.ಕು ಅವರಿಗೆ ಬೆಂಬಲವಾಗಿ ನಿಂತರು. ಧಾರವಾಡದಲ್ಲಿ ಕೆ.ಇ.ಬೋರ್ಡ್ಸ್‌ಶಾಲೆಯಲ್ಲಿ ಶಿಕ್ಷಕರಾಗಿದ್ದಾಗ ಸೀತಾಬಾಯಿ ಚೊಚ್ಚಲ ಗರ್ಭಿಣಿಯಾಗಿದ್ದರು. ಆಗ ಅವರು ಖಾಸಗಿ ವೈದ್ಯರ ಬಳಿ ತೋರಿಸಿಕೊಳ್ಳುವಷ್ಟು ಆರ್ಥಿಕ ಪರಿಸ್ಥಿತಿ ಇವರದು ಚೆನ್ನಾಗಿರಲಿಲ್ಲ. ದೂರದ ಸರಕಾರಿ ಸಿವಿಲ್ ಆಸ್ಪತ್ರೆಗೆ ನಡೆದೇ ಹೋಗುತ್ತಿದ್ದರಂತೆ. ಇಂಥಹ ಮಹಿಳೆಯನ್ನು ಹೆಂಡತಿಯನ್ನಾಗಿ ಪಡೆದಿದ್ದು ತಮ್ಮದೊಂದು ಭಾಗ್ಯವೇ ಸರಿ ಎಂದುಕೊಂಡಿದ್ದರು. ದುರದೃಷ್ಟಕರ ಅವರ ಮೊದಲ ಮಗು ಹುಟ್ಟಿದ ಒಂದು ವರ್ಷದಲ್ಲಿಯೇ ತೀರಿಕೊಂಡಿತು. ಇದರಿಂದ ತುಂಬಾನೊಂದ ರಾ.ಕು.ಧಾರವಾಡ ಬಿಟ್ಟು ಹಾವೇರಿಗೆ ಬಂದರು. ನಂತರ ಹಾವೇರಿಯಲ್ಲಿ ನೆಲಸಿರುವಾಗಲೇ ೧೯೫೧ ಏಪ್ರಿಲ್ ೧೦ ರಂದು ಶೋಭಾ ಎಂಬ ಹಿರಿಯ ಮಗಳು ಹುಟ್ಟಿದಳು. ತುಂಬಾ ದುಃಖದಲ್ಲಿದ್ದ ರಾ.ಕು. ಅವರ ಕುಟುಂಬಕ್ಕೆ ಮಗಳು ಶೋಭಾ ಹುಟ್ಟಿದರಿಂದ ರಾ.ಕು.ದಂಪತಿಗಳು ತುಂಬಾ ಖುಷಿಪಟ್ಟು ಮಾಡುವ ಕೆಲಸದೆಡೆಗೆ ಹೆಚ್ಚು ತಮ್ಮ ಮನಸನ್ನು ಮೀಸಲಿಟ್ಟರು. ಏಕೆಂದರೆ ತಮ್ಮ ಮೊದಲ ಮಗನ ಸಾವಿನ ನೆನಪುಗಳನ್ನು ಮಗಳು ಹುಟ್ಟಿದರಿಂದ ಮರೆಯಲು ರಾ.ಕು. ಅವರಿಗೆ ಸಾಧ್ಯವಾಯಿತು. ನಂತರ ಮತ್ತೆ ಎರಡು ವರ್ಷದ ಬಳಿಕ ಇವರಿಗೆ ಇನ್ನೊಬ್ಬ ಮಗನಾದ ಚಂದ್ರಕಾಂತನ ಜನನವು ೧೯೫೩ರಲ್ಲಿ ಆಯಿತು. ಹೀಗೆ ಅವರಿಗೆ ಕ್ರಮವಾಗಿ ಐದು ಜನ ಗಂಡು ಮಕ್ಕಳು ಎರಡು ಹೆಣ್ಣು ಮಕ್ಕಳು ಜನಿಸಿದವು. ಒಟ್ಟು ಏಳು ಮಕ್ಕಳು ಬದುಕುಳಿದವು. ಇನ್ನುಳಿದ ಮಕ್ಕಳಾದ ರಾಜೀವ, ಸೋಮನಾಥ, ಗಿರೀಶ, ಜಯಶ್ರೀ ಕಿರಿಯ ಮಗ ದತ್ತಾತ್ರೇಯ, ಹೀಗೆ ರಾ.ಕು. ಅವರ ಕುಟುಂಬವು ಬರುಬರುತ್ತ ದೊಡ್ಡ ಕುಟುಂಬವಾಯಿತು. ಹೀಗೆ ಕಾಲಕಳೆದಂತೆ ೧೯೭೨, ಜೂನ್ ೩೦ರಂದು ಹಿರಿಯ ಮಗಳಾದ ಶೋಭಾಳನ್ನು ಗದಗ ಮೂಲದವರಾದ ರಾಮಚಂದ್ರ ಮುಳಗುಂದ ಎಂಬುವರಿಗೆ ಕೊಟ್ಟು ವಿವಾಹ ಮಾಡಿದರು. ಹಾಗೆ ತಮ್ಮ ಇನ್ನೋರ್ವ

ಮಗಳಾದ 'ಜಯಶ್ರೀ'ಯವರನ್ನು ೧೯೯೧ ಮೇ ೩೦ ರಂದು ಹಾವೇರಿ ಜಿಲ್ಲೆಯ ಸುತಗಟ್ಟೆ ಗ್ರಾಮದ ನಾಗರಾಜ ಸುತಗಟ್ಟೆ ಎಂಬುವವರಿಗೆ ಕೊಟ್ಟು ವಿವಾಹ ಮಾಡಿದರು. ಹಾಗೆ ಹಿರಿಯ ಮಗನಾದ ಚಂದ್ರಕಾಂತ ಅವರ ವಿವಾಹವನ್ನು ಜಯಲಕ್ಷ್ಮೀ ಎಂಬುವರೊಡನೆ ೧೯೮೧, ಏಪ್ರಿಲ್ ೧೫ರಂದು ಮಾಡಿದರು. ಹಾಗೆ ಇನ್ನುಳಿದ ನಾಲ್ಕು ಜನ ಮಕ್ಕಳಾದ ರಾಜೀವ, ಸೋಮನಾಥ, ಗಿರೀಶ, ದತ್ತಾತ್ರಯನವರ ವಿವಾಹವನ್ನು ಮಾಡಿದರು. ರಾಜೀವ ಜೊತೆ ರಶ್ಮಿ, ಸೋಮನಾಥ ಜೊತೆ ಸುಮಾ, ಗಿರೀಶ್ ಜೊತೆ ರೋಹಿಣಿ, ದತ್ತಾತ್ರೇಯ ಜೊತೆ ದೀಪಾ ಹೀಗೆ ಎಲ್ಲ ಮಕ್ಕಳನ್ನು ವಿವಾಹ ಮಾಡಿದರು. ಹಾಗೆ ಅವರಿಗೆ ಅಪಾರ ಸಂಖ್ಯೆಯ ಮೊಮ್ಮಕ್ಕಳು ಇದ್ದು, ಸುನಿತಾ, ಸಂಜೀವ, ಸವಿನಯ, ಅಶ್ವಿನಿ, ಶಿಥಿಲ, ಶಶಿಕುಮಾರ, ನವೀನ, ಸೀತಾ, ಅನುಷ, ಶ್ರೀ, ಅಕ್ಷಯ ಕುಮಾರ ಮತ್ತು ವೈಷ್ಣವಿ. ಇವರೆಲ್ಲರು ರಾ.ಕು. ಅವರ ಮೊಮ್ಮಕ್ಕಳು. ರಾ.ಕು. ಅವರದು ಬಹುದೊಡ್ಡ ಕುಟುಂಬವಾಗಿದ್ದು, ಅಪಾರ ಬಂಧು ಬಳಗವನ್ನು ಹೊಂದಿದ್ದರು.

ರಾ.ಕು ಅವರು ಸಾಹಿತ್ಯ ಪರಿಷತ್ತಿನಲ್ಲಿ ಕೆಲಸ ಮಾಡುವಾಗ ಬೆಂಗಳೂರಿನಲ್ಲಿ ಮನೆ ಮಾಡಿ ವಾಸವಾಗಿದ್ದರು. ಆಗ ಅವರ ಕುಟುಂಬಕ್ಕೆ ೧೯೮೩ರಲ್ಲಿ ಒಂದು ತುಂಬಲಾರದ ನಷ್ಟ. ಮನೆಯ ಆಧಾರಸ್ತಂಭವಾಗಿದ್ದ ರಾ.ಕು ಅವರ ಪತ್ನಿ 'ಸೀತಾಬಾಯಿ'ಯವರು ಬ್ರೇನಟ್ಯೂಮರ್ ಕಾಯಿಲೆಯಿಂದ ಬೆಂಗಳೂರಿನಲ್ಲೆ ತೀರಿಕೊಂಡರು. ಇದರಿಂದ ರಾ.ಕು. ಅವರು ಬೇಸರಗೊಂಡು ಬೆಂಗಳೂರು ಬಿಟ್ಟು ಹಾವೇರಿಗೆ ಬಂದರು. ಇಲ್ಲಿಯೇ ತಮ್ಮ ಮಕ್ಕಳು ಮೊಮ್ಮಕ್ಕಳೊಡನೆ ವೃದ್ಯಾಪ್ಯವನ್ನು ಕಳೆಯುತ್ತ ಏಕಾಂಗಿತನವನ್ನು ಹೊಗಲಾಡಿಸಲು ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡರು. ರಾ.ಕು. ಅವರು ಹಾವೇರಿಯಲ್ಲಿ ಅವರ ಶಿಷ್ಯಬಳಗ ಮತ್ತು ಸಾಹಿತ್ಯ ಅಭಿಮಾನಿಗಳೊಡನೆ ಬೆರೆಯುವುದು ತಮ್ಮ ಬದುಕಿನ ಕೊನೆಯಗಾಲದಲ್ಲಿ ರಾ.ಕು. ಅವರ ಆರೋಗ್ಯವು ತುಂಬಾ ಕ್ಷೀಣಿಸಿತು. ಹಾಗೆ ಆರ್ಥಿಕವಾಗಿಯೂ ಅವರ ಮನೆಯ ವ್ಯವಸ್ಥಿತವಾಗಿರಲಿಲ್ಲ. ಕೊನೆಗೆ ಇವರು ೮೮ನೇ ವಯಸ್ಸಿನಲ್ಲಿ ದಿನಾಂಕ ೨೩-೧೨-೨೦೦೬ರಂದು ರಾ.ಕು. ಅವರು ಮರಣ ಹೊಂದಿದರು. ಅಂದಿನಿಂದ ಕನ್ನಡ ಲಲಿತ ಪ್ರಬಂಧ ಸಾಹಿತ್ಯದ ದಿಗ್ಗಜರಾಗಿದ್ದ ರಾ.ಕು. ನೆನಪು ಮಾತ್ರ ಆದರು.

೨.೫. ಸಾಹಿತ್ಯ ಕೃಷಿ

ರಾ.ಕು. ಅವರು ಕನ್ನಡ ಲಲಿತ ಪ್ರಬಂಧ ಸಾಹಿತ್ಯಕಾರರಲ್ಲಿ ಪ್ರಮುಖ ಲೇಖಕರಾಗಿದ್ದು ಕನ್ನಡ ಲಲಿತ ಪ್ರಬಂಧಕ್ಕೆ ದಕ್ಷಿಣ ಕರ್ನಾಟಕದಲ್ಲಿ ಎ.ಎನ್ .ಮೂರ್ತಿರಾವ್ ಪ್ರಖ್ಯಾತರಾದರೆ ಉತ್ತರ ಕರ್ನಾಟಕದಲ್ಲಿ ರಾ.ಕು. ಅವರು ಪ್ರಮುಖರು ಎನ್ನುವಷ್ಟರ ಮಟ್ಟಿಗೆ ಇವರು ಸಾಹಿತ್ಯವನ್ನು ಬೆಳೆಸಿದರು. ಇವರು ರಚಿಸಿದ ಕೃತಿಗಳು ಬೆರಳೆಣಿಕೆ ಮಾತ್ರವಾದರೂ ಅವುಗಳು ಗಟ್ಟಿಯಾದ ಕೃತಿಗಳಾಗಿವೆ. ರಾ.ಕು ಅವರ ಪ್ರಬಂಧ ಸಂಕಲನಗಳೆಂದರೆ **'ಗಾಳಿಪಟ'**, 'ದೇವಕನ್ಯೆ', **'ಶೇಷವಿಶೇಷ'** ಇವುಗಳನ್ನು ಅವಲೋಕಿಸಿದರೆ,

ವಿಷಯ ವೈವಿಧ್ಯತೆ ಆಯಾ ವಿಷಯಗಳ ಬಗ್ಗೆ ಅವರಿಗಿರುವ ಆಳವಾದ ವಿಷಯ ನಿರೂಪಣಾಕೌಶಲ್ಯ ಮತ್ತು ಬರವಣಿಗೆ ವೈಶಿಷ್ಟ್ಯ ಅಗಾಧವಾದುದು ಇದಕ್ಕೆ ಕಾರಣ ಅವರ ವ್ಯಾಪಕ ಓದು ಹಾಗೂ ಲೋಕಜ್ಞಾನ ಅನುಪಮವಾದುದು.

ಇವರು ಸಾಂಗ್ಲಿಯಲ್ಲಿ ಕಲಿಯುವಾಗ ಇವರ ಓದಿನ ತಣಿವು ಹಿಂಗಿಸಲು ಅಲ್ಲಿನ ಕಾಲೇಜಿನ open shelf libraryಯನ್ನು ಗುರುಗಳಾದ ರಂ.ಶ್ರೀ.ಮುಗಳಿಯವರು ಸದಾ ಈ ಪುಸ್ತಕ ಭಂಡಾರದ ಕಿಲಿಕೈಯನ್ನು ರಾ.ಕು. ಅವರಿಗೆ ಕೊಟ್ಟಿದ್ದರಂತೆ. ಅಂತೆಯೇ ಕರ್ನಾಟಕ ಸಂಶೋಧನಾ ಸಂಸ್ಥೆಯಲ್ಲಿ ಓದಿದ ಅಸಂಖ್ಯಾ ಪುಸ್ತಕಗಳು ಇವರ ಜ್ಞಾನ ಸಂಗ್ರಹವನ್ನು ವಿಸ್ತರಿಸಿದವು. ಸಾಂಗ್ಲಿಯಲ್ಲಿ ಗೋಕಾಕರು 'ವರುಣಕುಂಜ' ಎಂಬ ಸಾಹಿತ್ಯ ಕೂಟವನ್ನು ರಚಿಸಿದ್ದರು. ಅಲ್ಲಿ ಶಿಕ್ಷಕರು ವಿದ್ಯಾರ್ಥಿಗಳು ತಮ್ಮ ಬರಹ ಮತ್ತು ಇತರ ಲೇಖಕರ ಬರಹಗಳ ಬಗ್ಗೆ ಚರ್ಚೆ ನಡೆಸುತ್ತಿದ್ದರಂತೆ. ರಾ.ಕು ಇಲ್ಲಿ ಪಡೆದ ಅನುಭವ ಸ್ಫೂರ್ತಿದಾಯಕ. ರಾ.ಕು ಉತ್ತಮ ಬರಹಗಾರರೆಂಬುದರಲ್ಲಿ ಎರಡು ಮಾತಿಲ್ಲವಾದರೂ ಇವರು ತಾವಾಗಿಯೇ ಹೆಚ್ಚು-ಹೆಚ್ಚು ಬರೆಯಬೇಕು ಪ್ರಕಟಿಸಬೇಕು ಎಂಬ ಬಗ್ಗೆ ಉತ್ಸುಕರಲ್ಲ ಹಾಗಾದರೆ ಪ್ರಬಂಧಗಳನ್ನು ಬರೆದಿದ್ದಾದರೂ ಹೇಗೆ ಎಂದು ಕೇಳಿದ್ದಕ್ಕೆ ಅವರು ಈ ರೀತಿ ಉತ್ತರಿಸಿದರು. ಬಿ.ಇಡಿ ಕಲಿಯುತ್ತಿರುವಾಗ ಭಾಷಾ ವಿಷಯದ ಬೋಧಕರು ನಿಬಂಧ ಬರವಣಿಗೆಯ ಬಗ್ಗೆ ಹೇಳುತ್ತಾ ನಿಬಂಧದ ವಿಷಯವನ್ನು ವಿದ್ಯಾರ್ಥಿಗಳು ಮೊದಲು ಚರ್ಚಿಸಿ, ವಿಷಯ ಸಂಗ್ರಹಿಸಿ, ಬರೆಯಲು ಪ್ರಾರಂಭಿಸಬೇಕು ಮತ್ತು ಅದೇ ಅವಧಿಯಲ್ಲಿ ಶಿಕ್ಷಕನೂ ಅದೇ ನಿಬಂಧವನ್ನು ಬರೆಯಬೇಕು ಮತ್ತು ಬರೆಹ ನೋಡಿದ ನಂತರ ತನ್ನದನ್ನು ವರ್ಗದಲ್ಲಿ ಓದಿಹೇಳಬೇಕು ಈ ಪ್ರಯೋಗವನ್ನು ರಾ.ಕು ತಮ್ಮಲ್ಲಿ ಇಂಗ್ಲೀಷ್ ಟ್ಯೂಶನ್ನಗೆ ಬರುತ್ತಿದ್ದ ವಿದ್ಯಾರ್ಥಿಗಳೊಂದಿಗೆ ಪ್ರಾರಂಭಿಸಿದರು ಮತ್ತು ಅದೇ ರೀತಿ ತಾವೇ ಕನ್ನಡದಲ್ಲೇಕೆ ಬರೆಯಬಾರದು? ಎಂದು ಯೋಚಿಸಿ ಕೆಲವು ಪ್ರಬಂಧಗಳನ್ನು ತಮ್ಮ ಸಂತೋಷಕ್ಕಾಗಿ ಬರೆದು ಇಟ್ಟಿದ್ದರು. ಒಮ್ಮೆ ರಾ.ಕು ಅವರಲ್ಲಿಗೆ ಬಂದಿದ್ದ ವಿಮರ್ಶಕ ಕೀರ್ತಿನಾಥ ಕುರ್ತಕೋಟಿ ಕಪಾಟಿನಲ್ಲಿರುವ ಪುಸ್ತಕಗಳನ್ನು ನೋಡುತ್ತಿದ್ದಾಗ ಈ ಪ್ರಬಂಧಗಳನ್ನು ಕಂಡರು. ಓದಿ ಮೆಚ್ಚುಗೆ ವ್ಯಕ್ತಪಡಿಸಿದ್ದಲ್ಲದೆ, 'ಕಸ್ತೂರಿ' ಮಾಸಿಕದ ಸಂಪಾದಕ 'ಪಾವೆಂ' ಅವರಿಗೆ ತಿಳಿಸಿದರು. ಅವರು ಮತ್ತು 'ಕರ್ಮವೀರ' ವಾರಪತ್ರಿಕೆಯ ಸಂಪಾದಕ ಪಾಟೀಲರು ಗಂಟುಬಿದ್ದು ಕೆಲವು ಪ್ರಬಂಧಗಳನ್ನು ತಮ್ಮ ಪತ್ರಿಕೆಗಳಲ್ಲಿ ಜೊತೆಗೆ ಬೆಟಗೇರಿ ಕೃಷ್ಣಶರ್ಮಾರ 'ಜಯಂತಿ' 'ಜಯಕರ್ನಾಟಕ' ವಿಶೇಷ ಸಂಚಿಕೆಗಳಲ್ಲಿ ಇವರ ಪ್ರಬಂಧಗಳನ್ನು ಪ್ರಕಟಿಸುವುದರೊಂದಿಗೆ ಸಾಹಿತ್ಯ ಲೋಕಕ್ಕೆ ಪರಿಚಯ ಮಾಡಿಕೊಟ್ಟರು. "ರಾ.ಕು.ರ ಪ್ರತಿಭೆ ಗುರುತಿಸಿದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ತಮ್ಮ ಪ್ರಬಂಧ ಸಂಕಲನಕ್ಕೆ ಬರೆಯಲು ಕೇಳಿದರು. ಅಂದಿನಿಂದ ತಮ್ಮ ಪ್ರಬಂಧಗಳು ಜನರ ಮನ ತಟ್ಟಲಾರಂಭಿಸಿದವು ಎನ್ನುತ್ತಾರೆ ರಾ.ಕು."[೨] ನಂತರ ದ.ಬಾ.ಕುಲಕರ್ಣಿ, ಎನ್.ಎಸ್.ಗದಕರ್, ಕೀರ್ತಿನಾಥ ಕುರ್ತಕೋಟಿ

ಬೆಟಗೇರಿ ಕೃಷ್ಣಶರ್ಮ, ತಮ್ಮನ್ನು ಬರೆಯಲು ಪ್ರೋತ್ಸಾಹಿಸಿದರು ಎನ್ನುವ ರಾ.ಕು. 'ಪದತ್ರಾಣ' ಎಂಬ ತಮ್ಮ ಪ್ರಬಂಧ ಜನರ ಮನತಟ್ಟಿತು ಎಂದರು.

ಮೊದಲಿನಿಂದಲೂ ಪರಿಚಿತರಾದ ಧಾರವಾಡದ ಮನೋಹರ ಗ್ರಂಥಮಾಲೆಯ ಜೆ.ಬಿ.ಜೋಶಿಯವರು ರಾ.ಕು ಅವರ ಪ್ರಬಂಧಗಳಿರುವುದನ್ನು ತಿಳಿದು ಹಲವು ಬಾರಿ ಪ್ರಯತ್ನ ಮಾಡಿ ತರಿಸಿಕೊಳ್ಳುವಲ್ಲಿ ವಿಫಲರಾಗಿ ಕೊನೆಗೆ ತಾವೇ ತಮ್ಮ ಮಗನನ್ನೆ ಖುದ್ದಾಗಿ ಕಳಿಸಿ ತರಿಸಿಕೊಂಡು ಪ್ರಕಟಿಸಿದರು. ಇದರ ಫಲವೇ ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಲೋಕದಲ್ಲಿ ಪ್ರಕಾಶಮಾನವಾಗಿರುವ ಕೃತಿ 'ಗಾಳಿಪಟ' ಅನಾಮಿಕವಾಗಿ ಉಳಿಯ ಬಯಸಿದ್ದ ಒಬ್ಬ ಪ್ರಬುದ್ಧ ಲೇಖಕನನ್ನು ಎಳೆದುತಂದು ಅಗ್ರಸ್ಥಾನ ದೊರಕಿಸಿ ಕೊಟ್ಟರು ಶ್ರೀ ಜೆ.ಬಿ.ಜೋಶಿಯವರು.

ಗಾಳಿಪಟದ ಸ್ಫೂರ್ತಿಯಿಂದ ೧೯೭೦ರಲ್ಲಿ ಪ್ರೊ. ಮಾಳಗಿಯವರ ಒತ್ತಾಸೆಯಿಂದ 'ದೇವಕನ್ಯೆ' ಎಂಬ ಎರಡನೆ ಪ್ರಬಂಧ ಸಂಕಲನ ಲೋಟಸ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು ಇವರಲ್ಲಿ ಪ್ರಕಟವಾಯಿತು. ಈ ಎರಡೂ ಸಂಕಲನಗಳು ಅನೇಕ ವಿಶ್ವವಿದ್ಯಾಲಯಗಳ ಪದವಿ ತರಗತಿಗಳಿಗೆ ಪಠ್ಯ ಪುಸ್ತಕಗಳಾಗಿದ್ದವು. ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನ ಕಾರ್ಯದಲ್ಲಿ ತೊಡಗಿದ ಮೇಲೆ ರಾ.ಕು. ಅವರ ಆಸಕ್ತಿ ಶಬ್ದ, ಅವುಗಳ ಹುಡುಕಾಟ, ಅವುಗಳ ಉತ್ಪತ್ತಿ, ಅರ್ಥ ಮೊದಲಾದ ಶಾಸ್ತ್ರೀಯ ವಿಷಯಗಳಲ್ಲಿ ಮಗ್ನವಾದುದರಿಂದ ಪ್ರಬಂಧ ಬರಹ ಸ್ವಲ್ಪ ಕುಂಟಿತಗೊಂಡಿತು. ಈ ಬಗ್ಗೆ ತಿ.ನಂ.ಶ್ರೀ.ಯವರು "ಗದ್ಯ ಬಂತು ಪದ್ಯಹೊಯ್ತು, ನಿಘಂಟು ಬಂತು ಗದ್ಯ ಹೋಯ್ತು"[೩] ಎಂದು ಹೇಳಿದ್ದರು.

'೧೯೯೯'ರಲ್ಲಿ ಹಾವೇರಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನವರು ಹಾಗೂ ರಾ.ಕು. ಅವರ ಅಭಿಮಾನಿ ಬಳಗ ಮತ್ತು ಶಿಷ್ಯ ವೃಂಧದ ಪರಿಶ್ರಮದಿಂದಾಗಿ ಹಸ್ತಪ್ರತಿಯಲ್ಲಿದ್ದ ಹಾಗೂ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವನ್ನು ಕೂಡಿಸಿ ಮತ್ತೊಂದು ಪ್ರಬಂಧ ಸಂಕಲನ 'ಶೇಷ ವಿಶೇಷ' ಎಂಬ ಲಲಿತ ಪ್ರಬಂಧ ಸಂಕಲನವು ಪ್ರಕಟವಾಯಿತು. ಇನ್ನೂ ಹಲವು ಅಪ್ರಕಟಿತ ಲಲಿತ ಪ್ರಬಂಧಗಳು ಅಲ್ಲಲ್ಲಿ ಚದುರಿ ಹೋಗಿರುವವು. ಇದು ಅವರ ಕಾರ್ಯ ಕ್ಷೇತ್ರಕ್ಕೆ ಆದ ತುಂಬಲಾರದ ನಷ್ಟವೆಂದೇ ಭಾವಿಸಬಹುದು.

ರಾ.ಕು. ಅವರು ಇಷ್ಟೇ ಅಲ್ಲದೆ ಮೂರು ನಾಟಕಗಳನ್ನು ಬರೆದಿದ್ದರು ಎಂದು ತಿಳಿದು ಬರುತ್ತದೆ. ಅವುಗಳು ಎಲ್ಲಿಯೂ ಲಭ್ಯವಾಗುತ್ತಿಲ್ಲ. ಅವುಗಳೆಂದರೆ

೧. ಶ್ರೀ ಗಣೇಶ ನಾಟಕ

೨. ಸರಸಮ್ಮನ ನಾಟಕ

೩. ಕಳ್ಳ ನಾಟಕ

ರಾ.ಕು. ಅವರು ಕವನ ರಚನೆಯಲ್ಲಿಯೂ ಆಸಕ್ತಿ ಹೊಂದಿದ್ದರು. ಅವರ ಬಳಿ ಒಂದು ಸಂಕಲನವಾಗುವಷ್ಟು, ಕೈಬರಹ ಕವಿತೆಗಳಿದ್ದವಂತೆ ಆದರೆ ಅವುಗಳು ಲಭ್ಯವಾಗಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನವರು ಇವರ ಸಂಸ್ಕೃತ ಹಳೆಗನ್ನಡ ಭಾಷೆಯ ಪಾಂಡಿತ್ಯವನ್ನು ಅರಿತು ಹಲವು ಪ್ರಾಚೀನ ಕೃತಿಗಳನ್ನು ಸರಳಗನ್ನಡಕ್ಕೆ ಗದ್ಯಾನುವಾದ ಮಾಡಿಸಿದ್ದರಂತೆ ಅವುಗಳೆಂದರೆ

೧. ಅಂಡಯ್ಯನ ಕಬ್ಬಿಗರ ಕಾವ್ಯ

೨. ನೇಮಿನಾಥ ಪುರಾಣ ಸಂಪುಟ ೧-೨ (ಹಂಪನಾ, ಅವರ ಸಂಯೋಗದೊಂದಿಗೆ)

೩. ಶಾಂತೇಶ್ವರ ಪುರಾಣಂ

೪. ಚಂದ್ರಪ್ರಭ ಪುರಾಣಂ

೫. ಸಾಹಸ ಭೀಮವಿಜಯಂ

೬. ಅರ್ಧನೇಮಿ ಪುರಾಣಂ

ಒಟ್ಟು ಆರು ಹಳೆಗನ್ನಡ ಕಾವ್ಯಗಳನ್ನು ಗದ್ಯಾನುವಾದ ಮಾಡಿದ್ದಾರೆ.

ಪ್ರಶಸ್ತಿ ಹಾಗೂ ಗೌರವಗಳು : ಯಾವತ್ತು ರಾ.ಕು ಅವರು ಪ್ರಬಂಧಗಳನ್ನು ಹೆಸರಿಗಾಗಿ ಅಥವಾ ಪ್ರತಿಷ್ಠೆಗಾಗಿ ಬರೆದವರಲ್ಲ. ಹಾಗೆಯೇ ರಾ.ಕು ಅವರು ಪ್ರಚಾರ, ಸನ್ಮಾನ, ಪ್ರಶಸ್ತಿಗಳಿಂದ ಬಹುದೂರವಿರುವ ಇವರಿಗೆ ಕೆಲವು ಒತ್ತಾಯದ ಪ್ರಶಸ್ತಿ ಗೌರವಗಳು ಸಂದಿವೆ.

೧. ೧೯೯೯ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯವರ ಈ ಸಾಲಿನ ಅತ್ಯುತ್ತಮ ಲಲಿತ ಪ್ರಬಂಧ ಪ್ರಶಸ್ತಿಯು ರಾ.ಕು ಅವರ 'ಶೇಷ ವಿಶೇಷ' ಪ್ರಬಂಧ ಸಂಕಲನಕ್ಕೆ ದೊರಕಿತು.

೨. ೧೯೯೯ರ ಸಾಲಿನ ಸಿಂಧಗಿಯ ಬೇಂದ್ರೆಸ್ಮಾರಕ ಸಾಹಿತ್ಯ ಪುರಸ್ಕಾರವು 'ಶೇಷವಿಶೇಷ' ಪ್ರಬಂಧ ಸಂಕಲನಕ್ಕೆ ದೊರೆಯಿತು.

೩. ೨೦೦೨ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕಾರವು ಇವರ 'ಗಾಳಿಪಟ' ಪ್ರಬಂಧಕ್ಕೆ ದೊರೆಯಿತು.

೪. ಕರ್ನಾಟಕ ಸಾಹಿತ್ಯ ಪ್ರಶಸ್ತಿ ದೊರೆತಿರುವುದಕ್ಕೆ ಹಾವೇರಿಯ ಹುಕ್ಕೇರಿ ಮಠದಲ್ಲಿ ತಾಲ್ಲೂಕ ಸಾಹಿತ್ಯ ಪರಿಷತ್ ಹಾಗೂ ಶಿಷ್ಯವೃಂದದ ಪರವಾಗಿ ಇವರನ್ನು ಸನ್ಮಾನಿಸಲಾಯಿತು.

ಇದಲ್ಲದೆ ಹಲವಾರು ಸಭೆ-ಸಮಾರಂಭಗಳ ಅಧ್ಯಕ್ಷತೆ, ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದಾರೆ. ಆದರೂ ಇಂಥ ಸಾಹಿತಿಗಳಿಗೆ ದೊರೆತ ಆದರಗಳು ಅತಿ ಕಡಿಮೆ ಎಂದೇ ಹೇಳಬೇಕು. ಸಾಮಾನ್ಯ ವ್ಯಕ್ತಿಯೊಬ್ಬ ಶ್ರದ್ಧೆಯಿಂದ ಅವಿರತ ಪ್ರಯತ್ನ ಮಾಡಿದರೆ ಏನೆಲ್ಲಾ ಸಾಧಿಸಬಹುದು ಎಂಬುದಕ್ಕೆ ರಾ.ಕು ಸಾಕ್ಷಿಯಾಗಿದ್ದಾರೆ.

ಅಡಿ ಟಿಪ್ಪಣಿಗಳು

೧. ಸಾಹಿತ್ಯ ಸೌರಭ, ಲೇಖಕ : ಶ್ರೀ ಶಿವಾನಂದ ನಾಗನೂರ, ಪ್ರಕಟಣೆ : ಹಾವೇರಿ ಜಿಲ್ಲಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ, ೨೦೦೧, ಪು.೮೧

೨. ಸಂಯುಕ್ತ ಕರ್ನಾಟಕ ಪತ್ರಿಕೆ, ಜಿಲ್ಲಾ ವಾರ್ತಾವಿಶೇಷ ಸಂಚಿಕೆ, ದಿನಾಂಕ ೨೨-೨-೨೦೦೧, ಪು.೪

೩. ಸಾಹಿತ್ಯ ಸೌರಭ, ಲೇಖಕ : ಶ್ರೀ ಶಿವನಂದ ನಾಗನೂರ, ಪ್ರಕಟಣೆ, ಪು.೮೨

ಅಧ್ಯಾಯ ೩

ಕನ್ನಡ ಲಲಿತ ಪ್ರಬಂಧ ಪರಂಪರೆ ಮತ್ತು ರಾ.ಕು

೩

ಕನ್ನಡ ಲಲಿತ ಪ್ರಬಂಧ ಪರಂಪರೆ ಮತ್ತು ರಾ.ಕು

ಹೊಸಗನ್ನಡ ಸಾಹಿತ್ಯ ಹತ್ತು ಹಲವು ಪ್ರಕಾರಗಳಲ್ಲಿ ಹರಡಿಕೊಂಡಿದೆ. ಹಾಗೆಯೇ ಸಮೃದ್ಧವೂ, ಪ್ರಯೋಗಶೀಲವೂ ಆಗಿದೆ. ಕಾವ್ಯ, ಮಹಾಕಾವ್ಯ, ಕಾದಂಬರಿ, ಕತೆ, ವಿಮರ್ಶೆಗಳಲ್ಲಿ ಅದು ಇಂದಿನ ಭಾರತೀಯ ಭಾಷೆಗಳಲ್ಲಿಯೇ ಗಮನಾರ್ಹ ಸ್ಥಾನವನ್ನು ಅಲಂಕರಿಸಿದೆ. ಕನ್ನಡ ಭಾಷೆ ಸಾಹಿತ್ಯಗಳಿಗೆ ಸಾವಿರ ವರ್ಷಗಳಿಗೂ ಮಿಕ್ಕಿದ ಲಿಖಿತ ಇತಿಹಾಸ ಇದೆ. ಆದರೆ ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಿಮಾತ್ಯರ ಭಿನ್ನ ಪ್ರೇರಣೆ ಪ್ರಭಾವಗಳಿಂದಾಗಿ ಹೊಸ-ಹೊಸ ರೂಪಗಳಲ್ಲಿ ಹೊರಬಂದಿತು. ಬ್ರಿಟೀಷ್‌ರ ಅಧಿಕಾರ, ದಬ್ಬಾಳಿಕೆ, ಹಿಂಸೆ, ಅಸಮರ್ಪಕ ನೀತಿ, ಒಡೆದಾಳುವ ರೀತಿ ಹಲವು ವಿಚಾರಗಳು ನಮ್ಮ ಭಾರತೀಯರಲ್ಲಿ ಸ್ವದೇಶಿಯ ಭಾವವು ಜಾಗೃತಗೊಳ್ಳುವಂತೆ ಮಾಡಿತ್ತು. ಮತ್ತೊಂದು ಬಗೆಯಲ್ಲಿ ಯೋಚಿಸುವುದಾದರೆ, ಇದೇ ವಿದೇಶಿಯರ ಮೂಲಕ ದೊರೆತ ಶಿಕ್ಷಣ, ಸಾರಿಗೆ, ಪಾಶ್ಚಾತ್ಯ ಸಾಹಿತ್ಯ, ಸಂಸ್ಕೃತಿಗಳ ಪರಿಚಯವಾಗುವಂತೆ ಮಾಡಿದವು. ಹತ್ತೊಂಬತ್ತನೆಯ ಶತಮಾನದ ಆಸುಪಾಸಿನ ಕನ್ನಡ ಸಾಹಿತಿಗಳು ಈ ಸಂದರ್ಭದಲ್ಲಿ ಭಿನ್ನವಾದ ಒಂದು ಮಾರ್ಗವನ್ನು ಕಂಡುಕೊಂಡರು, ಇದರ ಫಲವಾಗಿ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಭಾವಗೀತೆ, ಕಾದಂಬರಿ, ನಾಟಕ, ಸಣ್ಣಕತೆ, ಲಲಿತ ಪ್ರಬಂಧ, ಪ್ರವಾಸ ಸಾಹಿತ್ಯಗಳಂಥಹ ಹತ್ತು ಹಲವು ಹೊಸ ಸಾಹಿತ್ಯ ರೂಪಗಳು ಬೆಳೆದುಬಂದವು. ಸಾಂಪ್ರದಾಯಕ ಸಾಹಿತ್ಯಕ್ಕಿಂತ ಭಿನ್ನವಾದಂಥಹ ಸಾಹಿತ್ಯ ಇಲ್ಲಿ ಬೆಳೆದು ಬಂದಿತು. ಅಂತಹ ಪ್ರಮುಖ ಸಾಹಿತ್ಯ ಪ್ರಕಾರಗಳಲ್ಲಿ ಲಲಿತ ಪ್ರಬಂಧ ಸಾಹಿತ್ಯವೂ ಒಂದು.

'ಪ್ರಬಂಧ' ಎಂಬ ಪದ ಇಂಗ್ಲಿಷ್‌ನ EASSY ಎಂಬುದಕ್ಕೆ ಸಂವಾದಿಯಾಗಿ ಬಳಸುವ ಕನ್ನಡ ಪದ ಇದಕ್ಕೆ ಪ್ರಬಂಧ, ಲಘುಪ್ರಬಂಧ, ಭಾವಪ್ರಬಂಧ ಆತ್ಮೀಯ ಹರಟೆ, ಗದ್ಯಚಿತ್ರ, ಭಾವಚಿತ್ರ, ಪ್ರಸಂಗ ಶಿಥೀಲಬಂಧ ಎನ್ನುವ ಪರ್ಯಾಯ ಹೆಸರುಗಳನ್ನು ಬಳಸಲಾಗಿದೆ. ಆದರೆ ಹೆಚ್ಚು ಪ್ರಚಲಿತವಾಗಿರುವುದು 'ಲಲಿತ ಪ್ರಬಂಧ' ಎನ್ನುವ ಪದಮಾತ್ರ. ''ಮೂಲತಃ ಪ್ರೆಂಚ್ ಭಾಷೆಯ 'EASSY' ಪದವನ್ನು ಒಂದು ಪ್ರಯೋಗ, ಪ್ರಯತ್ನ ಉದ್ಯಮ ಎಂದು, ಈ ಪದವನ್ನು ಮೊದಲ ಬಾರಿಗೆ, ನಾಮಕಾರಣ ಮಾಡಿದವನು 'ಫ್ರಾನ್ಸಿಸ್ ಮೈಕಲ್ ಮೂಂಟೇನ್'[೧] ಈ ಪದವನ್ನು ಸರಿಯಾಗಿ

ಸ್ಥಾನಾಂತರಿಸುವ ಸಮನಾರ್ಥ ಪದ ಕನ್ನಡದಲ್ಲಿ ಇಲ್ಲ, ಆದರೂ ಪ್ರಬಂಧ ಎಂಬ ಪದದಲ್ಲಿ ಆ ಅರ್ಥವನ್ನು ತುಂಬಿ ಬಳಸಲಾಗುತ್ತದೆ. ಪ್ರಬಂಧ ಎಂದರೆ ಕಟ್ಟು, ಸುಸಂಬದ್ಧವಾದ ರಚನೆ ಎಂದೂ ಅರ್ಥ ಇದು ಆರಂಭದ ಸ್ವರೂಪವನ್ನು ಅರ್ಥಬದ್ಧವಾಗಿ ತಿಳಿಸಿಕೊಡುತ್ತದೆ. ಕನ್ನಡದಲ್ಲಿ ಪ್ರಥಮ ಪ್ರಬಂಧ ಸಂಕಲನ ೧೮೭೫ರಲ್ಲಿ 'ಲೋಕರಹಸ್ಯ' ಎಂಬ ಹೆಸರಿನಿಂದ ಪ್ರಕಟವಾಗಿದೆ. ಇದು ಅನುವಾದ ಮಾಡಿದ ಪ್ರಬಂಧ ಸಂಕಲನ ಇದನ್ನು ಬಂಗಾಳದ ಲೇಖಕ ಬಂಕಿಮಚಂದ್ರರ ಕೃತಿಯಿಂದ ಕನ್ನಡಕ್ಕೆ ಅನುವಾದಿಸಲಾಯಿತು. ಕನ್ನಡದ ಲಲಿತ ಪ್ರಬಂಧದ ಪರಂಪರೆಯನ್ನು ನೋಡುವುದರ ಮೊದಲು ಇಂಗ್ಲೀಷ್ ಸಾಹಿತ್ಯದಲ್ಲಿ ಇದು ಬೆಳೆದು ಬಂದ ಮೆಟ್ಟಿಲುಗಳನ್ನು ನೋಡುವುದು ಉತ್ತಮ.

'ಎಸ್ಸೆಜ್'(cssais) ಎಂದು ಮೊದಲನೇ ಬಾರಿ ತನ್ನ ಬರಹಗಳನ್ನು ಹೆಸರಿಸಿ ತನ್ನ ಚಿಂತನೆಗಳನ್ನು ಕತೆ-ಉಪಕತೆಗಳೊಂದಿಗೆ ಮನೋಜ್ಞವಾಗಿ ಫ್ರೆಂಚ್ ಭಾಷೆಯಲ್ಲಿ ಬರೆದು ಪ್ರಕಟಿಸಿರುವ ಫ್ರೆಂಚ್ ಸಾಹಿತಿ ಮೈಕಲ್ ಮೂಂಟೇನ್ ಆತ ಬದುಕಿದ್ದು ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ, ಹೇಗೆ ಪ್ರಬಂಧ ಸಾಹಿತ್ಯದ ಆರಂಭ ೧೬ನೇ ಶತಮಾನದಲ್ಲಿ ಫ್ರಾನ್ಸ್‌ನಲ್ಲಿ ಆಯಿತು. ಮೂಂಟೇನ ಅವರ ಬರವಣಿಗೆಯ ಶೈಲಿ ಅತ್ಯಂತ ಸಲಿಗೆಯ ಅಂತಃಕರಣ ಪೂರಿತವಾದ ಶೈಲಿ ಅವನು ತನ್ನ 'ಎಸ್ಸೇಜ್' ಎಂಬ ಪ್ರಬಂಧ ಸಂಕಲನಕ್ಕೆ ಬರೆದ ಮುನ್ನುಡಿಯಲ್ಲಿ ಹೇಗೆ ಹೇಳಿದ್ದಾನೆ. "ನನ್ನ ಈ ಪುಸ್ತಕ ಓದುತ್ತಿರುವ ರಸಿಕನೇ ನಿನಗೆ ನಾನು ಮೊದಲೇ ಎಚ್ಚರಿಕೆ ಕೊಡಬಯಸುತ್ತೇನೆ. ಈ ಪುಸ್ತಕ ಬರೆಯುವುದರಲ್ಲಿ ನನ್ನ ಅಭಿಲಾಷೆ ಕೇವಲ ವೈಯಕ್ತಿಕವಾದದ್ದು. ನಿನಗೆ ಉಪಕಾರ ಮಾಡಬೇಕು. ನಾನು ಇದರ ಮೂಲಕ ಕೀರ್ತಿಯನ್ನು ಗಳಿಸಬೇಕು. ಮುಂತಾದ ಯಾವ ಲವಲವಿಕೆಯೂ ನನ್ನಲ್ಲಿಲ್ಲ. ಈ ಬಗೆಯ ಆಶೋತ್ತರಗಳು ಯೋಗ್ಯತೆಗೆ ಮೀರಿದವು. ಇವುಗಳನ್ನು ಬರೆದಿರುವುದು ನನ್ನ ಬಂಧುಗಳು ಹಾಗೂ ಮಿತ್ರರಿಗಾಗಿ. ನನ್ನ ಪ್ರಬಂಧಗಳಲ್ಲಿ ನೀವು ಗುರುತಿಸುವುದು ನನ್ನನ್ನೇ."[೨] ಹೇಗೆ ಮೂಂಟೇನನ ಪ್ರಬಂಧಗಳಲ್ಲಿ ನಾವು ಸ್ವಚ್ಛಂದ ಮನದ ವಿಹಾರವನ್ನು ಕಾಣುತ್ತೇವೆ. ಇವನು 'ವ್ಯಕ್ತಿಗತ ಪ್ರಬಂಧಗಳ ಜನಕನೆಂದು' ಹೇಳುತ್ತಾರೆ. ಅಷ್ಟೇ ಅಲ್ಲದೆ ಪ್ರಬಂಧ ಸಾಹಿತ್ಯದ ಆದ್ಯ ಪುರುಷನೆಂದು ಹೇಳಲಾಗುತ್ತದೆ. ಇತನ ಪ್ರಬಂಧಗಳ ಇಂಗ್ಲೀಷ್ ಭಾಷಾಂತರಗಳು ಕ್ರಿ.ಶ.೧೬೦೮ರಲ್ಲಿ ಪ್ರಕಟವಾದವು. ಈ ಸಂಕ್ಷಿಪ್ತ ಬರವಣಿಗೆಯ ಪ್ರಕಾರವನ್ನು ಆಯ್ದುಕೊಂಡು ಬಂದು ಬೇರೆತರಹ ಉದ್ದೇಶಕ್ಕಾಗಿ ಬಳಸಿಕೊಂಡವರು ಫ್ರಾನ್ಸಿಸ್ ಬೇಕನ್."

ಫ್ರಾನ್ಸಿಸ್ ಬೇಕನ್(೧೫೬೧-೧೬೨೬) ಇಂಗ್ಲಿಷ್‌ನ ಪ್ರಥಮ ಪ್ರಬಂಧಕಾರ, ಶೇಕ್ಸಪಿಯರ್ ನ ಸಮಕಾಲೀನನಾಗಿದ್ದ ಈತನು ಜೀವನದ ವಿಸ್ತಾರವಾದ ಅನುಭವವುಳ್ಳವನಾಗಿದ್ದನು. ವಿಜ್ಞಾನಿ ಮತ್ತು ತತ್ತ್ವಜ್ಞಾನಿಯೂ ಆಗಿದ್ದನು. ಈತನು ತನ್ನ ಜೀವಮಾನದಲ್ಲಿ ನೂರಾರು ಪ್ರಬಂಧಗಳನ್ನು ಬರೆದಿದ್ದು ಅಲ್ಲಿ ಆತನ ಲೋಕಾನುಭವ, ಉತ್ಪತ್ತಿ ಪಾಂಡಿತ್ಯ ಪ್ರಕಟಗೊಂಡಿದೆ. ಬ್ರೇಕನ್‌ನ ತರುವಾಯ

ಪ್ರಬಂಧಗಳನ್ನು ಬರೆದ 'ಟೆಂಪ್ಲೆ' ಇಂಗ್ಲಿಷ್ ಭಾಷೆಯ ಬಿಗಿಬಂಧವನ್ನು ಸಡಿಲಗೊಳಿಸಿ, ಅದನ್ನು ಸುಲಭಗ್ರಾಹ್ಯವಾಗುವಂತೆ ಮಾಡಿದನು. ಡ್ರೆಡನ್ ಪ್ರಬಂಧದ ಮಾಲೀಕತೆಯನ್ನು ಹೆಚ್ಚಿಸಿದನು. ಪ್ರಬಂಧ ಸಾಹಿತ್ಯಕ್ಕೆ ಹೆಚ್ಚಿನ ಮಹತ್ವವನ್ನು ತಂದುಕೊಟ್ಟವನು ಅಬ್ರಾಹ್ಮಕಾಲಿ; ಇವನು ಬರೆದಿದ್ದು ಸ್ವಲ್ಪೇ-ಸ್ವಲ್ಪಾದರೂ ಅದು ಕಾವ್ಯಾತ್ಮಕವಾಗಿತ್ತು. ಯಾಕೆಂದರೆ ಆತನು ಕವಿಯೂ ಆಗಿದ್ದರ ಫಲವಾಗಿ ಹದಿನಾರನೆ ಶತಮಾನದಲ್ಲಿ ಅನೇಕ ಸಾಹಿತಿಗಳು ಪ್ರಬಂಧ ರಚನೆ ಮಾಡಿದರು. ಇವರಲ್ಲಿ ಹೆಸರಿಸಬಹುದಾದ ಪ್ರಬಂಧಕಾರರೆಂದರೆ, 'ಥಾಮಸ್ ಬ್ರೌನ್ ಫುಟರ್', ಡ್ರೈಡನ್, 'ಸರ್ ವಿಲಿಯಮ್ ಟೆಂಪಲ್', 'ಮಿಲ್ಬನ್' ಮತ್ತು 'ಡ್ಯಾನಿಯಲ್ ಡಿಪ್ಪೆ' ಇವರುಗಳು. 'ರಾಬಿನ್ಸನ್ ಕ್ರುಸೊ'ದಂತಹ ಕಾಲ್ಪನಿಕ ಕತೆಯಿಂದ ಪ್ರಖ್ಯಾತನಾದ ''ಡಿ ಪೋಲಿಟಲ್ ರಿವ್ಯೂ'' ಎಂಬ ಮಾಲಿಕೆಯಲ್ಲಿ ಹಲವಾರು ಪ್ರಬಂಧಗಳನ್ನು ವೈಯಕ್ತಿಕ ಸುಂದರ, ಸಂಭಾಷಣೆಯ ಶೈಲಿಯಲ್ಲಿ ಬರೆದ ಡ್ರಾಯಡನ್‌ನ ಸತ್ವಪೂರ್ಣವಾದ ಪ್ರಬಂಧಗಳು ೧೮ನೇ ಶತಮಾನದಲ್ಲಿ ಅನುಸರಿಸಬಹುದಾದ ಮಾದರಿಗಳನ್ನು ಒದಗಿಸಿದವು. ೧೮ನೇ ಶತಮಾನದಲ್ಲಿ ಇಂಗ್ಲೀಷನಲ್ಲಿ ಪ್ರಬಂಧ ಸಾಹಿತ್ಯ ಒಂದು ಪ್ರಮುಖ ಸಾಹಿತ್ಯ ಪ್ರಕಾರವಾಗಿ ಬೆಳೆಯಿತು. ಕಾಫೀ ಹೌಸುಗಳ ಪ್ರಾಬಲ್ಯ ಆ ಕಾಲದಲ್ಲಿ ಹೆಚ್ಚಾಯಿತು. ಈ ಕಾಫೀ ಹೌಸುಗಳಲ್ಲಿ ಮಧ್ಯಮ ಹಾಗೂ ಉಚ್ಚವರ್ಗದ ಜನತೆ, ಅಂದಿನ ರಾಜಕಾರಣ ವಿಷಯಗಳನ್ನು ಚರ್ಚಿಸಲು ನೆರೆಯುತ್ತಿದ್ದರು. ಈ ಕಾಲ ಒಂದು ಸರ್ವಕಾಲವಾಗಿತ್ತು. ಆಡಿಸನ್, ಸ್ಟೀಲ್, ಗೋಲ್ಡಸ್ಮಿತ್, ಜಾನಸನ್ ಇನ್ನು ಹಲವಾರು ಲೇಖಕರಿಂದ ಈ ಸಾಹಿತ್ಯ ಲೋಕವು ಸಮೃದ್ಧವಾಗಿ ಬೆಳೆಯುವಂತಾಯಿತು. ಈಗ ಪತ್ರಿಕಾ ವೇದಕೆ ದೊರೆತದರ ಫಲವಾಗಿ ಸಾಹಿತಿಗಳು ಖ್ಯಾತರಾದರು. ಹೀಗೆ ಆರಂಭವಾದ ಅವರ ಪರಸ್ಪರ ಅವಲಂಬನೆ ಹತ್ತೊಂಬತ್ತು ಹಾಗೂ ಇಪ್ಪತ್ತನೆ ಶತಮಾನಗಲ್ಲಿಯೂ ಮುಂದುವರಿಯಿತು.

ಎಡಿಸನ್ ಹಾಗೂ ಸ್ಟೀಲ್ ಹಾಕಿದ ಪರಂಪರೆಯನ್ನು ಐವತ್ತು ವರ್ಷಗಳ ನಂತರ ಮತ್ತೆ ಅನುಸರಿಸಿದ ಬರಹಗಾರ ಆಲಿವ್ಹರ ಗೋಲ್ಡಸ್ಮಿತ್' ಅವನು ದಿ ಪಬ್ಲಿಕ ಲೇಜರ್ (THE PUBLIC LEDGER) ಮತ್ತು 'ದಿ ಬೀ'(THE BEE) ಪತ್ರಿಕೆಗಳಲ್ಲಿ 'ಚೈನೀಜ ಲೆಟರ್ಸ್' ಎಂಬ ಸರಣಿಯಲ್ಲಿ ಪ್ರಬಂಧಗಳನ್ನು ಪ್ರಕಟಿಸಿದ. ಇವು ನಂತರ 'ವಿಶ್ವಪ್ರಪಂಚದ ನಾಗರಿಕ' (THE CITIZEN OF WORD) ಎಂಬ ಗ್ರಂಥರೂಪದಲ್ಲಿ ಪ್ರಕಟವಾದವು. ಗೊಲ್ಡಸ್ಮೀತ್‌ನು ತುಂಬಾ ಪ್ರಸಿದ್ಧಿಯನ್ನು ಪಡೆದ ಮಹತ್ವದ ಪ್ರಬಂಧಕಾರ. ಇವನು ಸಾತ್ವಿಕ ಉದಾರದೈವಿ ಆಗಿದ್ದನು.

ಬಡವರಲ್ಲಿ ತುಂಬಾ ಅನುಕಂಪವುಳ್ಳವನಾಗಿದ್ದನು. ತಿಳಿ ಹಾಸ್ಯದ ಸರಳ ಶೈಲಿಯ ಈತನ ಪ್ರಬಂಧಗಳು ಹೆಚ್ಚು ಜನಪ್ರಿಯವಾಗಿವೆ. 'ಪಟ್ಟಣದಲ್ಲಿ ಒಂದು ರಾತ್ರಿ' ಎಂಬ ಪ್ರಬಂಧದಲ್ಲಿ ಈತನ ಅಂತಃಕರಣದ ಶ್ರೇಷ್ಠ ಉದಾಹರಣೆಯೊಂದನ್ನು ನಾವು ಕಾಣಬಹುದು. ಮನೆಯಿಲ್ಲದ ಭಿಕ್ಷುಕರ ನಡುರಾತ್ರಿಯ ಚಳಿಯಲ್ಲಿ ಲಂಡನ್ನಿನ ಬೀದಿಯಲ್ಲಿ ಮಲಗಿ ನರಳುತ್ತಿರುವುದನ್ನು ನೋಡಿ ಮಾನವ

ಜನ್ಮದ ಹುಟ್ಟಿನ ಬಗೆಗೆ ದೇವರನ್ನು ಪ್ರಶ್ನಿಸುವಂತೆ ಅಂತಃಕರಣಮುಖಿ ಈ ಲೇಖಕ ಈತನ ಇನ್ನೊಂದು ಪ್ರಮುಖ ಪ್ರಬಂಧ 'ಕರಿ ಉಡುಪಿನವರು' ಎಂಬುವುದು ಅತ್ಯಂತ ಮಹತ್ವದ ಪ್ರಬಂಧಗಳಲ್ಲಿ ಒಂದಾಗಿದೆ. ಹೀಗೆ ಇನ್ನು ಮುಂತಾದವುಗಳಲ್ಲಿ ಸೊಗಸಾದ ಚಿತ್ರಣವಿರುವುದನ್ನು ಕಾಣಬಹುದು.

ಇದೆ ಕಾಲದಲ್ಲಿ ಜಾನ್ಸನ್ ಎಂಬ ಮೇಧಾವಿ ಅವರ 'ರ್‍ಯಾಂಬ್ಲರ್' ಮತ್ತು 'ಐಡ್ಲರ' ಪತ್ರಿಕೆಗಳ ಮುಖಾಂತರ ಹಲವಾರು ಪ್ರಬಂಧಗಳನ್ನು ಬರೆದು ಪ್ರಕಟಿಸಿದ. ಪ್ರಪಂಚದ ಅನೇಕ ವಿಷಯಗಳ ಬಗ್ಗೆ ತಮ್ಮ ವಿಚಾರಗಳನ್ನು ಆತ ವ್ಯಕ್ತಪಡಿಸಿದ. ಅವನದು ಗಡಚಾದ ಗಂಭೀರ ಶೈಲಿ. ಇದೇ ಗುಂಪಿಗೆ ಸೇರಿದ 'ಲೇಹಂಟ' ಎಂಬುವನು 'ಎಕ್ಸಾಮಿನರ್ ' ಎಂಬ ಪತ್ರಿಕೆಯಲ್ಲಿ ಅನೇಕ ಪ್ರಬಂಧಗಳನ್ನು ಪ್ರಕಟಿಸಿ ಲಲಿತ ಪ್ರಬಂಧ ಸಾಹಿತ್ಯಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದರು. ಈ ಪರಂಪರೆಯನ್ನು ಮುಂದೆಯೂ ಲಂಡನ್ನಿನ ಹಲವು ಪತ್ರಿಕೆಗಳು ನಡೆಸಿಕೊಂಡು ಬಂದವು. ಉದಾ. "ದಿ ಲಂಡನ್ ಮೆಗಝಿನ್' 'ದಿ ಎಡಿನ್ ಬರ್ಗ್‌ರಿವ್ಯೂ' 'ದಿ ಮೆಂಚಸ್ಟರ್ ಗಾರ್ಡಿಯನ್' 'ದಿ ಪಾಲ್ ಮಾಲ್ ಗೆ ಝೆಟ್' 'ದಿ ಮಿನಿಸ್ಟರ್ ಗೆಜೆಟ್ ' ಮುಂತಾದವು ಗೊಲ್ಡಸ್ಮಿತನ ತರುವಾಯ ೧೯ನೇ ಶತಮಾನದಲ್ಲಿ ಲಲಿತ ಪ್ರಬಂಧ ಸಾಹಿತ್ಯ ಒಂದು ನಿಶ್ಚಿತ ಸಾಹಿತ್ಯ ಪ್ರಕಾರವಾಗಿ ರೂಪಗೊಂಡಿತು. ಹಲವಾರು ಬಗೆಯ ಪ್ರಬಂಧಗಳು ಮೂಡಿಬಂದವು. ಈ ಶತಮಾನವನ್ನು ಪ್ರಬಂಧ ಸಾಹಿತ್ಯ ಪ್ರಕಾರದ 'ಸುವರ್ಣಯುಗವೆಂದೇ' ಹೇಳಬಹುದಾಗಿದೆ. ಈ ಯುಗದ ಪ್ರಮುಖ ಪ್ರಬಂಧಕಾರರೆಂದರೆ 'ವಿಲಿಯಂ ಹ್ಯಾಜಲಿಲ್ ' ಓದುಗರ ಮನಸ್ಸಿನಲ್ಲಿ ಗೋಡೆಯಲ್ಲಿ ಹರಳಿಟ್ಟಂತೆ ಸ್ಪುಟವಾಗಿ ಮನಸ್ಸಿನಲ್ಲಿ ನೆಲಸುವಂತೆ ಬರವಣಿಗೆಯ ಶೈಲಿ ಚಾಣಾಕ್ಷತನ. ಅವನದು ತನ್ನ ಚಿಂತನೆಗಳನ್ನು ಕಾವ್ಯಮಯವಾಗಿ ನಿರೂಪಿಸುವುದರಲ್ಲಿ ಎತ್ತಿದ ಕೈ. ಈತನ ಜೊತೆಗೆ ಈ ಯುಗದ ಹರಿಕಾರರೆಂದರೆ, ಥಾಮಸ್ಸ ಡಿಕ್ವಿನ್ಸಿ' ಚಾರ್ಲ್ಸ ರ್‍ಯಾಂಬ' ಇನ್ನು ಮೊದಲಾದವರು. ಈ ಲ್ಯಾಂಬ ಹಲವು ಅತ್ಯಂತ ಸುಂದರ ಪ್ರಬಂಧಗಳ ಬರಹಗಾರ, ಅವನು 'ಲಂಡನ್ ಮೆಗಝಿನ್' ಪತ್ರಿಕೆಯಲ್ಲಿ ತನ್ನ ಪ್ರಬಂಧಗಳನ್ನು ಪ್ರಕಟಿಸಿದ. ಅವನೊಬ್ಬ 'ಶೈಲಿಯರಾಜ' ಅವನ ಲಾಲಿತ್ಯ ಅವನದೇ ಮೃದು ಸ್ವಭಾವದವನೂ ವಾತ್ಸಲ್ಯ ಪೂರ್ಣನೂ ಆದ ಲ್ಯಾಂಬ ಹೃದಯ ಕರಗುವಂತೆ ಪ್ರಬಂಧಗಳಲ್ಲಿ ಹೆಚ್ಚಾಗಿ ತನ್ನ ಬಗ್ಗೆಯೇ ಬರೆದ ಅವನಿಗೆ 'ಪ್ರಬಂಧಕಾರರ ರಾಜ' ಎಂದು ಕರೆಯುತ್ತಿದ್ದರು. 'ಪ್ರಾಚೀನ ಪಿಂಗಾಣಿ ವಸ್ತುಗಳು' ಈತನ ಪ್ರಮುಖ ಪ್ರಬಂಧ 'ಇಲಿಯಾನ' ಪ್ರಬಂಧಗಳೆಂದು ಹೆಸರಾದವು. ಈ ಇಲಿಯಾನ ಪ್ರಬಂಧ ಸಂಕಲನದಲ್ಲಿ '೩೨' ಪ್ರಬಂಧಗಳು ಹೊರಬಂದವು. 'ನನ್ನ ಬಂಧುವರ್ಗ', 'ನನ್ನ ಮೊದಲ ನಾಟಕ', 'ಕನಸಿನ ಮಕ್ಕಳು', 'ಬಡನಂಟರು', 'ಅಖಿಲ ಮುರ್ಖರ ಜಯಂತಿ' ಇಂತಹ ಹಲವು ಪ್ರಬಂಧಗಳು ಇಂಗ್ಲಿಷ್ ಪ್ರಬಂಧ ಸಾಹಿತ್ಯದಲ್ಲಿಯೇ ಒಂದು ಅಮರವಾದ ಶ್ರೇಷ್ಠದರ್ಜೆಯ ಸುಂದರ ಕೃತಿ.

ಇಪ್ಪತ್ತನೆಯ ಶತಮಾನದಲ್ಲಿ ಚೆಸ್ಟರಟನ್ , ಲಿಂಚ್ ಮ್ಯಾಕ್ಸಬೀರ್ ಬ್ಲಾಮ್, ಎ.ಜಿ.ಗಾರ್ಡಿನರ್, ಇ.ವಿ.ಲ್ಯೂಕಾಸ್ ಮೊದಲಾದವರು ನೀಡಿದ ಪ್ರಬಂಧಗಳು ಈ ಸಾಹಿತ್ಯ ಪ್ರಕಾರ ಫಲವಿತವಾಗಿ ಬೆಳೆದು ಬರುವಲ್ಲಿ ಅತ್ಯಂತ ಪರಿಣಾಮಕಾರಿಯಾಗಿದೆ. ಜಿ.ಕೆ.ಚೆಸ್ಟರಟನ್ ಒಬ್ಬ ವಿದ್ವಾಂಸ. ಈತನ ತಾರ್ಕಿಕ ಶಕ್ತಿ ಅಗಾಧವಾದುದು. ಅವನ ಬರವಣಿಗೆಯ ರೀತಿ ವಿಶಿಷ್ಟವಾದುದು ಅನೇಕ ಕಡೆಗಳಲ್ಲಿ ವಿರೋಧಾಭಾಸದ ಹೇಳಿಕೆಗಳನ್ನು ನೀಡುತ್ತ ಪ್ರಬಂಧ ಬೆಳೆಸುವುದು ಈತನ ಜಾಯಮಾನ. ಈತನ ಪ್ರಬಂಧಗಳ ಶೀರ್ಷಿಕೆಗಳು ಕುತೂಹಲವೂ ಆಕರ್ಷಿಕವೂ ಆಗಿದ್ದವು. ಉದಾ. 'ಕೋಪಗೊಂಡ ರಸ್ತೆ' 'ದೆವ್ವಗಳ ಅಂಗಡಿ' 'ವೈದಿಕನಾದ ಹಜಾಮ' ಇತ್ಯಾದಿ ಶೀರ್ಷಿಕೆಗಳನ್ನು ನೋಡಿದಾಗ ಇವುಗಳ ಮಹತ್ವ ಅರಿಯುತ್ತದೆ. ಇಷ್ಟೇ ಪ್ರಖ್ಯಾತನಾದ ಇನ್ನೋರ್ವ ಪ್ರಬಂಧಕಾರ 'ಇ.ವಿ.ಲ್ಯೂಕಾಸ್' ಈತನ ಪ್ರಬಂಧಗಳು ಸಣ್ಣ ಕತೆಗಳಂತೆ ವರ್ಣನಾತ್ಮಕ ಶೈಲಿಯಲ್ಲಿ ಹಾಸ್ಯಮಯವಾಗಿ ಸ್ವಾರಸ್ಯಮಯವಾಗಿವೆ. 'ಸಮಿತಿ ಸದಸ್ಯರು', 'ಪಟ್ಟಣಗಳ ಸ್ನೇಹಿತ', 'ಅಸಫಲನಾದ ತತ್ತ್ವಜ್ಞಾನಿ' ಇವು ಜನಪ್ರಿಯವಾದವು. ಒಟ್ಟಾರೆ ಇವರ ಅಲಂಕಾರಿಕ ಭಾಷೆ. ಓದುಗರಿಗೆ ರಂಜನಿಯಯಾದದ್ದು ಓದುಗರಿಗೆ ಖುಷಿ ಕೊಡುತ್ತವೆ. ಪ್ರಬಂಧ ಸಾಹಿತ್ಯದ ಉನ್ನತ ದರ್ಜೆಯ ಸಾಹಿತಿ ಎಂದರೆ ಎ.ಜಿ.ಗಾರ್ಡಿನರ್ ಈತನು ತನ್ನ ಪ್ರಬಂಧಗಳಲ್ಲಿನ ನಿರೂಪಣಾ ಶೈಲಿಯನ್ನು ಮೆಚ್ಚಿಕೊಂಡಿರದ ಪ್ರಬಂಧ ಸಾಹಿತ್ಯ ಓದುಗರೇ ಇಲ್ಲವೆನ್ನುವಷ್ಟು ಅದ್ಭುತವಾದ ನಿರೂಪಣೆ ಈತನ ಪ್ರಬಂಧ ಸಂಕಲನಗಳಲ್ಲಿ ಇದೆ. ಈತನ ಪ್ರಸಿದ್ಧ ಸಂಕಲನಗಳೆಂದರೆ 'ಲೀವ್ಸ ಇನ್ ದಿ ವಿಂಡ್', 'ಪೇಬಲ್ಸ ಆನ್ ದಿ ಶೋರ್' ಪ್ರಬಂಧಗಳಲ್ಲಿ ತಿಳಿ ಹಾಸ್ಯ, ವಿಚಾರ ಪ್ರಚೋದನೆಯೂ ಇದೆ. ಇವುಗಳ ಜೊತೆಗೆ ಈತನ ಅವಿಸ್ಮರಣೀಯ ಪ್ರಬಂಧ ಸಂಕಲನ 'ಒಂದು ನಾಯಿಯನ್ನು ಕುರಿತು'(All about a dog) ಇದು ಒಂದು ಶ್ರೇಷ್ಠ ಉದಾಹರಣೆ ಕಣ್ಮುಂದೆ ಕಟ್ಟುವಂಥ ವರ್ಣನೆಗಳನ್ನು ನೀಡುವ ಅವನ ಚಾತುರ್ಯಕ್ಕೆ 'ಜಾಮ ಸಾಹೇಬ ಆಫ್ ನವನಗರ' ಸಾಕ್ಷಿ ಗಾರ್ಡಿನರನಂತೆಯೇ 'ಬೇಲಾಕ್' ಒಬ್ಬ ಚಿತ್ರಕ ಶಕ್ತಿಯ ಪ್ರಬಂಧಕಾರ ಇವನ ಸಮಕಾಲೀನನಾದ ರಾಬರ್ಟ್‌ಲಿಂಡ್ ಒಬ್ಬ ಮೇಧಾವಿ ಲೇಖಕ, ಇವನ ಕಥನಕಲೆ ವಿಶೇಷಣ. ಸಾಮರ್ಥ್ಯ ಗಮನಾರ್ಹವಾದುದು. 'ಬೆಕ್ಕುಗಳು', 'ಮೊಟ್ಟೆಗಳು', 'ಒಳ್ಳೆಯ ಸಂಕಲ್ಪಗಳು' 'ಅಜ್ಞಾನದ ಸಂತೋಷಗಳು' ಇವುಗಳು ಓದಲು ತೊಡಗಿಸುವಂತಹ ಪ್ರಬಂಧಗಳಾಗಿವೆ.

ಪ್ರೆಂಚ್ ಸಾಹಿತಿ ಮೈಕೆಲ್ ಮೂಂಟೇನ್ ಹದಿನಾರನೇ ಶತಮಾನದ ಉತ್ತರಾರ್ಧದಲ್ಲಿ 'ಎಸ್ಸೆಜ್' ಎಂಬ ಮೊದಲಬಾರಿ ತನ್ನ ಬರಹಗಳನ್ನು ಪ್ರಾರಂಭಿಸಿ ಇಂಗ್ಲೀಷ್ ಪ್ರಬಂಧ ಸಾಹಿತ್ಯದ ಧನಾತ್ಮಕವಾದ ಹುಟ್ಟಿಗೆ ಕಾರಣವಾಗಿ ನಂತರ ಈ ಪ್ರಬಂಧ ಸಾಹಿತ್ಯವು ಮೇಲೆ ತಿಳಿಸಿದ ಹಾಗೆ ಅನೇಕ ವಿಶ್ವವಿಖ್ಯಾತ ಪ್ರಬಂಧ ಸಾಹಿತಿಗಳನ್ನು ಪರಿಚಯಿಸುವುದರ ಜೊತೆಗೆ ಇದನ್ನು ಪ್ರಪಂಚದ ಒಂದು ಪ್ರಮುಖ ಸಾಹಿತ್ಯ ಮಾಡುವಲ್ಲಿ ಮೂಂಟೇನನಿಂದ ಲ್ಯೂಕಾಸ್‌ನವರೆಗಿನ ಇಂಗ್ಲಿಷ್ ಪ್ರಬಂಧಗಳ ವೈವಿಧ್ಯತೆಯ ಕಾರಣವೆಂದು ಹೇಳಬಹುದು. ಅಷ್ಟೇ ಅಲ್ಲದೆ ಈ ಸಾಹಿತ್ಯ ಪ್ರಕಾರವನ್ನು ಅಷ್ಟೆ ಲವಲವಿಕೆಯಿಂದಲೇ ಬಳಸಿದ್ದು ಇಂಗ್ಲೀಷ್ ಪ್ರಬಂಧ ಸಾಹಿತ್ಯದ ಒಂದು ವೈಶಿಷ್ಟ್ಯವಾಗಿದೆ.

ಕನ್ನಡ ಲಲಿತ ಪ್ರಬಂಧ ಸಾಹಿತ್ಯವು ಬೆಳೆದು ಬಂದ ದಾರಿಯನ್ನು ನಾವು ಗಮನಿಸಿದಾಗ ಕನ್ನಡ ಲಲಿತ ಪ್ರಬಂಧ ಪ್ರಾರಂಭವಾದದ್ದು ನವೋದಯ ಸಾಹಿತ್ಯದೊಂದಿಗೆ, ನವೋದಯಕ್ಕೆ ಒಂದು ಪೂರ್ವಸಿದ್ಧತೆ ನಡೆದಿರುವಂತೆ ಈ ಪ್ರಬಂಧ ಬರವಣಿಗೆಯಲ್ಲಿ ಒಂದಿಷ್ಟು ಪೂರ್ವಸಿದ್ಧತೆಯಿರುವುದನ್ನು ಸಾಹಿತ್ಯ ಇತಿಹಾಸಕಾರರು ಗುರುತಿಸಿದ್ದಾರೆ. "೧೮೮೮ರಲ್ಲಿ 'ಲೋಕರಹಸ್ಯ' ಎಂಬ ಪ್ರಪ್ರಥಮ ಅನುವಾದಿತ ಪ್ರಬಂಧ ಸಂಕಲನವಾಗಿದ್ದು ಇದು ಕನ್ನಡದ ಮೊದಲ ಪ್ರಬಂಧಸಂಕಲನವಾಗಿದೆ. ತದನಂತರ ಕನ್ನಡದಲ್ಲಿ ಲಲಿತ ಪ್ರಬಂಧಗಳು ಅನೇಕ ದಿನ ಪತ್ರಿಕೆ, ವಾರಪತ್ರಿಕೆ, ಮಾಸಪತ್ರಿಕೆ, ವಿಶೇಷ ಪುರವಣಿಗಳು, ಜಯಂತಿ, ಜಯಕರ್ನಾಟಕ, ಪ್ರಬುದ್ಧ ಕರ್ನಾಟಕ, ಕರ್ಮವೀರ ಇನ್ನು ಹಲವು ಪತ್ರಿಕೆ ಮಾಧ್ಯಮಗಳಲ್ಲಿ ಒಂದೊಂದಾಗಿ ಬಿಡಿ ಬಿಡಿ ಈ ಲೇಖನಗಳು ಪ್ರಕಟವಾಗುವುದರೊಂದಿಗೆ ಇದು ತನ್ನ ಮೊದಲ ಹೆಜ್ಜೆಗಳನ್ನು ಹಾಕತೊಡಗಿತು. 'ಲೋಕರಹಸ್ಯ' ಸಂಕಲನವು ಮೂಲತಃ ಬಂಗಾಳಿ ಸಾಹಿತಿ ಬಂಕಿಮಚಂದ್ರರ ಕೃತಿಯಿಂದ ಕನ್ನಡಕ್ಕೆ ಜಿ.ವೆಂಕಟಾಚಾರ್ಯರು ಅನುವಾದಿಸಿದರು".[೩] ೧೮೮೮ರಲ್ಲಿ 'ಗ.ಹು.ಹೊನ್ನಾಪುರಮಠ' ಅವರು 'ನೀತಿಮಂಜರಿ' ಎಂಬ ಹೆಸರಿನಲ್ಲಿ ಮೂವತ್ತನಾಲ್ಕು ಲಲಿತ ಪ್ರಬಂಧಗಳ ಸಂಕಲನವನ್ನು ಪ್ರಕಟಿಸಿದರು. ಮುಂದೆ ೧೯೧೨ರಲ್ಲಿ 'ಆರ್. ಶ್ರೀನಿವಾಸರಾವ್' ಅವರ 'ವಿವೇಕ ಮಂಜರಿ' ಪ್ರಕಟವಾಯಿತು. ಇದರಲ್ಲಿ ಸಂಕೀರ್ಣ ಜಾತಿಯ ಪ್ರಬಂಧಗಳ ಜೊತೆಗೆ ಲಲಿತ ಪ್ರಬಂಧಗಳೂ ಸೇರಿದ್ದು ಕಂಡುಬರುತ್ತದೆ. ಮುಂದೆ ೧೯೧೩ರಲ್ಲಿ ಬಿ. ವೆಂಕಟಾಚಾರ್ಯರ 'ದಾಡಿಯ ಹಳಿಕೆ' ಕನ್ನಡ ಲಲಿತ ಪ್ರಬಂಧದ ಪ್ರಪ್ರಥಮ ಸ್ವತಂತ್ರ ಪ್ರಬಂಧ ಸಂಕಲನವಾಗಿ ಪ್ರಕಟವಾಯಿತು. ೧೯೧೮ರಲ್ಲಿ ಇವರೆ ಮತ್ತೊಂದು 'ಚಿತ್ರ ವಿಚಿತ್ರಾವಳಿ' ಎಂಬ ಸ್ವತಂತ್ರ ಲಲಿತ ಪ್ರಬಂಧ ಸಂಕಲನವನ್ನು ಪ್ರಕಟ ಮಾಡಿದರು. ಇದು ಕನ್ನಡದ ಲಲಿತ ಪ್ರಬಂಧ ಸಾಹಿತ್ಯದ ಪ್ರಾರಂಭಿಕ ಹೆಜ್ಜೆಗಳನ್ನು ಗಟ್ಟಿಯಾಗಿ ಊರುವಂತೆ ಮಾಡಿದೆ. ಇವರ ಓರಗೆಯವರಾದ ಕೆ. ಲಕ್ಷ್ಮಣರಾವ್ ಅವರು ಕೂಡಾ 'ಕಲಿಯುಗ ಸುಧನ್ವ' ಎಂಬ ಮತ್ತೊಂದು ಸ್ವತಂತ್ರ ಲಲಿತ ಪ್ರಬಂಧ ಸಂಕಲನವು ಈ ಆರಂಭಿಕ ಹೆಜ್ಜೆಗಳಲ್ಲಿ ಹೆಜ್ಜೆಯನ್ನು ಹಾಕಿತು. ಇವರ ಪ್ರೇರಣೆಯಿಂದಲೇ ಮುಂದೆ ೧೯೨೩ರಲ್ಲಿ ಬಾಳಾಜಿ ಹಳೆಪೇಟೆಯವರ 'ಎಲ್ಲಿದೆ ಸ್ತ್ರೀಯರಿಗೆ ಸೌಂದರ್ಯವು' ಎಂಬ ಲಲಿತ ಪ್ರಬಂಧ ಸಂಕಲನ ಪ್ರಕಟವಾಯಿತು. ನಂತರ ಸಳಕೆರೆ ಜಯರಾವ್ ಅವರ 'ಒಂದುಗಳಿಗೆ ಮೋಜು' ಮತ್ತು ೧೯೨೭ರಲ್ಲಿ ಬೆಳಕಿಗೆ ಬಂದ ರಾಘವೇಂದ್ರ ಕೇಶವರಾವ್ ಅವರ 'ಇತ್ಯಾದಿಯ ಆತ್ಮ-ವೃತ್ತ ಕಥನ' ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ಇದು ಪ್ರಾರಂಭ ಮಾತ್ರ ಹಾಗೂ ಈ ಅವಧಿಯಲ್ಲಿ ಬಂದ ಕನ್ನಡ ಲಲಿತ ಪ್ರಬಂಧ ಸಾಹಿತ್ಯವನ್ನು ರಚಿಸಿದ ಲೇಖಕರಿಗೆ ಲಲಿತ ಪ್ರಬಂಧಕಾರರು ಎನ್ನುವಷ್ಟು ಆಗಲಿಲ್ಲ. ಈ ಕಾಲದಲ್ಲಿ ವಿ.ಸೀತಾರಾಮಯ್ಯನವರು. 'ಪಂಪಾಯಾತ್ರೆ'(೧೯೨೭) ಪ್ರಕಟವಾಯಿತು. ಇದು ಲಲಿತ ಪ್ರಬಂಧದ ಲಕ್ಷಣಗಳನ್ನು ಹೊಂದಿಯೂ ಅದರ ಪರಿಮಿತಿಯನ್ನು ಮೀರಿ ನಿಲ್ಲುವುದರಿಂದ ಇದನ್ನು ಲಲಿತ ಪ್ರಬಂಧ ಮಿತಿಯಲ್ಲಿ ಸೇರಿಸದೆ ಇರುವುದು ಸೂಕ್ತವಲ್ಲ ಎಂಬ ಭಾವನೆಯೂ ಕೆಲವು ವಿಮರ್ಶಕರಲ್ಲಿದೆ.

ಈ ಪೂರ್ವದಲ್ಲಿನ ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಕೃಷಿಯು ಅಷ್ಟಾಗಿ ಬೆಳೆದು ಬಾರದೆ ಇದ್ದರೂ, ಇದರ ನಿಜವಾದ ಸಾಹಿತ್ಯ ಕೃಷಿಯು ಕಂಡುಬರುವುದು. ೧೯೩೦ರ ನಂತರದ ಸಾಹಿತ್ಯದಲ್ಲಿ ಇದನ್ನು ಕನ್ನಡ ಲಲಿತ ಪ್ರಬಂಧದ ಎರಡನೆ ಹಾಗೂ ಅತ್ಯಂತ ಮಹತ್ವದ ಘಟ್ಟವೆಂದು ಕೂಡಾ ಕರೆಯುವರು. ಈ ಅವಧಿಯಲ್ಲಿನ ಸಾಹಿತ್ಯವನ್ನು ಭಾವನೆ ಪ್ರಧಾನ ಸಾಹಿತ್ಯವಾದ ನವೋದಯ ಸಾಹಿತ್ಯದಲ್ಲಿ ಗದ್ಯಪ್ರಕಾರದ ಸಾಹಿತ್ಯವೂ ಹೇರಳವಾಗಿ ಬೆಳೆದುಬಂದಿತು. ಅದರಲ್ಲಿ ಕಥೆಯಂತೆ ಲಲಿತ ಪ್ರಬಂಧ ಸಾಹಿತ್ಯವು ತನ್ನ ಗರಿಗಳನ್ನು ಸಂಪೂರ್ಣವಾಗಿ ಬಿಚ್ಚತೊಡಗಿತು. ಅಷ್ಟೇ, ಅಲ್ಲದೆ ವಿಶಿಷ್ಟ ಪ್ರಕಾರದ ಎಲ್ಲ ಲಕ್ಷಣಗಳನ್ನು ಒಳಗೊಂಡ ಕೃತಿ ಪ್ರಕಟವಾದದ್ದು ಇದೆ ಅವಧಿಯಲ್ಲಿ "೧೯೩೦ರಲ್ಲಿ ಲಲಿತ ಪ್ರಬಂಧ ಚರಿತ್ರೆಯಲ್ಲಿ ಗಮನಾರ್ಹ ವರ್ಷ. ಆ ವರ್ಷದಲ್ಲಿ ಕನ್ನಡದ ಪ್ರಸಿದ್ದ ಲೇಖಕರು ಕೆಲವು ಪ್ರಬಂಧ ಸಂಕಲನಗಳನ್ನು ಹೊರತಂದರು. ಅಂಥವರಲ್ಲಿ ಪ್ರಮುಖರೆಂದರೆ ಎಂ.ಜಿ.ವೆಂಕಟೇಶಯ್ಯ ನವರ ಹೆಸರು ಮೊದಲಿಗೆ ಬರುತ್ತದೆ. ಅವರು ತಮ್ಮ ಪ್ರಬಂಧಗಳನ್ನು 'ಪುಲ್ಲಯ್ಯನ ಪ್ರಬಂಧಗಳು' ಎಂದು ಎರಡು ಭಾಗಗಳ್ಲಿ ಪ್ರಕಟಿಸಿದರು. ಎರಡನೆಯ ಭಾಗ ೨೨ ಪುಟಗಳಲ್ಲಿ ನಾಲ್ಕು ಪ್ರಬಂಧಗಳನ್ನು ಒಳಗೊಂಡಿದೆ".[೫] 'ಜೈಲ ದರ್ಶನ, ಶೈಲಿ, ಮೀಸೆ, ಮುಖಸ್ತುತಿ ಇವೆ. ಆ ನಾಲ್ಕು ಪ್ರಬಂಧಗಳು. ಪ್ರಬಂಧಕಾರರು ಒಮ್ಮೆ ಜೈಲನ್ನು ನೋಡಲು ಹೋದ ಬಗ್ಗೆ ಬರೆಯುತ್ತ ಅಷ್ಟೇನು ಮಧುರವಲ್ಲದ ಅನುಭವಗಳನ್ನು ಸಹ ತಮ್ಮ ವಿಶಿಷ್ಟ ವಿಷಯ ನಿರೂಪನೆಯಿಂದ ಸೊಗಸಾಗಿ ಚಿತ್ರಿಸಿದ್ದಾರೆ. ಪ್ರಬಂಧದ ಮಧ್ಯಮಧ್ಯ ತೋರುವ ಹಾಸ್ಯದ ಲೇಪದಿಂದಾಗಿ ಅವರು ಓದುಗರ ಮನಸ್ಸನ್ನು ಹಗುರಗೊಳಿಸುತ್ತಾರೆ. ಒಟ್ಟಿನಲ್ಲಿ ಪ್ರಬಂಧದ ಲಕ್ಷಣ ಹಾಗೂ ಬರವಣಿಗೆಯ ಶೈಲಿಗಳನ್ನು ಚೆನ್ನಾಗಿ ಮನಗಂಡಿದ್ದ ಎಂ.ಜಿ.ವೆಂಕಟೇಶಯ್ಯನವರು ಆಡುಮಾತಿನೊಂದಿಗೆ ವಸ್ತು ವೈವಿಧ್ಯದಿಂದ ಏನನ್ನು ಮೀತಿಮೀರಿ ಬೆಳೆಸದೆ ಕನ್ನಡಕ್ಕೆ ಒಳ್ಳೆಯ ಲಲಿತ ಪ್ರಬಂಧಗಳನ್ನು ನೀಡಿದ್ದಾರೆ. "೧೯೩೦ರಲ್ಲಿ ಗೆಳೆಯರ ಗುಂಪಿನ 'ಹರಟೆಗಳು'[೬] ಎಂಬ ಕೃತಿಯಲ್ಲಿ ೧೯೩೦ರ ಪೂರ್ವದ ಲಲಿತ ಪ್ರಬಂಧ ಸಾಹಿತ್ಯದ ಸರ್ವಾಂಗ ಸ್ವರೂಪದ ಒಂದು ಸುಂದರ ಚಿತ್ರಣವಿದೆ. 'ಸುಳುವು-ಹೊಳವಿ'ನಲ್ಲಿ ವಿ.ಕೃ.ಗೋಕಾಕರು ಕನ್ನಡ ಲಲಿತ ಪ್ರಬಂಧ' ಎಂಬ ಸಮಕಾಲೀನ ಸಾಹಿತ್ಯ ಪ್ರಕಾರದ ಒಂದು ಸರಸ ಲಲಿತ ಪ್ರಬಂಧ, ಸುಳುವು-ಹೊಳಿವಿನಲ್ಲಿ 'ವ್ಯಕ್ತಿನಿಷ್ಠ' 'ವರ್ಣನಪರ', 'ಚಿಂತನಪರ', 'ನಿರುಪಣಾತ್ಮಕ' ಹೇಗೆ ಮುಖ್ಯವಾಗಿ ಐದು ಪ್ರಕಾರದ ಪ್ರಬಂಧಗಳನ್ನು ಕಾಣುತ್ತೇ. 'ಹರಟೆಗಳು' ಸಂಕಲನಗಳನ್ನು ಹಾಗೂ ಲಲಿತ ಪ್ರಬಂಧಗಳನ್ನು 'ಹರಟೆ' ಎಂದೇ ಕರೆಯುತ್ತಿದ್ದುದನ್ನು ಗಣನೆಗೆ ತಂದುಕೊಂಡರು. ಈ ಸಂಕಲನದ ಎಲ್ಲ ಬರಹಗಳೂ ಲಲಿತ ಪ್ರಬಂಧಗಳಾಗಿರಲಿಲ್ಲ. ದ.ರಾ.ಬೇಂದ್ರೆ, ವಿ.ಕೃ.ಗೋಕಾಕ, ರಂ.ಶ್ರೀ., ಮುಗಳಿ, ಹಲಸಂಗಿ ಚೆನ್ನಮಲ್ಲಪ್ಪ, ಮುಂತಾದವರ ಉತ್ತಮ ಪ್ರಬಂಧಗಳು ಇದರಲ್ಲಿ ಸೇರಿವೆ. ಹಾಗೆ ಇದೆ ಅವಧಿಯಲ್ಲಿ ಪು.ತಿ.ನರಸಿಂಹಚಾರ್ ಅವರು 'ರಾಮಾಚರಿಯ ನೆನಪುಗಳು' ಎಂಬ ಮೊದಲ ಭಾವನಾಂಶ ಚಿತ್ರಗಳಿಗೆ ಪ್ರಧಾನವಾಗಿರುವಂತೆ

ಒಂದು ಪ್ರಬುದ್ಧ ಲಲಿತ ಪ್ರಬಂಧ ಸಂಕಲನವನ್ನು ಪ್ರಕಟಿಸಿದ್ದಾರೆ. ಇವುಗಳು ಹೆಚ್ಚಾಗಿ ರಚನಾ ಶೈಲಿಯಲ್ಲಿ ಕಥನಾತ್ಮಕ ಅಂಶಗಳನ್ನು ಒಳಗೊಂಡಿವೆ. ಹಾಗೆ ಪು.ತಿ.ನರಸಿಂಹಾಚಾರರು 'ರಾಮಾಚಾರಿಯ ನೆನಪುಗಳು' ಪ್ರಬಂಧವನ್ನು ಪ್ರಕಟಿಸಿದರು. ಈ ಲೇಖನಗಳು ಪ್ರಬಂಧದ ಬರವಣಿಗೆಗೆ ಬಹಳ ಹತ್ತಿರವಾಗಿದ್ದವು. ಪುತಿನ ಅವರೇ ಅವುಗಳನ್ನು ಭಾವನಾ ಚಿತ್ರಗಳೆಂದು ಕರೆಸಿದ್ದಾರೆ.

ಒಟ್ಟಾರೆ ೧೯೩೦ರ ನಂತರ ಕನ್ನಡ ಲಲಿತ ಪ್ರಬಂಧ ಸಂಕಲನಗಳ ಪ್ರಬಂಧ ಎಂಬ ಪ್ರಕಾರ ಸಾಹಿತ್ಯವು. ಈ ಘಟ್ಟದಲ್ಲಿ ಅತ್ಯಂತ ಫಲಪ್ರದವಾಗಿ ಹಾಗೂ ಸ್ಪಷ್ಟವಾಗಿ ಇದುವೇ ಪ್ರಬಂಧ' ಎನ್ನುವಷ್ಟರ ಮಟ್ಟಿಗೆ ಅದರ ಲಕ್ಷಣಗಳುಳ್ಳ ಸಂಕಲನಗಳು ಬಹಳವಾಗಿ ಪ್ರಕಟಗೊಂಡವು. ವಸ್ತುವಿನಲ್ಲೂ, ನಿರೂಪಣೆಯಲ್ಲೂ ತುಂಬ ವೈವಿಧ್ಯಮಯ ಪ್ರಬಂಧಗಳು ಮೂಡಿಬಂದವು. ಈ ದಿಶೆಯಲ್ಲಿ ಅನೇಕ ಲೇಖಕರ ಶ್ರಮವು ಫಲಪ್ರದವಾಯಿತು. ಕನ್ನಡ ಪ್ರಬಂಧ ತನ್ನ ಮೊದಲ ಘಟ್ಟದಲ್ಲಿ ಅಂದರೆ ೧೯೩೫ ರಿಂದ ೧೯೬೦ರ ಅವಧಿಯಲ್ಲಿಯೇ ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿತು. ೧೯೩೬ರಲ್ಲಿ ಮಂಗಳೂರಿನ ಮಿತ್ರಮಂಡಲಿ ಪ್ರಕಟಿಸಿದ 'ತರಂಗ' ಎಂಬ ಸಂಕಲನವನ್ನು ಇಲ್ಲಿ ಹೆಸರಿಸಬೇಕಾಗುತ್ತದೆ. ಇದರಲ್ಲಿ ಎಂ.ಎನ್.ಕಾಮತ್‌ರ ಸುಪ್ರಸಿದ್ಧ ಪ್ರಬಂಧ 'ನನ್ನಕೊಡೆ' ಸೇರ್ಪಡೆಯಾಗಿದೆ. ಈ ಪ್ರಬಂಧದ ಪೀಠಿಕೆಯ ಕೆಲವು ಸಾಲು ಹೀಗಿದೆ. "ಎರಡು ಮಳೆ ಸುರಿಯಿತೋ ನಾಯಿಕೊಡೆ, ಕಪ್ಪೆಕೊಡೆ, ಕಾಗೆಕೊಡೆ ಮೊದಲಾದ ಅಳಿಂಬೆಗಳು ತಲೆಯೆತ್ತುವುವು. ಮತ್ತೇನು ಮನುಷ್ಯ ಕಡಿಮೆಯಾವನೇ? ಅವಸರವಸರವಾಗಿ ತನ್ನ ಕೊಡೆ ಎಲ್ಲಿದೆ ಎಂದು ಹುಡುಕುತ್ತಾ ಮನೆಯನ್ನೆಲ್ಲ ತಲೆಕೆಳಗಾಗುವಂತೆ ಮುಗುಚುವನು. ಎಂಟು ತಿಂಗಳು ವಿರಹ ಜ್ವರ ಹಿಡಿದು ಮೂಲೆ ಪಾಲಾದ ಕೊಡೆಯು, ಜೀರ್ಣಶೀರ್ಣವಾಗಿ ಇದೇ ಮಳೆಗಾಲದ ನಾಲ್ಕು ತಿಂಗಳ ವಿರಹಕ್ಕಾಗಿ ನಮ್ಮ ಪ್ರಾಣಗ್ರಹಣ ಮಾಡುತ್ತದೆ. ಪರಂತು, ಎಲ್ಲ ವಧುಗಳಂತೆ ವಿರಹಿಣಿಯಾದ ಕೊಡೆಯು ಕೈಹಿಡಿದವನ ತಲೆಯ ಮೇಲೂ ಕೆಲವು ಕಣ್ಣೀರು ತಟುಕುಗಳನ್ನು... ಸುರಿಸಿದ್ದೇ ಇಲ್ಲ. ಇಷ್ಟು ದಿನ ದೊರೆತ ಅಲ್ಪ ಮರ್ಯಾದೆಗಾಗಿ ಪ್ರತೀಕಾರ ಮಾಡಲು ಕೈಹಿಡಿದಾತನನ್ನು ಬಿಟ್ಟು, ಎತ್ತಲೋ ಹಾರಿ, ಮುರಿದು ಬೀಳುವುದೂ ಉಂಟು; ಅಥವಾ ಯಾವನೊಬ್ಬ ನವವಧು ನಿರೀಕ್ಷಕನ ಕೈ ಸೇರುವುದು ಉಂಟೆನ್ನುವ; ಆಗ ಅದೊಂದು ಪುನರ್ವಿವಾಹವಾಗುವುದು."[೭]

"ಕನ್ನಡ ಲಲಿತ ಪ್ರಬಂಧಗಳನ್ನು ಪ್ರಮುಖವಾಗಿ ಎರಡು ವಿಧವಾಗಿ ವಿಂಗಡಿಸಬಹುದಾಗಿದೆ. "೧. ಹಾಸ್ಯ ಪ್ರಧಾನವಾದವು ೨. ಚಿಂತನ ಪ್ರಧಾನವಾದವು. ಈ ವಿಭಜನೆ ಬರಹಗಾರರ ವ್ಯಕ್ತಿತ್ವವನ್ನು ಅವಲಂಬಿಸಿರುತ್ತದೆಂದು ಪ್ರೊ.ವಿರೇಂದ್ರ ಸಿಂಪಿ"ಯವರು ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಈ ವಿಭಜನೆಯ ಮೂಲಕ ಕನ್ನಡದ ಪ್ರಬಂಧಕಾರರನ್ನು ವಿಂಗಡಿಸಿ ನೋಡಿದ್ದು ಗಮನಿಸತಕ್ಕ ಸಂಗತಿಯಾಗಿದೆ. ಹಾಸ್ಯ ಪ್ರಬಂಧಗಳು ಹರಟೆಗಳಾಗಿ ಪರಿಣಮಿಸುತ್ತಿದ್ದರೆ ಚಿಂತನ ಪ್ರಬಂಧಗಳು ನಿಜವಾದ ಅರ್ಥದಲ್ಲಿ ಲಲಿತ ಪ್ರಬಂಧಗಳಾಗಿ ನಿಲ್ಲುತ್ತವೆ. ಹಾಸ್ಯ ಪ್ರಬಂಧಕಾರರಲ್ಲಿ ನಾ ಕಸ್ತೂರಿ ಬೇಂದ್ರೆ, ಬೀಚಿ, ಗೊರೂರು,

ಲಾಂಗುಲಾಚಾರ್ಯ ಪ್ರಮುಖರಾಗಿದ್ದಾರೆ. ಚಿಂತನ ಪ್ರಬಂಧಕಾರರಲ್ಲಿ ಎ.ಎನ್.ಮೂರ್ತಿರಾವ್ ವಿ.ಸೀ., ಪು.ತಿ.ನ ಇಲ್ಲಿ ಕೆಲವು ಪ್ರಮುಖರ ಕೊಡುಗೆಯನ್ನು ಅವಲೋಕಿಸಿದಾಗ ಕನ್ನಡ ಲಲಿತ ಪ್ರಬಂಧವು ಬೆಳೆದು ಬಂದಿದ್ದನ್ನು ಸ್ಪಷ್ಟವಾಗಿ ಅರಿಯಲು ಸಾಧ್ಯವಾಗುತ್ತದೆ. ಆ ಉದ್ದೇಶದಿಂದ ಇಲ್ಲಿ ಆಯ್ದ ಕೆಲವು ಲೇಖಕರ ಪ್ರಬಂಧಗಳು ಹಾಗೂ ಅವರ ವಿಶಿಷ್ಟ ರಚನಾ ಶೈಲಿಯ ನಿರೂಪಣೆ ಕುರಿತು ಚರ್ಚಿಸಲಾಗಿದೆ.

ಬೇಂದ್ರೆ

ಬೇಂದ್ರೆಯವರ ಪ್ರಬಂಧಗಳು ಸಾಹಿತ್ಯದ ವಿರಾಟ ಸ್ವರೂಪವಾಗಿ ನಮ್ಮೆದುರಿಗೆ ಬಂದು ನಿಲ್ಲುತ್ತವೆ. ಅವರ ಪ್ರಬಂಧ ರಚನಾ ಶೈಲಿಯು ಹಾಸ್ಯಮಿಶ್ರತ ಚಿಂತನಶೀಲತೆಯನ್ನು ಮೈಗೂಡಿಸಿಕೊಂಡು ಬರುವಂಥ ಪ್ರಬಂಧಗಳನ್ನು ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ಬೇಂದ್ರೆಯವರು ನೀಡಿದ್ದಾರೆ. ಸಾಹಿತ್ಯವನ್ನು ಬದುಕಿನಲ್ಲಿ ಬೇಂದ್ರೆಯವರು ಕನ್ನಡಗರಿಗೆ ಬಿಟ್ಟು ಹೋದ ಆಸ್ತಿ ಅನನ್ಯವಾದುದು. ಬೆಳ್ಳಿ-ಬಂಗಾರ, ಮುತ್ತು-ರತ್ನ ವಜ್ರ ವೈಡೂರ್ಯ ಸಾಮಾನ್ಯ ವಿಷಯಗಳು, ಕಸಬರಗಿ ಇವು ಅವರ ಬರವಣಿಗೆಯಲ್ಲಿ ನಮಗೆ ಸಿಗುತ್ತವೆ. ಅವರ ಕಾವ್ಯ ಕನ್ನಡದಲ್ಲಿ ಹೇಗೆ ಅನರ್ಘ್ಯವೂ ಅವರ ಗದ್ಯಕೂಡಾ. ಅದರಲ್ಲಿಯ ಹರಟೆಯಲ್ಲಿರುವ ಇವರ ಲಲಿತ ಪ್ರಬಂಧಗಳು ಅಷ್ಟೆ ಮಹತ್ವಯುತವಾದವು. ಇವರ ಹಾಸ್ಯ ಹುಚ್ಚು ನಗೆಯನ್ನು ತರುವಂಥದು. ಕಸದಲ್ಲಿ ರಸವನ್ನು ತೋರಿಸುವ ಅವರ 'ಕಸಬರಿಗೆ' 'ಉಗಳು' ಪುರಾಣದಲ್ಲಿ ಉಲ್ಲಾಸದ ನಗೆಯನ್ನು ತೋರಿಸಿದರು. ಜೊತೆಯಲ್ಲಿ ಸಾವಿನೊಡನೆ ಸರಸ, ಸೋಮಾರಿತನವೆಂಬ ಸದ್ಗುಣ' ಇತ್ಯಾದಿ ಲಲಿತ ಪ್ರಬಂಧಗಳನ್ನು ಈ ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ನೀಡಿದರು.

ಕುವೆಂಪು

ನವೋದಯ ತಲೆಮಾರಿನ ಮಹತ್ವದ ಕವಿಗಳಲ್ಲಿ ಒಬ್ಬರಾದ ಕುವೆಂಪುರವರು ಅವರ ಕಾವಿಯಿತ್ರಿ ಪ್ರತಿಭೆ ಕಾವ್ಯಧ್ಯಾನದಲ್ಲಿಗೆ ಸೀಮಿತವಾಗದೆ ಪ್ರತಿಭಾ ಶಕ್ತಿ ಗದ್ಯ ಮಾಧ್ಯಮದ ಮೂಲಕವು ತನ್ನ ಲೀಲಾ ವಿಲಾಸದ ವೈವಿಧ್ಯ ವೈಚಿತ್ರಗಳನ್ನು ಮೆರೆದು, ಕನ್ನಡಗರಿಗೆ ಮೌಲಿಕ ಗದ್ಯ ಕೃತಿಗಳನಿತ್ತುದನ್ನು ಮರೆಯಲಾಗದು. ಅದರಲ್ಲಿಯೂ ಪ್ರಬಂಧಗಳು ವೈವಿಧ್ಯಮಯವಾಗಿರುವ ಜೊತೆಗೆ ವಿಚಾರ ರಮಣೀಯವು, ವಿಚಾರ ಪ್ರಚೋದಕವು ಆಗಿವೆ. ವಿವಿಧ ವಿಷಯಗಳನ್ನು ಕುರಿತು ರಚನೆಗೊಂಡ ಆ ಪ್ರಬಂಧಗಳು ವೈಚಾರಿಕತೆ, ಸ್ವೋಪಜ್ಞತೆ ಮತ್ತು ಚಿಂತನ ಶೀಲತೆಯ ದೃಷ್ಟಿಯಿಂದ ಪ್ರಶಂಸನಾರ್ಹವಾಗಿದೆ. ಕನ್ನಡಕ್ಕಿರುವ ಪ್ರಬಂಧ ಸಾಹಿತ್ಯದ ಕೊರತೆಯನ್ನು ತುಂಬಿಕೊಡುವಲ್ಲಿ ಹಾಗೂ ಅದರ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಸಮರ್ಥವಾಗಿವೆ. ಆದುದರಿಂದ ಪ್ರಬಂಧ ಸಾಹಿತ್ಯದ ಮೂಲಕವೂ ಪುಟ್ಟಪ್ಪನವರಿಂದ ಕನ್ನಡ ಸಾಹಿತ್ಯಕ್ಕೆ ಸಂದ ಸೇವೆ ಗಮನಾರ್ಹ. ಇವರ ಪ್ರಬಂಧಗಳು ಎಷ್ಟೊಂದು ವಿಶಿಷ್ಟವೆಂದರೆ ಇವುಗಳನ್ನು ಒಟ್ಟಾರೆಯಾಗಿ ಅಧ್ಯಯನ ಮಾಡಬೇಕೆಂದರೆ ಇವರ ಪ್ರಬಂಧಗಳ ಬಿತ್ತರಿಸುವ ವಿಚಾರ ದೃಷ್ಟಿಯಿಂದ ಇವುಗಳನ್ನ ನಾಲ್ಕು

ವಿಧಗಳಾಗಿ ವಿಭಾಗಿಸಲಾಗಿದೆ. "ಮಲೆನಾಡಿನ ಚಿತ್ರಗಳು" ಮಹಾಕವಿ ಕುವೆಂಪು ಅವರ ಪೂರ್ವಾಶ್ರಮದ ಅನುಭವಗಳಂತಿವೆ. ಮಹೋಪಮೆ, ಭೂಮಾನುಭೂತಿ, ದಿವ್ಯ ನಿರ್ಲಕ್ಷ -ಇವೆಲ್ಲ ಉತ್ತರಾಶ್ರಮದ ಕಲ್ಪನೆಗಳು. ನವಿಲುಕಲ್ಲು, ಸಿಬ್ಬಲುಗುಡ್ಡೆ, ಸಾರಿಕೆ ಬೇಟೆ, ಮರಸುಬೇಟೆ, ಬೆಳ್ದಿಂಗಳ ಬೇಟೆ ಇತ್ಯಾದಿಗಳು ಬಾಲ್ಯದಿಂದ ಕಂಡುಕೊಂಡ, ಯೌವನದಲ್ಲಿ ಕುತೂಹಲದಿಂದ ಅನುಭವಿಸಿದ ಮಲೆನಾಡಿನ ಸ್ಥಳಗಳು ಮತ್ತು ಕ್ರಿಯೆಗಳು. ಕುವೆಂಪು ಅವರ ಚಿತ್ರೀಕರಣ ಕಲೆ ಅದ್ಭುತವಾದುದು. ನಾಯಿ ಹಾವಿನ ಹೆಡೆಯ ಚಲನೆಗೆ ಹೊಂದಿಕೊಂಡು ಹಾರಾಡುತ್ತಿತ್ತು. ನಾಗರ ಹಾವು ಬಿಂಕದಿಂದ ಕೊಂಕಿದ ತನ್ನ ಹೆಡೆಯನ್ನು ಮುಂದೆಡೆಯಲು ನಾಯಿ ಹಿಂದಕ್ಕೆ ಹಾರುವುದು. ಹಾವು ಹೆಡೆಯನ್ನು ಹಿಂದಕೆಸೆಯಲು ಅದು ಮುಂದೆ ಹಾರುವುದು. ಈ ದೃಶ್ಯ ರುದ್ರ ಮನೋಹರವಾಗಿತ್ತು. ನನ್ನ ಬಳಿ ಕ್ಯಾಮರಾ ಇದ್ದಿದ್ದರೆ, ಎಂತಹ ನೋಟವನ್ನು ಹಿಡಿಯಬಹುದಾಗಿತ್ತು; ಆದರೆ "ರೈಫಲ್ ಇತ್ತು!" ಕ್ಯಾಮರಾ ಬದಲು ರೈಫಲ್ ಇತ್ತು ಎಂಬ ಮುಕ್ತಾಯದಲ್ಲಿ ಲಲಿತ ಪ್ರಬಂಧದ ವ್ಯಂಜಕ ಗೌಣವಿರುವುದನ್ನು ಕಾಣಬಹುದಾಗಿದೆ. ಇಲ್ಲಿಯ ಶಬ್ದಚಿತ್ರವೇ ಒಂದು ಪೋಟೋಗ್ರಾಫಿಯಂತಿದೆ. ಕುವೆಂಪು ಶೈಲಿಗೆ ಇದಕ್ಕಿಂತ ಬೇರೆ ನಿದರ್ಶನ ಬೇಕಿಲ್ಲ."[5]

ಮಾಸ್ತಿ ವೆಂಕಟೇಶ ಅಯ್ಯಂಗಾರ

'ಸಣ್ಣಕಥೆಗಳ ಜನಕರೆಂದೆ ಖ್ಯಾತರಾದ ಇವರು ಕಾವ್ಯ, ಕಾದಂಬರಿ, ಜೀವನ ಚರಿತ್ರೆ, ಪ್ರಬಂಧ ಮೊದಲಾದ ಸಾಹಿತ್ಯದ ಹಲವು ಪ್ರಕಾರಗಳಲ್ಲಿ ಅನುಪಮವಾದ ಕೊಡುಗೆ ನೀಡಿದ್ದಾರೆ. ವಿವಿಧ ವಿಷಯ ಗಳನ್ನು ಕುರಿತು ಅನುಭವಪೂರ್ಣ ಪ್ರಬಂಧಗಳನ್ನು ಬರೆದಿರುವುದು ಕಂಡುಬರುತ್ತದೆ. ಅವರ ಪ್ರಬಂಧ ಲೇಖನಗಳಿಗೆ ಸಾಮೂಹಿಕ ಮಹತ್ವವಿದೆ. ತಾತ್ಕಲಿಕ ರಾಜಕೀಯ ಸಾಮಜಿಕ, ಸಾಹಿತ್ಯಕ, ಸಾಂಸ್ಕೃತಿಕ ಸಂಗತಿಗಳು ಮಾಸ್ತಿಯವರ ಬರವಣಿಗೆಗೆ ವಸ್ತುವಾಗಿದೆ. 'ವಿಮರ್ಶೆ' ಎಂಬ ಹೆಸರಿನ ಬೇರೆ ಬೇರೆ ಸಂಪುಟಗಳಲ್ಲಿ ಬಂದ ವಿಮರ್ಶಾತ್ಮಕ ಪ್ರಬಂಧಗಳೂ ಸಮಕಾಲೀನ ಸಾಹಿತ್ಯ ಸಂದರ್ಭ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ತಮ್ಮ ಆಲೋಚನಾ ಲಹರಿಯನ್ನು ಸ್ಪಂದಿಸಿದ 'ಪ್ರಸಂಗ' ಹೆಸರಿನ ವಿವಿಧ ಸಂಪುಟಗಳಲ್ಲಿ ಬಂದ ವಿವಿಧ ವಿಷಯಗಳ ಪ್ರಬಂಧಗಳು ಮಾಸ್ತಿಯವರ ವಿಚಾರ ಸಂಪನ್ನತಿಗೆ ಸಾಕ್ಷಿಯಾಗಿದೆ.

'ಸಾಹಿತ್ಯದಲ್ಲಿ ರಸದ ಉದ್ದೇಶ' 'ಸಾಹಿತ್ಯದಲ್ಲಿ ವಿಮರ್ಶಕಾರ್ಯ ಮೊದಲಾದ ಪ್ರಬಂಧಗಳಲ್ಲಿ ವಿಮರ್ಶೆಯನ್ನು ವಸ್ತುನ್ನಾಗಿಸಿಕೊಂಡು ಪ್ರಬಂಧ ರಚಿಸಿದ್ದಾರೆ. 'ಜೀವನ ಪತ್ರಿಕೆಯಲ್ಲಿ ಎರಡು ದಶಕಗಳಷ್ಟು ಕಾಲ ಪ್ರಕಟವಾದ ಅವರ ವಿಚಾರತ್ಮಕ ಪ್ರಬಂಧಗಳೇ ಇದಕ್ಕೆ ಸಾಕ್ಷಿಯಾಗಿದೆ. ಕನ್ನಡದ ಶ್ರೇಷ್ಠ ಲಲಿತ ಪ್ರಬಂಧಗಳ ಸಂಪುಟದಲ್ಲಿ ಮಾಸ್ತಿಯವರು ಬರೆದ 'ಶಾಂತಿ' ಲಲಿತ ಪ್ರಬಂಧ ಒಂದು ಅತ್ಯುತ್ತಮ ಲಲಿತ ಪ್ರಬಂಧವಾಗಿದೆ. ಹೇಗೆ ವಿಮರ್ಶಾಥ್ಮಕ ಪ್ರಬಂಧ, ವಿಚಾರಾತ್ಮಕ ಪ್ರಬಂಧ ಲಲಿತ ಪ್ರಬಂಧ ಹಾಗೂ ಚಿಂತನಾತ್ಮಕ ಪ್ರಬಂಧಗಳ ಮೂಲಕ ಮಾಸ್ತಿಯವರು ಕನ್ನಡ ಹಾಗೂ ಭಾರತೀಯ ಸಂಸ್ಕೃತಿಯ ಆದರ್ಶ ಮೌಲ್ಯಗಳನ್ನು ಕನ್ನಡ ಲಲಿತ ಪ್ರಬಂಧಗಳಲ್ಲಿ ನಾವು ಕಾಣಬಹುದಾಗಿದೆ.

ಪು.ತಿ.ನರಸಿಂಹಾಚಾರ್

ಪ್ರಬಂಧ ಸಾಹಿತ್ಯದಲ್ಲಿ ಪು.ತಿ.ನ ಅವರದು ಒಂದು ಅನನ್ಯವಾದ ಹೆಸರು. ಅವರು ಗದ್ಯಸಿದ್ಧಾಂತ ಪರವಾದ ಕಾವ್ಯಮೀಮಾಂಸೆಯಾಗಿ ವಿಶ್ಲೇಷಣಾತ್ಮಕವಾದ ಸಹೃದಯ ವಿಮರ್ಶೆಯಾಗಿ ಮತ್ತು ಕಲ್ಪನೆ, ಚಿಂತನೆಗಳನ್ನು, ಸಮಸಮವಾಗಿ ಸಮ್ಮಿಳಿತನಗೊಳಿಸಿಕೊಂಡ ಪ್ರಬಂಧವಾಗಿ ತ್ರಿಮುಖ ಧಾರಣೆ ಮಾಡಿದೆ. ಅವರ ಪ್ರಬಂಧಗಳು ಈ ಕೆಳಗಿನಂತಿವೆ.

೧. 'ರಾಮಾಚಾರಿ ನೆನಪು' : ಪ್ರಬಂಧಸಂಕದಲ್ಲಿ ೮ ಪ್ರಬಂಧಗಳಿದ್ದು, ಅವುಗಳಲ್ಲಿ ಒಂದೊಂದು ಪು.ತಿ.ನರವರ ವ್ಯಕ್ತಿತ್ವದ ಮತ್ತು ಅಭಿವ್ಯಕ್ತಿ ಶಕ್ತಿಯ ಒಂದೊಂದು ಮುಖವನ್ನು ಅನಾವರಣ ಮಾಡುತ್ತದೆ. ರಾಮಾಚಾರಿಯ ನೆನಪು ಕವಿಗಳ ಬಾಲ್ಯದ ಒಂದು ನೆನಪಿನ ಬುತ್ತಿಯನ್ನು ಹೃದಯಂಗಮವಾಗಿ ಬಿಚ್ಚುತ್ತದೆ.

೨. 'ರಥಸಪ್ತಮಿ ಮತ್ತು ಇತರ ಚಿತ್ರಗಳು' : ಈ ಪ್ರಬಂಧ ಸಂಕಲನದಲ್ಲಿಯೂ ೮ ಪ್ರಬಂಧಗಳಿದ್ದು, ಇವುಗಳಲ್ಲಿ ನಿಸರ್ಗಪ್ರಿಯ ಹಾಗೂ ಧಾರ್ಮಿಕ ವಿಚಾರಧಾರಣೆ ಕುರಿತು ಪ್ರಬಂಧಗಳಿರುವುದು.

೩. 'ಈಚಲು ಮರದ ಕೆಳಗೆ' : ಇದು ಹದಿನಾಲ್ಕು ಪ್ರಬಂಧಗಳನ್ನು ಒಳಗೊಂಡ ಸಂಕಲನವಾಗಿದ್ದು, ಪು.ತಿ.ನ.ರವರ ಶ್ರೇಷ್ಠ ಪ್ರಬಂಧ ಕಲೆಯ ಸಾಕ್ಷಾಯಾಗಿ ಕೂಡ ಈ ಕೃತಿ ನಿಲ್ಲುತ್ತದೆ. ಲೇಖಕರ ವಿಚಾರದಂತೆ ವ್ಯಾಪಕತೆ, ಜೀವನಾನುಭವ ಮತ್ತು ಕಲ್ಪಾನಾಶೀಲತೆಗಳು ಈ ಕೃತಿಯಲ್ಲಿ ತುಂಬಾ ದಟ್ಟವಾಗಿ ಪ್ರಹಸಿದೆ.

೪. 'ಧೇನುಕ ಪುರಾಣ' : ಇಪ್ಪತ್ತೆರಡು ಪ್ರಬಂಧಗಳ ಒಂದು ಸಂಕಲನ. ಲೇಖಕರ ವೈವಿಧ್ಯಮಯ ಜೀವನಾಭಿರುಚಿಯ ಮತ್ತು ಜೀವನ ದೃಷ್ಟಿಯ ದ್ಯೋತಕವಾಗಿದೆ.

ಇವು ಅವರ ಪ್ರಬಂಧ ಸಂಕಲನಗಳು. ಆದರೆ ಎಲ್ಲವು ಲಲಿತವಾಗಿಲ್ಲವೆಂದು. ಪು.ತಿ.ನ ಅವರೇ ಹೇಳಿದಂತೆ ಕೆಲವು ಭಾವನಾ ಚಿತ್ರಗಳಾಗಿವೆ. ಇನ್ನು ಕೆಲವು ಕಥನಾತ್ಮಕವಾಗಿವೆ. ಈಚಲು ಮರದ ಕೆಳಗೆ ಮತ್ತು ಧೌನುಕ ಪುರಾಣಗಳು, ತಾತ್ವಿಕ ಚಿಂತನೆಯಲ್ಲಿಯೇ ಹೊಸ ದಾರಿಯನ್ನು ಹುಡುಕಕೊಳ್ಳುತ್ತವೆ.

ಸಿಂಪಿ ಲಿಂಗಣ್ಣ

ಸಿಂಪಿಯವರು ಹೊಸಗನ್ನಡ ಗದ್ಯ ಪ್ರಬಂಧಕಾರರಲ್ಲಿ ಒಬ್ಬರಾಗಿದ್ದು, ಅವರು ಈವರೆಗೆ ಸುಮಾರು ಹದಿನಾಲ್ಕು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಇದು ಅವರ ಅವ್ಯಾಹತವಾದ ಬರವಣಿಗೆಗೆ ಒಂದು ಕುರುಹಾಗಿದೆ. ಅವರ ಪ್ರಬಂಧಗಳ ವಸ್ತುವನ್ನು ಗಮನಿಸಿ. ೧. ಸಾಹಿತ್ಯಕ, ೨. ಐತಿಹಾಸಿಕ ಹಾಗೂ ಸಾಂಸ್ಕೃತಿಕ, ೩. ತಾತ್ವಿಕ ಹಾಗೂ ಚಿಂತನೆಯ, ೪. ಆಧ್ಯಾತ್ಮಿಕ, ೫. ಇತರ ಸಂಕೀರ್ಣ ಎಂದು ಅವುಗಳನ್ನು ವಿಭಾಗಿಸಬಹುದಾಗಿದೆ. ಇವರ ಪ್ರಮುಖ ಪ್ರಬಂಧ ಸಂಕಲನಗಳೆಂದರೆ

೧. ಸ್ವರ್ಗದೊಲೆಗಳು ೨. ಸನ್ಯಾಸಿದಿಬ್ಬ ೩. ನೂರುಗಡಿಗೆ ಒಂದು ಬಡಿಗೆ

ಇಲ್ಲಿ ಸಿಂಪಿ ಲಿಂಗಣ್ಣನವರ ಪ್ರಬಂಧಗಳಲ್ಲಿ ಕನ್ನಡದ ಲಲಿತ ಪ್ರಬಂಧದ ಹೆಚ್ಚು ಲಕ್ಷಣಗಳು ಕಂಡುಬರುವುದು. 'ನೂರಗಡಿಗೆ ಒಂದು ಬಡಿಗೆ' ಸಂಕಲನವು ಸಾಕ್ಷಿಯಾಗಿದೆ. ಈ ಸಂಕಲನದಲ್ಲಿ ೧೧೮ ಪ್ರಬಂಧಗಳಿದ್ದು, ಈ ಪ್ರಬಂಧಗಳನ್ನು ೧.ರಾಜ್ಯ, ರಾಷ್ಟ್ರ, ರಾಷ್ಟ್ರೀಯತೆ ೨. ಜೀವನ ೩. ಆಧ್ಯಾತ್ಮ ಸಾಹಿತ್ಯ ೪. ಗ್ರಾಮ, ಮಾನವ ಸ್ವಭಾವ ೫. ಸಮಾಜ, ಇತಿಹಾಸ ಹೀಗೆ ಐದು ಗೊಂಚಲನ್ನು ವಿಭಾಗಿಸಲಾಗಿದೆ. ಪ್ರಬಂಧಗಳಿಗಿಟ್ಟ ತಲೆಬರಹಗಳು ಆಕರ್ಷಕವಾಗಿವೆ. ಉದಾ : 'ಹರಿಯುವ ಹನ್ನೆರಡು', 'ತರಿಸುವ ಮೂವತ್ತು', 'ಗುಡ್ಡದಂತಾರಾಗಾ ಮಾಡಿ' 'ಕಚ-ಕಚ-ಗಿಚಕ' ಮೊದಲಾದ ಪ್ರಬಂಧಗಳ ಶಿರ್ಷಿಕೆಯೇ ಇಷ್ಟವಾಗುವಂತಾವು. ಇದು ಇವರ ವೈಶಿಷ್ಟ್ಯ. ಇನ್ನು ನಿರೂಪಣೆ ಬಹು ಅದ್ಭುತವಾಗಿರುತ್ತದೆ ಎಂಬ ಕುತೂಹಲ ಹುಟ್ಟಿಸುತ್ತದೆ. ಹೀಗೆ ಇಲ್ಲಿ ಯಾವುದೇ ಪ್ರಬಂಧವನ್ನು ತೆಗೆದುಕೊಂಡರೂ ಅಲ್ಲಿ ಅನುಭವದ ಆಕರವಿರುವುದು ಸಿಂಪಿ ಅವರ ಪ್ರಬಂಧಗಳ ಒಂದು ವೈಶಿಷ್ಟತೆ.

ನಾ.ಕಸ್ತೂರಿ

ಮಲಯಾಳಂದಿಂದ ಕನ್ನಡಕ್ಕೆ ಬಂದ ಅಪರೂಪದ ಲೇಖಕ ನಾ ಕಸ್ತೂರಿ ಅವರ 'ಉಪಾಯವೇದಾಂತ' ಸರಸ ವಿನೋದಗಳಿಂದ ತುಂಬಿದ ಒಂದು ಕೃತಿ. ಹರಟೆ ಅವರ ಪ್ರಕೃತಿಸಿದ್ಧವಾದ ಗುಣವಾಗಿರುವಂತೆ ತೋರುತ್ತದೆ. ಮಾನವನ ಸ್ವಭಾವ, ಅಲ್ಲಿಯ ಕೊರತೆಗಳು ನಾ ಕಸ್ತೂರಿಯವರಿಗೆ ಸಹಜವಾಗಿ ಗಮನಕ್ಕೆ ಬರುತ್ತದೆ. ಅವರ 'ಅನರ್ಥಕೋಶ' ವಿಡಂಬನೆಯಲ್ಲಿಯೇ ಹೊಸದೇನನ್ನೋ ಹೇಳುತ್ತಿದೆ. 'ಪಾತಾಳದಲ್ಲಿ ಪಾಪಚ್ಚಿ' ಕೂಡ ಸೊಗಸಾಗಿದೆ. ಅವರ 'ನನ್ನ ಬೆನ್ನು' ಒಂದು ಪ್ರಸಿದ್ಧ ಪ್ರಬಂಧ. ಬೆನ್ನು ಮಾಡಿ ಯಾರು ಯಾರು ಏನೆಂದು ಭಾವಿಸುತ್ತಾರೆಂಬುದನ್ನು ಅಲ್ಲಿ ಸೊಗಸಾಗಿ ಚಿತ್ರಿಸಿದ್ದಾರೆ.

ಎಚ್ಚೆಸ್ಕೆ

ಲಲಿತ ಪ್ರಬಂಧದ ಪ್ರಮುಖ ಪ್ರಬಂಧಕಾರರು ಅವರ ಬರವಣಿಗೆಯ ಶೈಲಿ ಅವರದ್ದೆ ಎನ್ನುವಷ್ಟು ವಿಶಿಷ್ಟ ಅವರ ಹೆಸರಿನಲ್ಲಿದೆ. ಅವರ ವ್ಯಕ್ತಿ ಚಿತ್ರವನ್ನು ಕನ್ನಡದ ಓದುಗರು ಶೈಲಿಯ ಮೂಲಕವೇ ಅವರದೆಂದು ತತ್‌ಕ್ಷಣಕ್ಕೆ ಗುರುತಿಸಬಹುದಾಗಿದೆ. ಈ ವಿಶಿಷ್ಠ ಶೈಲಿಯ ಎಚ್ಚೆಸ್ಕೆ 'ಜೇಡನ ಬಲೆ' 'ಕಳ್ಳಹೊಕ್ಕಮನೆ' ಮುಂತಾದ ಪ್ರಬಂಧ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಸಾಮಾನ್ಯವಾಗಿ ಇವರ ಪ್ರಬಂಧಗಳು ಸುದೀರ್ಘವಾಗಿರುವುದಿಲ್ಲ. ವ್ಯಾಪ್ತಿಯಿಲ್ಲದಿದ್ದರೂ ಅರ್ಥವಂತಿಕೆ ಬೇಕಾದಷ್ಟಿರುತ್ತದೆ. 'ಜೇಡನ ಬಲೆ' 'ಗಡಿಯಾರಗಳು' 'ನಾಯಿಬಾಲ' ಇತ್ಯಾದಿ ಪ್ರಬಂಧಗಳು "ಎಚ್ಚೆಸ್ಕೆ ಅವರ ಜೀವನಾನುಭವ ಕಲ್ಪಕ ಶಕ್ತಿ ಹದವರಿತ ಪದಪ್ರಯೋಗಗಳಿಂದ ರಂಜನೆಯನ್ನು ನೀಡುತ್ತಲೇ ಬದುಕಿನ ಒಳಪದರುಗಳನ್ನು ಬಿಚ್ಚಿಡುತ್ತದೆ. 'ಕಳ್ಳಹೊಕ್ಕಮನೆ'ಯಂಥ ಕುತೂಹಲಕಾರಿ ಪ್ರಬಂಧಗಳು ವಿಶೇಷ ಆಕರ್ಷಣೆಯನ್ನು ನೀಡುತ್ತವೆ."[೦೦]

ಶಿವರಾಮ ಕಾರಂತ

ಕನ್ನಡ ಲಲಿತ ಪ್ರಬಂಧ ಸಾಹಿತ್ಯ ನಡೆದು ಬಂದ ದಾರಿಯ ಅವಲೋಕನ ಮಾಡಿದಾಗ ಲಲಿತ ಪ್ರಬಂಧಗಳು ಮೊದಲು ಪತ್ರಿಕೆಗಳ ಮೂಲಕವೇ ಪ್ರಕಟಗೊಂಡುದು ಕಂಡುಬರುತ್ತದೆ. ಕಾರಂತರ ಪ್ರಬಂದಗಳು ಮೊದಲ ಸ್ವದೇಶಾಭಿಮಾನಿ ಪತ್ರಿಕೆಯಲ್ಲಿ ಅನಂತರ ಪುಸ್ತಕ ರೂಪ ಪಡೆದು ಹೊರಬಂದಿವೆ. ಹೀಗೆ ಪ್ರಕಾಶನಗೊಂಡ ಕಾರಂತರ ಮೊದಲ ಪ್ರಬಂಧ ಸಂಕಲನ 'ಗ್ನಾನ' ಎಂಬುದು ಇದರ ಮೊದಲ ಅವೃತ್ತಿ ೧೯೩೨ರಲ್ಲಿ ಹೊರಬಂದಿದೆ.

'ಚಿಕ್ಕದೊಡ್ಡವರು' ಎಂಬುದು ೧೯೪೧ರಲ್ಲಿ ಪ್ರಕಟವಾದ ಶಿವರಾಮ ಕಾರಂತರ ಎರಡನೆಯ ಪ್ರಬಂಧ ಸಂಕಲನ ಮೂಲಕ ಕಾರಂತರು ಪ್ರಾರಂಭ ಮಾಡಿದ್ದಾರೆ.

'ಹಳ್ಳಿಯ ಹತ್ತು ಸಮಸ್ತರು' ೧೯೪೪ರಲ್ಲಿ ಪ್ರಕಟವಾದ ಕಾರಂತರ ಮೂರನೆಯ ಪ್ರಬಂಧ ಸಂಕಲನ. ಇದು ಕೂಡ ಕಾರಂತರ ಹಿಂದಿನ ಪ್ರಬಂಧ ಶೈಲಿಯನ್ನು ಹೋಲುತ್ತದೆ. ಒಂದು ದೃಷ್ಟಿಯಲ್ಲಿ ಕಾರಂತರ ಸರ್ವೋತ್ಕೃಷ್ಟ ಪ್ರಬಂಧ ಸಂಕಲನವೆಂದು ಇದನ್ನು ಕರೆಯಬಹುದು. 'ಮಂಗಳೂರಿನ ವಸಂತ ಮಾಲಿಕೆ ಮತ್ತು ಸ್ವದೇಶಾಭಿಮಾನಿ'ಯಲ್ಲಿ ಪ್ರಕಟಿತ ಪ್ರಬಂಧಗಳು ೧೯೪೮ರಲ್ಲಿ ದೇಹಜ್ಯೋತಿಗಳು ಮತ್ತು ಪ್ರಾಣಿ ಪ್ರಬಂಧಗಳು ಎಂಬ ಹೆಸರಿನಲ್ಲಿ ಪ್ರಕಾಶಿತವಾಗಿದೆ.

ಶಿವರಾಮಕಾರಂತರ ಲಲಿತ ಪ್ರಬಂಧಗಳನ್ನು ಓದಿದಾಗ ವಿಡಂಬನೆಯನ್ನು ಅರ್ಥಪೂರ್ಣವಾಗಿ ಬಳಸಿದ್ದಾರೆ. ಮುಕ್ತ ಮನಸ್ಸಿನ ಆಲೋಚನಾ ಲಹರಿ ಕಡಲಿನ ತರಂಗಗಳಂತೆ ಪ್ರಬಂಧಗಳಲ್ಲಿ ಚಿಮ್ಮಿದೆ. ಕಾರಂತರ ಜೀವನ ಪ್ರೀತಿಯ ಫಲವಾಗಿರುವ ಬಾಳಿನ ವಿವಿಧ ಮುಖಗಳ ಚಿತ್ರಣ ಇವುಗಳಲ್ಲಿ ಕೆನೆಗಟ್ಟಿವೆ. ಸಂಸ್ಕೃತಿಯ ಅನ್ವೇಷಣೆ ಅವರ ಸಾಹಿತ್ಯಕ ವ್ಯವಸಾಯದ ಭಾಗವಾಗಿರುವುದರಿಂದ ಅದು ಲಲಿತ ಪ್ರಬಂಧಗಳಲ್ಲಿ ಮುಂದುವರಿದಿದೆ.

ವಿ.ಸೀ.

'ಪಂಪಾಯಾತ್ರೆ', 'ಬಿಳಿದಿಂಗಳು', 'ಸ್ವೀಕರಣ', 'ಮೈಸೂರು ರುಮಾಲು' ಇಂತಹ ಅತ್ಯಂತ ಪ್ರಸಿದ್ಧ ಗ್ರಂಥಗಳನ್ನು ನವೋದಯದ ಯುಗದಲ್ಲಿ ವಿ.ಸೀ. ಕನ್ನಡದ ಲೇಜಸ್ಸನ್ನು ಗುರುತಿಸುವ ಒಂದು ಸಂಸ್ಕೃತ ಮನಸ್ಸಿನ ತುಡಿತ ಇಲ್ಲಿದೆ. ಇವರ 'ಪಂಪಾಯಾತ್ರೆ' ಪ್ರಬಂಧವನ್ನು ಹುಯಿಲಗೋಳರು ಲಲಿತ ಪ್ರಬಂಧದ ಮೊದಲನೆಯ ಗ್ರಂಥವೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು. ಈ ಹೇಳಿಕೆಯಲ್ಲಿ ಅರ್ಥವಿಲ್ಲದಿಲ್ಲ. ಆ ಪ್ರಬಂಧದ ಹಲವು ಲಕ್ಷಣಗಳು ಇಲ್ಲದಿರುವುದನ್ನು ಕಾಣಬಹುದು.

ಎ.ಎನ್.ಮೂರ್ತಿರಾಯರ ಲಲಿತ ಪ್ರಬಂಧಗಳು

ಕನ್ನಡ ಲಲಿತ ಪ್ರಬಂಧ ಸಾಹಿತ್ಯದ ಸಾರ್ವಭೌಮ, ಪಿತಾಮಹಾ ಎಂದೆಲ್ಲಾ ಪ್ರಸಿದ್ಧರಾದವರು ಎ.ಎನ್ .ಮೂರ್ತಿಯವರು ಕನ್ನಡ ಲಲಿತ ಪ್ರಬಂಧ ಸಾಹಿತ್ಯವು ಇಂದು ಇಷ್ಟೊಂದು ಉತ್ಕೃಷ್ಟವಾಗಿ

ಬೆಳೆದು ನಿಲ್ಲಬೇಕಾದರೆ ಇದಕ್ಕೆ ಎ.ಎನ್ .ಮೂರ್ತಿರಾಯರ ಕೊಡುಗೆ ಅಪಾರ ಆದ್ದರಿಂದಲೇ ಈ ಸಾಹಿತ್ಯದಲ್ಲಿ ಇವರದೆಯಾದ ಒಂದು ಪರಂಪರೆಯನ್ನು ಹುಟ್ಟು ಹಾಕುವಷ್ಟರ ಮಟ್ಟಕ್ಕೆ ಈ ಸಾಹಿತ್ಯಕ್ಕೆ ತಮ್ಮನ್ನು ತಾವು ತೊಡಗಿಸಿಕೊಂಡವರು. ಅವರು ಪ್ರಬಂಧಗಳ ಪ್ರಭಾವದಿಂದ ರಾ.ಕು. ಅವರಂತಹ ಪ್ರಬುದ್ಧ ಪ್ರಬಂಧಕಾರರು ಬೆಳೆದು ಬರಲು ಮೂಲ ಪ್ರೇರಕ ಇವರ ಸಾಹಿತ್ಯ. ಅಷ್ಟೊಂದು ಆಕರ್ಷಣೀಯವಾದ ಇವರ ಸಾಹಿತ್ಯವನ್ನು ಮೆಚ್ಚದವರೇ ಇಲ್ಲವೆನ್ನಬಹುದು. ಇವರು ಬೆರಳೆಣಿಯಷ್ಟು. ಮಾತ್ರ ಪ್ರಬಂಧ ಸಂಕಲನಗಳನ್ನು ಬರೆದರು. ಅವುಗಳು ಅಜಾರಾಮರ 'ಹಗಲಗನಸು' (೧೯೩೭), 'ಅಲೆಯುವ ಮನ'(೧೯೫೭), 'ಮಿನುಗು ಮಿಂಚು' (೧೯೬೨) ಈ ಮೂರು ಸಂಕಲನಗಳನ್ನು ಮಾತ್ರ ರಚಿಸಿದರು. ಇವುಗಳ ವೈಶಿಷ್ಟತೆಯಿಂದ ಕನ್ನಡ ಲಲಿತ ಪ್ರಬಂಧ ಸಾಹಿತ್ಯದ ಆಚಾರ್ಯನೆನಿಸಿಕೊಳ್ಳುವಷ್ಟು ಪ್ರಬುದ್ಧವಾದವು ಈ ಸಂಕಲನಗಳು ಇವರ ಪ್ರಬಂಧಗಳು ವ್ಯಕ್ತಿನಿಷ್ಠವಾದದ್ದು. ಅವರ ಪ್ರಬಂಧಗಳ ಮೂಲಸೆಲೆಗಳು : ಜೀವನ ಪ್ರೀತಿ, ಮಾನವೀಯತೆ, ಬದುಕಿನ ಒಳಿತು ಕೆಡಕುಗಳನ್ನು ಸಮಚಿತ್ತದಿಂದ ನೋಡುವ ಪರಿಪಕ್ವ ಮನೋಧರ್ಮ ಸುಸಂಸ್ಕೃತ ಹೃದಯವಂತಿಕೆ, ಉದಾರವಾದಿತನ ಇವುಗಳೊಂದಿಗೆ ಒಡಮೂಡಿದೆ. ಅಲ್ಲದೆ, ಲಲಿತ ನಿರೂಪಣಾ ಶೈಲಿ ಪ್ರಬಂಧಗಳಿಗೆ ಹೆಚ್ಚು ಮೆರುಗು ನೀಡಿದೆ. ಅವರ ಪ್ರಬಂಧಗಳು ಕೆಲವೊಮ್ಮೆ ಸಣ್ಣಕಥೆ, ಭಾವಗೀತೆ ಮತ್ತು ಹರಟೆಗೆ ಹತ್ತಿರವಾದಂತೆ ಭಾಸವಾದರೂ, ಸಂಪೂರ್ಣವಾಗಿ ಅವೇ ಅಗದೆ ಅವುಗಳ ಒಳ್ಳೆಯ ಅಂಶಗಳನ್ನು ಮೈಗೂಡಿಸಿಕೊಂಡು ಬೆಳೆದಿವೆ. ಇವರ 'ಅಲೆಯುವ ಮನ' ಸಂಕಲನದಲ್ಲಿ ದೀವಾಖನೆಯ ಅಂದಚಂದ, ಹರಕೆಗಳು, ಹೋಟೆಲುಗಳು, ವ್ಯಾಘ್ರ ಗೀತೆ, ಮಂಕಾರಾಜಾ ಕಾಲೇಜಿನ ಕಾಮನ್ ರೂಂ ಮುಂತಾದ ಪ್ರಬಂಧಗಳಿವೆ. ಈ ಸಂಕಲನದ 'ದಿವಾನಖಾನೆಯ ಅಂದಚಂದ' ಕೇವಲ ಪ್ರಬಂಧಕ್ಕಾಗಿ ಬರೆದದ್ದಲ್ಲ, ಅಲ್ಲಿನ ಸಾಹಿತ್ಯಕ ಉದ್ದೇಶ ಗೌಣ, ಜೀವನ ಸರಳವಾಗಿರಬೇಕು. ಆಡಂಬರವಾಗಬಾರದು ಎಂಬುದು ನನ್ನ ನಂಬಿಕೆ ಎಂದು''[೧೦] ಲೇಖಕರು ಒಂದು ಕಡೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು.

ಮೂರ್ತಿರಾವ್ ಅವರ ಪ್ರಬಂಧಗಳಲ್ಲಿ ಮುಖ್ಯವಾಗಿ ಕಾಣುವುದು ವ್ಯಕ್ತಿ ಮತ್ತು ಜೀವನದ ಬಗೆಗಿನ ಗಾಢವಾದ ಆಸಕ್ತಿ, ಅಲ್ಲೆಲ್ಲ ತಮ್ಮ ಸುತ್ತಲಿನ ಜೀವನವನ್ನು ಅರ್ಥಮಾಡಿಕೊಳ್ಳುವ ಸುಸಂಸ್ಕೃತ ಮನಸ್ಸಿನ ಹುಡುಕಾಟ, ಪ್ರಯತ್ನಗಳಿವೆ. ಈ ಬಗೆಯ ದೃಷ್ಟಿ ದೋರಣೆಗಳು ಅವರ ಪ್ರಬಂಧಗಳಲ್ಲಿ ಹಾಸು ಹೊಕ್ಕಾಗಿ ಬೆರತಿವೆ.

ಹಾಮಾ ನಾಯಕ 'ನಮ್ಮ ಮನೆಯ ದೀಪ', ಡಾ.ಸಿ.ಪಿಕೆ ಅವರ 'ಚಿಂತನ ದೇ.ಜವರೇಗೌಡರ 'ಕೆನೆ' ತೆನೆ, ಎನ್.ಪ್ರಹ್ಲಾದರಾಯರ 'ಮುತ್ತಿನ ಹಾರ', 'ಹಸಿವು' ಪ್ರಭುಶಂಖರರ 'ಜನಮನ' 'ಎತ್ತಿಗೆಜ್ವರ ಎಮ್ಮೆಗೆ ಬರೆ'' ಸರೋಜಿನಿ ಶಿಂತ್ರಿಯವರ 'ತುಂತುರ', ಟಿ.ವಿ.ವೆಂಕಟಚಾಲಶಾಸ್ತ್ರಿಗಳ 'ಸದ್ದೆಂತೆಂಬರಗಂಡ' ದೇವಶ್ರೀ 'ಗಿರಿಕಂದರ ಮೋಹಿತರು' ಶೂದ್ರ ಶ್ರೀನಿವಾಸರ 'ಕನಸಿಗೊಂದು ಕಣ್ಣು'

ಪೂರ್ಣಚಂದ್ರ ತೇಜಸ್ವಿಯವರ 'ವಿಜ್ಞಾನದ ವಿಷಯಗಳನ್ನು ವಿಶ್ವದ ಅದ್ಭುತಗಳನ್ನು ಪ್ರಬಂಧದ ಚೌಕಟ್ಟಿನಲ್ಲಿ ಹಿಡಿದಿರಿಸಿದ್ದಾರೆ. ಲಂಕೇಶ ಟೀಕೆ-ಟಿಪ್ಪಣಿಗಳಲ್ಲಿ ಕೆಲವು ಉತ್ತಮ ಲಲಿತ ಪ್ರಬಂಧಗಳಿವೆ. ಎಂ.ಜಿ.ಗಂಗನ ಪಳ್ಳಿಯವರ 'ವಿಚಾರೋಧ್ಯಾನು' ರಾ.ಕು.ಅವರ ಗಾಳಿಪಟ, ದೇವಕನ್ಯೆ ಹೆಸರಿಸಬೇಕಾದ ಪ್ರಬಂಧ ಸಂಕಲನಗಳು ಇವು ಲಲಿತ ಪ್ರಬಂಧ ಸಾಹಿತ್ಯದಲ್ಲಿ ಅತ್ಯೋನ್ನತವಾಗಿ ಬೆಳೆದುಬಂದ ಕೃತಿಗಳು.

ಕನ್ನಡ ಲಲಿತ ಪ್ರಬಂಧ ಸಾಹಿತ್ಯವನ್ನು ಕನ್ನಡದಲ್ಲಿ ಅದರಲ್ಲಿಯೂ ಆಧುನಿಕ ಕನ್ನಡ ಪ್ರಮುಖ ಘಟ್ಟಗಳಾದ ನವೋದಯ ನವ್ಯ, ದಲಿತ-ಬಂಡಾಯ ಘಟ್ಟಗಳಲ್ಲಿ ಈ ಲಲಿತ ಪ್ರಬಂಧವು ಹೇಗೆ ಫಸಲಾಯಿಸಿತು. ಯಾವ ಘಟ್ಟದಲ್ಲಿ ಇದು ತನ್ನ ಬೆಳವಣಿಗೆಯನ್ನು ಕುಂಟಿತಗೊಳಿಸಿತು. ಅದಕ್ಕೆ ಕಾರಣಗಳನ್ನು ಈ ಕೆಳಗೆ ವಿವೇಚಿಸಲಾಗುವುದು. ಕನ್ನಡಕ್ಕೆ ಆಧುನಿಕ ಸಾಹಿತ್ಯದ ಪ್ರಕಾರಗಳೆಲ್ಲವೂ ಮೊದಲ ತನ್ನನ್ನು ಪ್ರಯೋಗಕ್ಕೆ ಒಳಪಡಿಸಿಕೊಳ್ಳುವ ಒಂದು ಮಹತ್ತರ ಘಟ್ಟವೆಂದರೆ ಅದು ನವೋದಯ ಸಾಹಿತ್ಯ ಘಟ್ಟ. ಈ ಘಟ್ಟದಲ್ಲಿ ಆಧುನಿಕ ಕನ್ನಡದ ಸಾಹಿತ್ಯ ಪ್ರಕಾರಗಳೆಲ್ಲವೂ ತಮ್ಮ ಒಂದು ಕಾರ್ಯವನ್ನು ಅಥವಾ ಕೃಷಿಯನ್ನು ಈ ಘಟ್ಟದಲ್ಲಿ ಮಾಡಿವೆ. ಎಲ್ಲ ಪ್ರಕಾರಗಳು ಇಲ್ಲಿ ಸಮೃದ್ಧವಾಗಿ ಬೆಳೆದು ಸಾಹಿತ್ಯದಲ್ಲಿ ತಮ್ಮದೇ ಸ್ಥಾನವನ್ನು ಗುರುತಿಸಿಕೊಂಡಿವೆ. ಹಾಗೆ ಲಲಿತ ಪ್ರಬಂಧವು ಕೂಡಾ ಈ ಘಟ್ಟದಲ್ಲಿ ಅತ್ಯಂತ ಸಮೃದ್ಧವಾಗಿ ಬೆಳೆದುಬಂದಿದೆ. ನವೋದಯದ ಲಿರಿಕ್ ಮನೋಧರ್ಮಕ್ಕೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಿದ್ದು, ರಾಷ್ಟ್ರೀಯತೆ. ಹೀಗಾಗಿ ಹಂಚಿಕೊಳ್ಳುವ 'ಮಂದ ಶೃತಿಯ 'ಭಾವಗೀತೆಗೆ' ಒಂದು ಚೌಕಟ್ಟು ಹಾಕಿದಂತಾಯಿತು. ಇಲ್ಲಿ ವಸ್ತುವಿನ ಆಯ್ಕೆಯು ಸಂಕೋಚಿತವಾಯಿತು. ಇದನ್ನು ಆಧುನಿಕ ಪರಿಭಾಷೆಯಲ್ಲಿ ಹೇಳುವುದಾದರೆ, ಪ್ರಬಂಧಗಳೂ ವಸಾಹತೀಕರಣಕ್ಕೆ ಒಳಗಾಗಿದ್ದವು. ಆಗಿನ ಬಹುಮುಖ್ಯ ಸಾಹಿತ್ಯ ಉದ್ದೇಶಗಳಾದ ಹಳ್ಳಿಗಳ ಬಗೆಗೆ, ದೇಶಾಭಿಮಾನಿಗಳ ಬಗೆಗೆ, ಹಳ್ಳಿಯ ಜನರ ಮುಗ್ಧ ಸ್ವಭಾವದ ಹುಡುಕಾಟ, ವ್ಯಕ್ತಿ ಚಿತ್ರ ಸ್ವಾತಂತ್ರ್ಯಕ್ಕಾಗಿ ಪ್ರೇರಣೆ ಮೂಡುವ ಗದ್ಯರೂಪದ ಸಾಹಿತ್ಯ ಇವುಗಳೆಲ್ಲವು ಕನ್ನಡ ಲಲಿತ ಪ್ರಬಂಧಕ್ಕೆ ನವೊದಯದಲ್ಲಿ ಸಾಹಿತ್ಯ ವಸ್ತುವಾದವು. ಇಲ್ಲಿ ಭಾಷೆಯು ವರ್ಣರಂಜಿತವಾಗಿ ಬಳಸಲಾಗುವುದು. ಅಂದರೆ ಇಲ್ಲಿ ವಸ್ತುಗಳನ್ನು, ಸನ್ನಿವೇಶಗಳನ್ನು ಹೆಚ್ಚು ಹೆಚ್ಚು ವೈಭವೀಕರಿಸಲ್ಪಡುತ್ತದೆ. ಏಕೆಂದರೆ ಮೊದಲೇ ಈ ಸಾಹಿತ್ಯಯುಗ ಭಾವಪ್ರಧಾನ್ಯತೆಗೆ ಒಳಗಾಗಿರುವಂತಹ ಸಾಹಿತ್ಯ ಯುಗವಾಗಿದೆ. ಬೇಂದ್ರೆ-ಗೋಕಾಕ, ಶ್ರೀರಂಗ, ಕಾರಂತ, ಕುವೆಂಪು, ವಿ.ಸೀ., ಮೂರ್ತಿರಾಯ, ರಾ.ಕು., ತೀ.ನಂ.ಶ್ರೀ ಮೊದಲಾದವರು ಶ್ರೇಷ್ಠ ಪ್ರಬಂಧಕಾರರು. ಈ ಪ್ರಬಂಧಯುಗಕ್ಕೆ ಸಾಕ್ಷಿಯಾಗಿದ್ದಾರೆ. ಇವರ ಬರಹಗಳಲ್ಲಿ ಕಂಡುಬರುವ ಬಹುಮುಖ್ಯವಾಗಿ ಸಾಮಾಜಿಕ ವಿಡಂಬನೆ ವ್ಯಂಗ್ಯಗಳು ಕೂಡಾ ರಾಷ್ಟ್ರೀಯತೆಯ ಎಚ್ಚರಿಕೆಗೆ ಕಾರಣವಾಗಿಯೇ ಬಂದಿದೆ. ಏಕೆಂದರೆ ಮೇಲಿನ ಪ್ರಬಂಧಕಾರರ ಯಾವುದೇ ಒಂದು ಪ್ರಬಂಧ ಕೂಡಾ ನಮ್ಮ ಸಂಸ್ಕೃತಿಯನ್ನು ಎಲ್ಲಿಯೂ ನಿರ್ಲಕ್ಷ್ಯ ಮಾಡದೆ, ಬದಲಾಗಿ ನಮ್ಮ ಸಂಸ್ಕೃತಿಯನ್ನು ತನ್ನ ಪ್ರಬಂಧಗಳಲ್ಲಿ

ಹೆಚ್ಚು ವೈಭೀಕರಿಸುವುದರ ಜೊತೆಯಲ್ಲಿ ಅದರ ಬಗ್ಗೆ ಅಪಾರ ಗೌರವ ಸೂಚಕ ಹಾಗೂ ಉನ್ನತ ಸ್ಥಾನವನ್ನು ಅವರ ಪ್ರಬಂಧಗಳಲ್ಲಿ ಕೊಟ್ಟಿದ್ದಾರೆ. ಆದ್ದರಿಂದಲೇ ಇವರ ಲಲಿತ ಪ್ರಬಂಧಗಳು ಈ ಯುಗದ ಜನಸಾಮಾನ್ಯನನ್ನು ಬೇಗೆ ತಲುಪಿ ಅವರನ್ನು ತಮ್ಮ ಸಾಹಿತ್ಯದೆಡೆಗೆ ಓಲೈಸಿಕೊಳ್ಳಲು ಸಾಧ್ಯವಾಯಿತು. ಅಷ್ಟೆ ಅಲ್ಲದೆ ಇವರ ಪ್ರಬಂಧಗಳ ವಸ್ತುವು ಅಷ್ಟೊಂದು ವಿಶಿಷ್ಟವಾಗಿತ್ತು. ಎಷ್ಟೋ ಬರಹಗಾರರು ಅವರ ವರ್ತಮಾನದ ದುಃಖವನ್ನು ಮರೆಯಲು ಪ್ರಬಂಧ ಮಾಧ್ಯಮವನ್ನು ಬಳಸಿಕೊಂಡಂತೆ ಭಾಸವಾಗುತ್ತದೆ. ಈ ಅರ್ಥದಲ್ಲಿ ಕನ್ನಡ ನವೋದಯ ಕಾಲದ ಸಾಮಾಜಿಕ ಹಾಗೂ ರಾಷ್ಟ್ರೀಯತೆಯ ಭಾವಗಳು ಪ್ರಬಂಧಕಾರರನ್ನು ಮತ್ತು ಲಲಿತ ಪ್ರಬಂಧ ಪ್ರಕಾರವನ್ನು ಬಹಳಷ್ಟು ಸಂಪಾಗಿ ಬೆಳೆದು ಬರುವಲ್ಲಿ ಮಹತ್ವದ ಪಾತ್ರವಹಿಸಿತು. ಹೀಗೆ ನವೋದಯದ ಯುಗದಲ್ಲಿ ಅವರ ತತ್ತ್ವಗಳಾದ, ಭಾವಸ್ಪರ್ಶ, ಸಮರಸ, ರಾಷ್ಟ್ರೀಯ ಭಾವುಕತೆ, ಕಲ್ಪನಾಂಶಗಳು ಇವೆಲ್ಲವು ಈ ಸಾಹಿತ್ಯ ಯುಗದಲ್ಲಿ ವಿಜೃಂಭಿಸಲು ಕಾರಣವಾಯಿತು.

ನವೋದಯದಲ್ಲಿ ಯಾವುದು ಪ್ರಬಂಧಗಳನ್ನು ಬೆಳೆಸಿತೋ ಅದು ನವ್ಯಕಾಲದಲ್ಲಿ ಮಾಯವಾಗಿತ್ತು. ಕನ್ನಡ ಸಾಹಿತ್ಯದಲ್ಲಿ ಐವತ್ತರ ದಶಕದಲ್ಲಿ ನವ್ಯವು ಅಬ್ಬರಣೆ ಮಾಡುತ್ತಲೇ ಪ್ರವೇಶಸಿತು. ವಿನಾಯಕರು ಅದಕ್ಕೆ ಚಾಲನೆ ಕೊಟ್ಟರು. ಅಡಿಗರು ಕಮಿಟೆಡ್ ಆಗಿ ಅದಕ್ಕೆ ಒಂದು ಚೌನ್ನತ್ಯವನ್ನು ತಂದುಕೊಟ್ಟರು. ಕಾವ್ಯದ ಮೂಲಕ ನಮ್ಮಲ್ಲಿ ತನ್ನ ಕಸರತ್ತು ನಡೆಸಿದ ಕ್ಲಿಷ್ಟಕರವಾಗಿದ್ದ ನವ್ಯಕತೆ, ಕಾದಂಬರಿ ಕ್ಷೇತ್ರದಲ್ಲಿ ತನ್ನ ವರಸೆಗಳನ್ನು ತೋರಿಸಿತು. ಮಣ್ಣಿನ ವಾಸನೆ ಸಂಕೀರ್ಣತೆ, ಪ್ರತಿಮೆ, ಸಂಕೇತ, ಒಳರಚನೆಯ ಅನಾವರಣ ಇತ್ಯಾದಿ ಸಂಗತಿಗಳನ್ನು ಬೆಳೆಸಿತು. ಆದರೆ ನವ್ಯದ ತಾತ್ತ್ವಿಕತೆಯು ಲಲಿತ ಪ್ರಬಂಧ ಸ್ವರೂಪಕ್ಕೆ ಹಿಡಿಸುವಂಥದ್ದಲ್ಲ. 'ಮಂದ ಶೃತಿಯ ಭಾವಗೀತೆ' ನವ್ಯದಲ್ಲಿ ಇಡಿಯಾಗಿ ತಿರಸ್ಕಾರಕ್ಕೆ ಗುರಿಯಾಯಿತು. ನವ್ಯದಲ್ಲಿ 'ಹಂಚಿಕೊಳ್ಳುವ' ಮನೋಭಾವ ಬೆಳೆಯಲಿಲ್ಲ. ನಾಗರಿಕತೆಯ ಪುರುಷಲಯದ ಅಹಂಕಾರವನ್ನು ಮೈಗೂಡಿಸಿಕೊಂಡ ಅದು ತಾಯ್ತನದ ವಾತ್ಸಲ್ಯವನ್ನು ಬಿಟ್ಟುಕೊಟ್ಟಿತು. 'ಆತ್ಮೀಯತೆ' ಇಲ್ಲವಾಯಿತು. 'ಹರಟೆ-ಪಟ್ಯಾಂಗ'ಗಳಿಲ್ಲದ ಏಕಾಂಗಿ ವ್ಯಕ್ತಿತ್ವವನ್ನು ಅಲ್ಲಿ ಕೀರ್ತಿಸಲಾಯಿತು. ಅಲ್ಲಿ ವ್ಯಕ್ತಿ ಮತ್ತು ಸಮಾಜವನ್ನು ಪ್ರತ್ಯೇಕ ಪರಿಭಾಷೆಯಲ್ಲಿ ಕಾಣಲಾಯಿತು. ನವೋದಯದಲ್ಲಿ ವ್ಯಕ್ತಿಯ ಬಗ್ಗೆ ಮಾತಾಡುತ್ತಿದ್ದರೂ ಸಮಾಜದ ಬಗ್ಗೆ ಮಾತಾಡುತ್ತಿದ್ದಂತೆ ಅನ್ನಿಸುತ್ತಿದ್ದುದರಿಂದ ಪ್ರಬಂಧ ಅಲ್ಲಿ ಸಹಜವಾಗಿ ಹುಟ್ಟಿಬೆಳೆಯಿತು. ನವ್ಯದಲ್ಲಿ ಹಾಗಾಗಲಿಲ್ಲ. ನವ್ಯದ ನಾಯಕರು (ಸಾಹಿತ್ಯದ ಒಳಗಡೆ ಮತ್ತು ಹೊರಗಡೆಗಳಲ್ಲಿ) ಸಮಾಜದ ಜೊತೆ ಹೊಂದಾಣಿಕೆಯಾಗಲಿಲ್ಲ. ಅದು ಜಗತ್ತನ್ನು ಕಂಡ ಪರಿಭಾಷೆ ಪೂರ್ಣವಾಗಿ ವ್ಯಕ್ತಿ ಕೇಂದ್ರಿತವಾಗಿದ್ದು, ಹರಟುವ ಗುಣವನ್ನು ಕಳಕೊಂಡ ಸಮಾಜದಲ್ಲಿ ಪ್ರಬಂಧ ಹುಟ್ಟಲಾರದು. ಅದರಲ್ಲಿ ಈ ಲಲಿತ ಪ್ರಬಂಧ ಪ್ರಕಾರ ಮಾತ್ರ ತೀರ ಅಸಂಭವ. ಆದರೆ ವಿಮರ್ಶಾತ್ಮಕ ಪ್ರಬಂಧಗಳು ನವೋದಯಕ್ಕಿಂತ ನವ್ಯದಲ್ಲಿ ವಿಮರ್ಶೆ ಹೆಚ್ಚು ಶಕ್ತಿ ಸಂಪನ್ನವಾಯಿತು.

ನಾಟಕ ರಚನೆಗೂ ಅದು ನವೀನ ದೃಷ್ಟಿಯನ್ನು ಕೊಟ್ಟಿತು. ಅಸಂಗತ ನಾಟಕಗಳು ಮೂಡಿಬಂದದ್ದು, ಈ ನವ್ಯ ಕಾಲದಲ್ಲಿಯೇ. ನವ್ಯದ ಸಂದರ್ಭದಲ್ಲಿ 'ಲಲಿತ ಪ್ರಬಂಧವು' ಸೊರಗಿತೆಂದು. ಹೇಳಲೇಬೇಕು. ಹಿಂದೆ ಬರೆದವರು ತಮ್ಮ ರೀತಿಯಲ್ಲಿ ಮುಂದುವರಿದರು, ಅವರನ್ನು ಅನುಕರಿಸಲು ಹೋದ ಹೊಸಬರು ಗಂಭೀರ ಚಿಂತನೆಗಿಂತ ಹಾಸ್ಯಕ್ಕೆ ಅಥವಾ ಹರಟೆಗೆ ಮಹತ್ವಕೊಟ್ಟರು. ಈ ಕಾರಣಕ್ಕೆ "ಇಡೀ ನವ್ಯವು ಒಬ್ಬನೇ ಒಬ್ಬ ಪ್ರಬಂಧಕಾರನನ್ನು ಸೃಜಿಸಲಿಲ್ಲ"[೧೧] ನವ್ಯದ ಕಾಲಘಟ್ಟದಲ್ಲಿ ಪ್ರಬಂಧಗಳನ್ನು ಬರೆಯುತ್ತಿದ್ದ ಪಾವೆಂ, ರಾಶಿ, ಎನ್ಕೆ, ದೇಜಗೌ, ಸಿ.ಪಿ.ಕೆ, ಹಾ.ಮಾ.ನಾಯಕ, ಸುನಂದಮ್ಮಾ, ಪ್ರಭುಶಂಕರ, ಜೀಶಂಪ ಮೊದಲಾದವರು ಮೂಲತಃ ನವೋದಯದಿಂದಲೇ ಪ್ರೇರಣೆ ಪಡೆದವರು. ತಾತ್ವಿಕವಾಗಿ ನವೋದಯಕ್ಕೆ ಬದ್ಧರಾದವರು. ವ್ಯಕ್ತಿ ಕೇಂದ್ರಿತವಾದ ಪ್ರಖರ ನೆಲೆಗಳನ್ನು ಸಾಧಿಸಿಕೊಂಡ ನವ್ಯವು ಲಲಿತ ಪ್ರಬಂಧಕಾರರನ್ನು ದುರ್ಬಲಗೊಳಿಸಿತು. ಹಾಗಿದ್ದರೂ ಅಡಿಗರು ಒಂದೆರಡು ಪ್ರಬಂಧ ಬರೆದು ಲಲಿತ ಪ್ರಬಂಧಕ್ಕೆ ಈ ಯುಗದಲ್ಲಿ ನಾವಿನ್ಯ ತಂದುಕೊಟ್ಟರು. ಅರಾಮಿತ್ರ ವೀರೇಂದ್ರ ಸಿಂಪಿ, ಪಿ.ಲಂಕೇಶ, ಪೂರ್ಣಚಂದ್ರತೇಜಸ್ವೀ, ರಾಮಚಂದ್ರದೇವ ಇತ್ಯಾದಿ ಲೇಖಕರ ಪ್ರಬಂಧ ರಚನೆ ಗಮನಾರ್ಹವಾದದ್ದೇ ಆಗಿದೆ. ಈಚೀಗಿನ ಯುವಕರಾದ ಈರಪ್ಪ ಕಂಬಳಿ, ಚಂದ್ರಶೇಖರ ಆಲೂರ, ಮೊಗಳ್ಳಿ ಗಣೇಶ ಈ ಮೊದಲಾದವರ ಪ್ರಬಂಧಗಳು ಅಲ್ಪಸ್ವಲ್ಪ ಕನ್ನಡ ಲಲಿತ ಪ್ರಬಂಧವು ನವ್ಯದಲ್ಲಿ ಊಸಿರಾಡಿತು ಎಂಬುದಕ್ಕೆ ಸಾಕ್ಷಿಯಾಗಿದೆ.

ದಲಿತ ಬಂಡಾಯ ಸಾಹಿತ್ಯದ ಕಾಲಘಟ್ಟದಲ್ಲಿ ಮತ್ತೆ ಪ್ರಬಂಧಗಳು ಕಾಣಿಸಿಕೊಂಡವು. ಇದು ಆಕಸ್ಮಿಕವೇನೂ ಅಲ್ಲ. ಕನ್ನಡ ನವೋದಯದ ಹಲವು ಲಕ್ಷಣಗಳು ಮತ್ತು ಬಂಡಾಯದ ಕಾಲದಲ್ಲಿ ತಲೆ ಎತ್ತಿರುವುದೆ ಇದಕ್ಕೆ ಕಾರಣ. ಗದ್ಯವಾಗಿದ್ದ ಕಾವ್ಯ ಸಂಗೀತದ ಸಹಚರ್ಯವನ್ನು ಒಡಗೂಡಿಸಿಕೊಂಡಿದೆ. ಸಿದ್ದಲಿಂಗಯ್ಯನವರು ಹಾಡುವುದಕ್ಕೆ ಅನುಕೂಲವಾದ ಕಾವ್ಯವನ್ನು ಬರೆದರು. 'ಗಟ್ಟಿಯಾಗಿ ಹಾಡಿಕೊಳ್ಳಿ' ಎಂದು ಸೂಚಿಸಿದರು. ಸಮಷ್ಟಿಯ ಬಗೆಗೆ ಗೌರವ ಮೂಡತೊಡಗಿತು. ಹರಟುವ ಲಕ್ಷಣವು ಮೂಡಿತು. ಸಾಹಿತಿಗಳ ಸಾಮಾಜಿಕ ಕಳಕಳಿ ತೀವ್ರಗತಿಯಲ್ಲಿ, ಪುನಃ ಸ್ಥಾಪನೆಗೊಂಡಿತು. ಕಾಣೆಯಾಗಿದ್ದ 'ಲಿರಿಕ್' ಮನೋಧರ್ಮ ಸ್ವಲ್ಪ ಭಿನ್ನವಾದ ಅರ್ಥದಲ್ಲಿ ನಿಧಾನವಾಗಿ ತಲೆ ಎತ್ತಿತು. ಆತ್ಮೀಯವಾಗಿ ಮಾತಾಡುವ, ಭಾವನೆಯನ್ನು ಹಂಚಿಕೊಳ್ಳುವ ವಿಷಯವಾಗಿ ಸಾಹಿತ್ಯದಲ್ಲಿ ಪುನಃ ಗೌರವ ಮೂಡಿತು. ಯಾವುದನ್ನು ನವ್ಯ ತಿರಸ್ಕರಿಸಿತೋ ಅದನ್ನು ಬಂಡಾಯ ಅಪ್ಪಿಕೊಂಡಿತು. ಹೀಗಾಗಿ ಇಲ್ಲಿ ಲಲಿತ ಪ್ರಬಂಧ ಪ್ರಕಾರ ಜನಪ್ರಿಯವಾಯಿತು. ನವೋದಯ ಕಾಲದ ಲಲಿತ ಪ್ರಬಂಧದ ಮೆರಗು ಮತ್ತೆ ಸ್ವಲ್ಪ ಮಿಂಚಿದ್ದು ಈ ಬಂಡಾಯದ ಯುಗದಲ್ಲಿ. ಅಷ್ಟೆ ಅಲ್ಲದೆ ಈ ಯುಗದಲ್ಲಿ ಸ್ತ್ರೀವಾದಿಗಳು ತಮ್ಮ ಜೀವನದ ಅನುಭವಗಳನ್ನು ಅತ್ಯಂತ ಮನಮೋಹಕವಾಗುವ ರೀತಿಯಲ್ಲಿ ಲಲಿತ ಪ್ರಬಂಧಗಳನ್ನು ರಚನೆ ಮಾಡಿದರು. ಅಂಥವರಲ್ಲಿ ಟಿ.ಸುನಂದಮ್ಮ, ಮಹತ್ವದ ಪ್ರಬಂಧಕಾರರಾಗಿ ಕಾಣುತ್ತಾರೆ. ಅವರ ಪ್ರಬಂಧಗಳ ಸಮಗ್ರ

ಸಂಕಲನಗಳನ್ನು ನೋವಿನ ಸಂಗತಿಗಳನ್ನು ಎಳೆ ಎಳೆಯಾಗಿ ಬಿಡಿಸಿಕೊಂಡು ಹೋದಂತೆ ಇವರು ತಮ್ಮ ಲಲಿತ ಪ್ರಬಂಧಗಳಲ್ಲಿಯು ಸ್ತ್ರೀವಾದಿ ಸಾಹಿತ್ಯವನ್ನು ರಚಿಸಿದ್ದಾರೆ. ಇವರು ಮಾತ್ರವಲ್ಲದೆ, ಆರ್.ನಿರ್ಮಲ, ವಸುಮಲೆ ಉಡುಪ, ಸುನಂದ ಬೆಳಗಾಂಕರ್, ಡಾ ಕೆ.ಆರ್. ಸಂಧ್ಯಾರೆಡ್ಡಿ ಪ್ರೇಮಲತಾ ಸುಂದರೇಶನ್, ಜಯಾಹೂಜಿ ಮತ್ತು ವೃದೆಜಿ ಭಾರತೀ ಕಾಸರಗೋಡು, ಇವರೂ ಕೆಲವು ಉತ್ತಮ ಲಲಿತ ಪ್ರಬಂಧಗಳನ್ನು ನೀಡಿದ್ದಾರೆ. 'ನೆನಪಿನ ಗಣೀಯೆಂದು' ಒಂದು ಹೃದಯಸ್ಪರ್ಶ ಅನುಭವ ಕಥನವಾದರೆ 'ನಿವೇದಿತಾ ಬಾಸಿನ್ ' ಸಾಧನೆಯ ಹಾದಿಯಲ್ಲಿ ಮಹಿಳೆಯರಿಗೆ ಸ್ಫೂರ್ತಿಯ ನೆಲೆಯಾಗಿ ಮುಖ್ಯವಾಗುತ್ತದೆ. "ಶಲ್ಲಕ್ಕ", 'ಅಜ್ಜಿ ಕ್ಲೋಸ್ ಫ್ರೆಂಡ್ ', 'ನಮ್ಮೂರ ನೆನಪುಗಳು' ಮತ್ತು "ಓ.ಮುದ್ದು ಅಳಿಲುಗಳೇ" ಇವುಗಳು ಸ್ತ್ರೀಯರ ಬದುಕಿನ ವಿಶಿಷ್ಟ ಜೀವನ ಕ್ರಮಗಳನ್ನು ಮೌಲ್ಯಗಳನ್ನು ಹಾಗೂ ವಿಶಿಷ್ಟ ಸಂದರ್ಭಗಳನ್ನು ಹಿಡಿದಿಡುವಲ್ಲಿ ಯಶಸ್ವಿಯಾಗಿವೆ.

ಒಟ್ಟಾರೆಯಾಗಿ ಕನ್ನಡ ಲಲಿತ ಪ್ರಬಂಧ ಸಾಹಿತ್ಯವನ್ನು ಅಧ್ಯಯನ ಮಾಡಲಾಗಿ ಮೂರು ಬಹುಮುಖ್ಯ ಪರಂಪರೆಗಳನ್ನು ಸ್ಥೂಲವಾಗಿ ಗುರುತಿಸಬಹುದಾಗಿದೆ. 'ಸಿಂಪಿ'ಯವರ ವಿಚಾರದಂತೆ ಎರಡು ವಿಭಾಗಗಳನ್ನಾಗಿ ಮಾಡಿ ಅಧ್ಯಯನ ಮಾಡಿದಾಗ ನನ್ನ ಗಮನಕ್ಕೆ ಬಂದಿದ್ದು, ಅದನ್ನು ಸಾಹಿತ್ಯ ಚಿಂತಕರು ಒಪ್ಪೋದು ಬಿಡುವುದು ಅವರ ಲಹರಿಗೆ ಬಿಟ್ಟ ವಿಚಾರ. ಆದರೆ ನನ್ನ ಒಂದು ಅಧ್ಯಯನದ ಫಲಿತವಾಗಿ ನಾನು ಮೂರು ಪ್ರಮುಖ ಪರಂಪರೆಗಳನ್ನು ಗುರುತಿಸಿದ್ದೇನೆ.

೧. ಮೂರ್ತಿರಾಯರ ಪರಂಪರೆ
೨. ಕುವೆಂಪು - ಕಾರಂತರ ಪರಂಪರೆ
೩. ಸ್ತ್ರೀವಾದಿಗಳ ಪರಂಪರೆ

ಕನ್ನಡದಲ್ಲಿ ಮೂರ್ತಿರಾಯರ ಪರಂಪರೆ ಮೂರ್ತಿಯರ ಮುಂಚೆ ಮತ್ತು ನಂತರ ಸ್ಪಷ್ಟವಾಗಿ ಗುರುತಿಸಬಹುದು. ಈ ಕ್ಷೇತ್ರದಲ್ಲಿ ಮೂರ್ತಿರಾಯರು ಸಲ್ಲಿಸಿರುವ ಸೇವೆಯನ್ನು ಲಕ್ಷಿಸಿ ಗೌರವಾರ್ಥವಾಗಿ ಈ ಯುಗದಲ್ಲಿನ ಸಾಹಿತ್ಯ ಪರಂಪರೆಯನ್ನು ಮೂರ್ತಿರಾಯರ ಪರಂಪರೆ ಎಂದು ಕರೆಯಲಾಗಿದೆ. ಲಲಿತ ಪ್ರಬಂಧಗಳು ಅಥವಾ ಭಾವ ಪ್ರಬಂಧಗಳು ಎಂಬ ಹಣೆಪಟ್ಟಿ ಹೊತ್ತ ಇಂಥ ಪ್ರಬಂಧಗಳ ಮೆರವಣಿಗೆಯನ್ನು ಕನ್ನಡದಲ್ಲಿ ಗುರುತಿಸಬಹುದು. ಆದರೆ ಕುವೆಂಪು ಕಾರಂತರ ಪರಂಪರೆಗೆ ಸೇರುವ ಪ್ರಬಂಧ ರಚನೆಗಳನ್ನು ಗಂಭೀರ ಪ್ರಬಂಧಗಳು ಅಥವಾ ವಿಚಾರಪ್ರಬಂಧಗಳು ಎಂದು ಕರೆಯಬೇಕಾಗಿದೆ. ಕನ್ನಡದಲ್ಲಿ ಇನ್ನೊಂದು ಕ್ಷೀಣಧಾರೆಯಾಗಿ ಅಲ್ಲಲ್ಲಿ, ನಿಂತು, ಅಡಗಿ, ಜಿನುಗುವಂತೆ ಸ್ತ್ರೀವಾದಿ ಪರಂಪರೆಯನ್ನು ಸ್ತ್ರೀಯರೆ ನೋವುವೇದನೆಗಳನ್ನು ವ್ಯಕ್ತಪಡಿಸಲೆಂದು ಲಲಿತ ಪ್ರಬಂಧಸಾಹಿತ್ಯದಲ್ಲಿ ಹೆಚ್ಚು ಸುವಿವರವಾಗಿ ಇಲ್ಲಿ ವ್ಯಕ್ತಪಡಿಸಿ ಅಧಿಕ ಜನ ಸ್ತ್ರೀಯರು ಈ ಲಲಿತ ಪ್ರಬಂಧ ಸಾಹಿತ್ಯದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡ ಕಾರಣ ಇದನ್ನು ಸ್ತ್ರೀವಾದಿ ಪರಂಪರೆ ಎಂದು ಕರೆದರೆ ತಪ್ಪಾಗಲಾರದೆಂದು ನನ್ನ ಅಭಿಪ್ರಾಯ. ಆದರೂ ಲಲಿತ ಪ್ರಬಂಧಗಳು ಇಲ್ಲಿ ವಿಚಾರಕ್ರಾಂತಿ ಮತ್ತು ಇಹ ಜೀವನದ

ಘನತೆಯನ್ನು ಸಾರುವಂತ ರಚನೆಗಳು ಕನ್ನಡದಲ್ಲಿ ಹೆಚ್ಚು ಹೆಚ್ಚಾಗಿ ಪ್ರಕಟವಾಗಬೇಕೆಂಬುದು ಹಿರಿಯ ಪ್ರಬಂಧಕಾರರ ಹಾಗೂ ವಿಮರ್ಶಕರ ಅಭಿಪ್ರಾಯ.

ಪ್ರಬಂಧ ಸಾಹಿತ್ಯ ಕುರಿತು ನವೋದಯದವರಂತೆ ಗಂಭೀರ ಚಿಂತನೆಯುಳ್ಳ ಹಾಗೂ ಚಿಂತನೆ ಮಾಡುವುದು ಈಗಿನ ಅವಶ್ಯಕತೆಯಾಗಿದೆ. ಕವಿಗಳಿಗೆ, ಕತೆಗಾರರಿಗೆ ಸಿಗುವಂತೆ ಲಲಿತ ಪ್ರಬಂಧಕಾರರಿಗೆ ಬೇಗನೇ ಪ್ರಸಿದ್ಧಿ ಸಿಗಲಿಕ್ಕಿಲ್ಲ. ಹಾಗಿದ್ದರೂ ಅವರ ಪ್ರಬಂಧಗಳಿಗೆ ಮನ್ನಣೆ ಇದ್ದೆ ಇದೆ. ಮರಾಠಿಯಲ್ಲಿ ಪು.ಲ.ದೇಶಪಾಂಡೆಯವರು, ಪ್ರಬಂಧಗಳಿಗೆ ಮನ್ನಣೆ ಇದ್ದೆ ಇದೆ. ಮರಾಠಿಯಲ್ಲಿ ಇವರು ಪ್ರಬಂಧಕಾರರಾಗಿ ಒಂದು ವಿಕ್ರಮವನ್ನು ಆ ಸಾಹಿತ್ಯದಲ್ಲಿ ಸ್ಥಾಪಿಸಿದ್ದಾರೆ. ಸೋಜಿಗದ ಸಂಗತಿಯೆಂದರೆ ಸಭೆಗಳಲ್ಲಿ ಇಡೀಯಾಗಿಯೇ ಪ್ರಬಂಧವೊಂದನ್ನು ಮಂಡಿಸಿ ಶ್ರೋತೃಗಳಿಗೆ ರಂಜನೆಯನ್ನು ಉಂಟು ಮಾಡುತ್ತಿದ್ದರು. ಚಿಂತನೆಗೂ ತೊಡಗಿಸುತ್ತಿದ್ದರು. ಮರಾಠಿ ಸಾಹಿತ್ಯದಲ್ಲಿ ಸಣ್ಣ ಕಥೆಗಳಂತೆ ಲಲಿತ ಪ್ರಬಂಧವು ತುಂಬ ಜನ ಮೆಚ್ಚುಗೆ ಪಡೆದ ಸಾಹಿತ್ಯ. ಅಲ್ಲಿಯ ಪ್ರತಿಯೊಬ್ಬ ಲೇಖಕ ಈ ಲಲಿತ ಪ್ರಬಂಧ ರಚನೆಯ ಕಡೆಗೂ ಪ್ರಬಂಧ ಬೆಳವಣಿಗೆಯು ಸಾಕಷ್ಟು ಸಮೃದ್ಧವಾಗಿದ್ದರೂ ನಮ್ಮಲ್ಲಿ ಜೀವನವನ್ನು ರಸಿಕ ದೃಷ್ಟಿಯಿಂದ ಕಾಣುವ ಪದ್ಧತಿಯು ಕಡಿಮೆಯೆಂದೇ ಹೇಳಬಹುದು. ಆದರೆ ಪಾಶ್ಚಾತ್ಯರಲ್ಲಿ ರಸಿಕ ದೃಷ್ಟಿಯಲ್ಲಿದ್ದ ಸಾಹಿತ್ಯರಚನೆ ಅತಿ ವಿರಳವಾಗಿ ಕಂಡುಬರುತ್ತದೆ. ನಮ್ಮ ಲಲಿತ ಪ್ರಬಂಧ ಹಾಸ್ಯಯ ತೀರ ಸಾಮನ್ಯ ನಮಗಷ್ಟು ಸಾಧಿಸಲೇ ಇಲ್ಲವೇನೋ ಎನ್ನಿಸುತ್ತದೆ.

II

"ಥಳಥಳಿಸುವ ನೀಲಭವ, ಬಿಳಿಯ ಬಿಂಕದಲ್ಲಿ ಮಂದಮಂದವಾಗಿ ಮೆರವಣಿಗೆಯ ಮದುಮಗನಂತೆ ವಿಜೃಂಭಿಸುವ ಮೋಡ, ರೆಕ್ಕೆ ಹೊಯ್ದದದೆ ಅಂತರಿಕ್ಷೆಯಲ್ಲಿ ನಿರಾಂತಕವಾಗಿ ಈಸುಬಿದ್ದ ಗರುಡ ಪಕ್ಷಿ, ತುಟಿ ಮಿಸುಕಿ ನಡುನಡುವೆ ತಲೆದೂಗುತ್ತಿರುವ ಮರದ ತುದಿಗೊಂಚಲು, ಬಾಚಿದ ಕೂದಲಲ್ಲಿ ಬೆರಳಾಡಿಸಿ ಉಟ್ಟ ವಸ್ತ್ರವನ್ನು ಸೆಳೆದಲುಗುವ ಸಲುಗೆಯ ಗಾಳಿ ಅಹಾಹಾ! ಹೃದಯ ಹುಚ್ಚೆದ್ದು ಕುಣಿಯುವ ಇಂತಹ ಸಮಯದಲ್ಲಿ ಹೇಗೆ ಸುಮ್ಮನೆ ನಾನು ನಿಲ್ಲಲಾರೆ ಓಡಿಹೋಗಿ ಒಂದು ಪಟವನ್ನು ಕೊಂಡು ಬಾ, ಸೂತ್ರ ಬಿಚ್ಚಿ ಏರಿಸು, ದಾರಬಿಡು, ಬಿಡು ಇನ್ನೂ ಬಿಡು, ತೋಟದಾಚೆ, ಮೋಡದಾಚೆ, ಪಕ್ಷಿ ಚುಕ್ಕಿಯಾಗಿ ನಿಂತ ಅಂತರಿಕ್ಷ ಮಂಟಪಕ್ಕೆ ನಿನ್ನ ಹೃದಯ ಕಾವ್ಯ ಚಿತ್ರವನ್ನು ಪಟದೊಡನೆ ಹಾರಿಬಿಡು. ಅನಂತವಾದ ಆಕಾರದಲ್ಲಿ ಎನ್ನ ಅಂತರಂಗವನ್ನು ಈಸಗೊಡು ಇಂಥ ಸಂತೋಷವಿನ್ನೆಲ್ಲಿ ಬಂದೀತು? ಪಟ ಹಾರಿಸಲು ಇದು ಯೋಗ್ಯವಾದ ಸಮಯ."[೧]

ಮೇಲಿನ ಕಾವ್ಯಮಯ ವಾಕ್ಯವೃಂದವನ್ನು ಓದಿದ ಶ್ರೀಸಾಮಾನ್ಯನನ್ನು ಸುಂದರ ಭಾವನಾ ಲೋಕಕ್ಕೊಯ್ದು ಆನಂದ ಸಾರಗದಲ್ಲಿ ತೇಲಾಡಿಸುವ ಬರೆಹ ಯಾವುದು? ಯಾರು ಇದರ ಸೃಷ್ಟಿಕರ್ತೃ? ಈ ಅದ್ಭುತ ಶೈಲಿಯು ಯಾರ ಲೆಕ್ಕಣಿಕೆಯಿಂದ ಹರಿದುಬಂದಿರಹುದು? ಎಂಬ ಹಲವು ಪ್ರಶ್ನೆ

ಪುಟಿದೇಳುವುದು ಸಹಜ. ಇದು ೧೯೬೦ರಲ್ಲಿ ಧಾರವಾಡದ ಮನೋಹರ ಗ್ರಂಥಮಾಲೆಯವರು ಪ್ರಕಟಿಸಿದ ಲಲಿತ ಪ್ರಬಂಧ 'ಗಾಳಿಪಟ'ದ ಪ್ರಾರಂಭದ ಸಾಲುಗಳು ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ 'ರಾ.ಕು' ಎಂಬರೆಡಕ್ಷರದಿಂದಲೇ ಚಿರಪರಿಚಿತರಾದ 'ರಾಮಚಂದ್ರ ವೆಂಕಟೇಶ ಕುಲಕರ್ಣಿಯವರು ಇನ್ನು ವಿಮರ್ಶಕರ ದೃಷ್ಟಿಯಲ್ಲಿ 'ಗಾಳಿಪಟ'ದ 'ರಾ.ಕು'. ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಕಂಡ ಅಗ್ರಗಣ್ಯ ಲೇಖಕ. ಇವರು ಬರೆದಿರುವುದು ಬೆರಳೆಣಿಕೆಯ ಮೌಲಿಕ ಪ್ರಬಂಧ ಸಂಕಲನಗಳು ಆದರೂ ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಇಡೀ ಓದುಗ ರಸಿಕರು ತನ್ನನ್ನು ಗುರುತಿಸುವಂತೆ ಸಾಹಿತ್ಯ ಸವಿಯನ್ನು ಕೊಟ್ಟ ಮಹಾನ್ ಲೇಖಕ ಈ 'ರಾ.ಕು' ಹೊಸಗನ್ನಡ ಸಂದರ್ಭದಲ್ಲಿ ಲಲಿತ ಪ್ರಬಂಧವು ಸುಮಾರು ಐದಾರು ದಶಕಗಳಿಂದ ಹಿರಿಯ, ಕಿರಿಯ ಲೇಖಕ ಲೇಖನಿಯಿಂದ ಅಬ್ಬರವಿಲ್ಲದೆ ಹರಿದುಬಂದ ಸಾಹಿತ್ಯವಾಹಿನಿ ಹಿರಿಯ ಪ್ರಬಂಧಕಾರರು ಈ ಪ್ರಕಾರದ ಅಡಿಪಾಯ ಹಾಕಿದರು. ಬಳಿಕ ಅದರ ಮೊದಲ ಮಜಲನ್ನು ಕಟ್ಟಿದ ಬೀಚಿ, ಎನ್ಕೆ, ಎಸ್.ವೆಂಕಟೇಶಯ್ಯ, ಬೇಂದ್ರೆ, ಗೋಕಾಕ, ಅ.ರಾ.ಮಿತ್ರ, ಸಿಂಪಿ ಲಿಂಗಣ್ಣ, ಎ.ಎನ್.ಮೂರ್ತಿರಾಯ, ವಿ.ಸೀ. ರಾವಬಹದ್ದೂರ, ಮೊದಲಾದ ಖ್ಯಾತ ಲಲಿತ ಪ್ರಬಂಧಕಾರರ ಪಂಕ್ತಿಯ ಜೊತೆಯಲ್ಲಿಯೇ ತನ್ನದೇಯಾದ ವಿಶಿಷ್ಟ ಪಾಂಡಿತ್ಯದಿಂದ ರಾರಾಜಿಸುತ್ತ ಬಂದ ಒಂದು ಹೆಸರು ರಾ.ಕು. ಗಾಳಿಪಟ(೧೯೬೦), 'ದೇವಕನ್ಯೆ'(೧೯೭೦), 'ಶೇಷವಿಶೇಷ'(೧೯೯೯) ಎಂಬ ಮೂರು ಅಮೂಲ್ಯ ಕನ್ನಡ ಲಲಿತ ಪ್ರಬಂಧಗಳ ಕೊಡುಗೆಯನ್ನು ಈ ಸಾಹಿತ್ಯಕ್ಕೆ ನೀಡಿದ ರಾ.ಕು ಕನ್ನಡಿಗರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದಾರೆ. ರಾ.ಕು.ಅವರ ಪ್ರಬಂಧವಿಲ್ಲದ ಯಾವುದೇ ಪ್ರಬಂಧ ಸಂಗ್ರಹವು ಅಪೂರ್ಣವೆನಿಸುತ್ತದೆ. ಅಷ್ಟೆ ಅಲ್ಲ ಅವರ ಸಾಹಿತ್ಯದ ರುಚಿಯನ್ನು ಅರಿತವರು ಕನ್ನಡ ಲಲಿತ ಪ್ರಬಂಧಕ್ಕೆ 'ರಾ.ಕು. ಎಂಬ ಹೆಸರು ಸಾಕು' ಎನ್ನುವಷ್ಟರ ಮಟ್ಟಿಗೆ ಇವರ ಲಲಿತ ಪ್ರಬಂಧಗಳು ಪ್ರಸಿದ್ಧವಾದವು. ಲಲಿತ ಪ್ರಬಂಧಗಳಲ್ಲಿಯೂ ಬೌದ್ಧಿಕವಾಗಿ ಎಷ್ಟೆಲ್ಲಾ ಸಂಗತಿಗಳನ್ನು ಚಿಂತಿಸಬಹುದು ಎಂಬುದನ್ನು ರಾ.ಕು. ಅವರು ತಮ್ಮ ಪ್ರಬಂಧಗಳಲ್ಲಿ ಅತ್ಯಂತ ಮೋಹಕವಾಗುವ ರೀತಿಯಲ್ಲಿ ಸೆರೆಹಿಡಿದು ಚರ್ಚಿಸಿದ್ದಾರೆ. ಆಲೋಚನೆಯ ಕಸವು, ಅಧ್ಯಯನದ ಯೋಗ್ಯ ಬಳಕೆ, ಜೀವನವನ್ನು ಅರ್ಥೈಸುವ ವಕ್ರವಿಧಾನ, ವಿಡಂಬನೆಯ ಮೋಜು, ಅಭಿವ್ಯಕ್ತಿಯ ಕಲಾವಂತಿಕೆಯನ್ನೆ ಆಧಾರವಾಗಿಟ್ಟುಕೊಂಡು ಇವರ 'ಗಾಳಿಪಟ' ಪ್ರಬಂಧಗಳು ವಿವಿಧ ದಿಕ್ಕುಗಳಲ್ಲಿ ಜೋಲಿ ಹೊಡೆಯುವಂತೆ ಇವರ ದೃಷ್ಟಿಪಥ ವಿವಿಧ ವಿಷಯಗಳ ಮಜಲುಗಳನ್ನು ಹಾಯ್ದು ಬರುತ್ತಿವೆ.

ಲಲಿತ ಪ್ರಬಂಧಗಳ ಸಾಮಾನ್ಯ ಲಕ್ಷಣ ಸರಳತೆಯಿಂದ ಕೂಡಿದ ಲಲಿತವಾಗಿ ಹಾಸ್ಯಮಯವಾಗಿ, ಹರಟೆಯನ್ನು ಮೀರದೆ ಬರುವ ಸಾಹಿತ್ಯ ಇದು ಒಪ್ಪಿತವಾದ ಒಂದು ಲಕ್ಷಣ. ಆದರೆ ಕನ್ನಡದ ಲಲಿತ ಪ್ರಬಂಧಗಳಲ್ಲಿ ರಾ.ಕು. ಪ್ರಬಂಧಗಳನ್ನು ಓದಿದಾಗ ಇವರ ರಚನಾ ಶೈಲಿಯು ಗಂಭೀರತೆಯಿಂದ ಕೂಡಿದ ಚಿಂತನಾತ್ಮಕ ಲಘುತ್ವದ ಜೊತೆಯಲ್ಲಿ ಸರಾಗವಾಗಿ ಅರ್ಥವಾಗುವಂತೆ 'ಲಲಿತ ಗಂಭೀರ'ವೆಂಬ

ವಿಭಿನ್ನ ಪರಂಪರೆಯ ದರ್ಶನಕ್ಕೆ ಕಾರಣವಾಗಿದ್ದಾರೆ. ಅಷ್ಟೇ ಅಲ್ಲದೆ ಇವರ ಪ್ರಬಂಧಗಳು ಕಲ್ಪನಾ ವಿಲಾಸ ಇಲ್ಲವೆ ಹಾಸ್ಯಲಹರಿಗಳಾಗಿರದೆ, ಇದು ನಗೆಗಳ ಹಿಂದಿನ ನೋವು ವೇದನೆಗಳನ್ನು ವ್ಯಕ್ತಪಡಿಸುತ್ತವೆ. 'ರಂ.ಶ್ರೀ.ಮುಗಳಿ' - "ವಕ್ರೋಕ್ತಿ ವಿಲಾಸಗಳ ಒಡಲಲ್ಲಿ ಗಂಭೀರವು ಅವಿತುಕೊಂಡಿರುವುದೇ ರಾ.ಕು. ಅವರ ಬರವಣಿಗೆಯ ಜೀವಾಳವೆಂದು ನಾನು ತಿಳಿದಿರುತ್ತೇನೆ."[೧೩] ರಾ.ಕು. ಅವರ ಲಲಿತ ಪ್ರಬಂಧಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ಅವರಲ್ಲಿರುವ ವಿಶಿಷ್ಟ ಶಕ್ತಿಯು ನಮ್ಮ ಮನದ ಲಹರಿಯ ಮೇಲೆ ಬಂದು ಹೋಗುತ್ತದೆ. ಏಕೆಂದರೆ ಇವರ ಪ್ರಬಂಧ ಸಾಹಿತ್ಯವನ್ನು ಓದಲು ಓದಿರುವುದನ್ನು ಅರ್ಥಮಾಡಿಕೊಳ್ಳಲು ನಿಪುಣತೆ ಅವಶ್ಯಕ, ಇವರು ಕನ್ನಡ ಭಾಷೆಯ ಜೊತೆಗೆಯಲ್ಲಿ ಇಂಗ್ಲಿಷ್, ಸಂಸ್ಕೃತ ಭಾಷೆಯ ಪ್ರಾವಿಣ್ಯರಾಗಿದ್ದು ತಮ್ಮ ಲಲಿತ ಪ್ರಬಂಧಗಳಲ್ಲಿ ಇಂಗ್ಲಿಷ್ ಹಾಗೂ ಸಂಸ್ಕೃತದ ಹೆಚ್ಚು ಭಾಷಾಂಶಗಳನ್ನು ಬಳಸಿರುವುದು ನಮಗೆ ತಿಳಿದುಬರುತ್ತದೆ.

ರಾ.ಕು. ಅವರಿಗೆ ಇಂಗ್ಲಿಷ್‌ನ 'ಬೇಕನ್'ನ ಚಿಂತನಾತ್ಮಕ 'ಗೋಲ್ಡ್‌ಸ್ಮಿಥ್'ನ ಲಘುಕಥ, ಚಾರ್ಲಸ್ ಲ್ಯಾಂಬನ 'ಶೈಲಿಯು' ಇವರ ಮನಸ್ಸಿನ ಮೇಲೆ ಗಾಢವಾದ ಪ್ರಭಾವಬೀರಿದ್ದು, ಇವರ ಪ್ರಬಂಧಗಳನ್ನು ಅಧ್ಯಯನ ಮಾಡಿ ಇವುಗಳಲ್ಲಿನ ಧ್ಯೇಯಧೋರಣೆ, ರಚನಾಶೈಲಿ, ನಿರೂಪಣೆ ಲಘುತ್ವಗಳನ್ನು ತಮ್ಮ ಸಾಹಿತ್ಯ ಕೃಷಿಯಲ್ಲಿ ಅಳವಡಿಸಿಕೊಂಡರು. ಆದ್ದರಿಂದಲೇ ಇವರ ಕನ್ನಡ ಲಲಿತ ಪ್ರಬಂಧಗಳಲ್ಲಿ ಇಂಗ್ಲಿಷಿನ ಈ ಮೂವರ ಸಾಹಿತ್ಯ ರಚನೆಯ ಕಲೆಯೂ ಇವರ ಮೂರು ಪ್ರಬಂಧ ಸಂಕಲನದಲ್ಲಿ ನಾವು ಕಾಣಬಹುದಾಗಿದೆ. ಅದರಲ್ಲಿಯು 'ಬೇಕನನ್ ' ಪ್ರಬಂಧಗಳೆಂದರೆ ಇವರಿಗೆ ಪಂಚಪ್ರಾಣ. ಕೇವಲ ಪಾಶ್ಚಿಮಾತ್ಯ ಪ್ರಬಂಧಕಾರರು ಮಾತ್ರ ಇವರ ಮೇಲೆ ಪ್ರಭಾವ ಬೀರದೆ ಕನ್ನಡ ಲಲಿತ ಪ್ರಬಂಧದ ಹರಿಕಾರ ಎ.ಎನ್.ಮೂರ್ತಿರಾವ್, ಶ್ರೀರಂಗ, ಕುವೆಂಪು, ಶಿವರಾಮಕಾರಂತ, ಅ.ರಾ.ಮಿತ್ರ ಇವರೆಲ್ಲರು ತಮ್ಮ ಸಾಹಿತ್ಯ ಕೃಷಿಗೆ ಸ್ಪೂರ್ತಿದಾಯಕರು ಎಂದಿದ್ದರು. ಇದರ ಫಲವೇ ಇವರು ತಮ್ಮ ಲಲಿತ ಪ್ರಬಂಧಗಳಲ್ಲಿ ಮೂರ್ತಿರಾಯರ ಭಾವನಾತ್ಮಕ ಹಾಸ್ಯಮಯವಾದ, ಕಲ್ಪನೆಯ ವಿಚಾರಗಳನ್ನು ಕುವೆಂಪು, ಕಾರಂತರ, ಚಿಂತನಾತ್ಮಕ ವಿಚಾರಗಳನ್ನು ತಮ್ಮ ಸಾಹಿತ್ಯದಲ್ಲಿ ಮೈಗೂಡಿಸಿ ಕೊಂಡಿದ್ದರಿಂದ ರಾ.ಕು.'ಲಲಿತ ಗಂಭೀರ' ಎಂಬ ಇನ್ನೊಂದು ಪರಂಪರೆಯ ಮೂಲಕವೇ ತಮ್ಮ ಲಲಿತ ಪ್ರಬಂಧಗಳನ್ನು ರಚಿಸಿ, ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ವಿಶಿಷ್ಟವಾದ ರೀತಿಯಲ್ಲಿ ತಮ್ಮನ್ನು ಅತ್ಯಂತ ವೈಶಿಷ್ಟವಾಗಿ ಗುರುತಿಸಿಕೊಳ್ಳುವುದರ ಜೊತೆಯಲ್ಲಿಯೇ ಮೇಲ್ಪಪಂಕ್ತಿಯಲ್ಲಿ ನಿಲ್ಲುತ್ತಾರೆ. ಆದ್ದರಿಂದ ಇವರ ಪ್ರಬಂಧಗಳು ತರ್ಕಪೂರ್ಣವಾದ ಜಿಜ್ಞಾಸೆ ಮೂಡಿಸುವ, ವೈಚಾರಿಕ ದೃಷ್ಟಿಯುಳ್ಳದ್ದಾಗಿದ್ದು, ಧ್ವನಿಪೂರ್ಣ ವಿಡಂಬನೆ ಬಳಸಿಕೊಂಡ ರಾ.ಕು.ಪ್ರಬಂಧಗಳು ಕನ್ನಡ ಲಲಿತ ಪ್ರಬಂಧ ಕ್ಷೇತ್ರದಲ್ಲಿ ವಿಶಿಷ್ಟವಾಗಿ ಗೋಚರಿಸುವಂತಹ ಕೃತಿಗಳಾಗಿವೆ. ಒಟ್ಟಿನಲ್ಲಿ ರಾ.ಕು. ಅವರು ತಮ್ಮ ಬಹುಭಾಷಾ ಪಾಂಡಿತ್ಯವನ್ನು ಅರ್ಥಪೂರ್ಣವಾದ ರೀತಿಯಲ್ಲಿ ಉಪಯೋಗಿಸಿಕೊಂಡು ತಮ್ಮ ಆಳವಾದ ಜ್ಞಾನದಿಂದ

ಆ ಪಾಂಡಿತ್ಯವನ್ನು ಅತ್ಯಂತ ಸಮೃದ್ಧವಾಗಿ ಬಳಸಿಕೊಂಡು ಪ್ರಬಂಧಗಳ ವಿಚಾರ ವಸ್ತುಗಳನ್ನಾಗಿ ತೀರ ಸಾಮಾನ್ಯ ಸಂಗತಿಗಳನ್ನು ಆಯ್ದುಕೊಂಡು ಅವುಗಳಿಗೆ ಇನ್ನಿಲ್ಲದ ಮಹತ್ವವನ್ನು ಸಾರುವ ಇವುಗಳಲ್ಲಿಯ ಬಹು ಅರ್ಥಗಳನ್ನು ಸಮಾಜಕ್ಕೆ ಒದಗಿಸಿಕೊಡುವಂಥ ವಿಶಿಷ್ಟವಾದ ರಚನಾಶಕ್ತಿ ರಾ.ಕು. ಅವರದಾಗಿದೆ. ಆದ್ದರಿಂದಲೇ "ದ.ರಾ.ಬೇಂದ್ರೆಯವರು ಇವರ 'ಗಾಳಿಪಟ'ವನ್ನು ಓದಿ 'ಎಷ್ಟು ಸರಸ್ವತಿಗಳ ನೀರು ಕುಡಿದಿದೆ ಈ ಶೈಲಿ!"[೧೪] ಎಂದಿದ್ದರು.

ರಾ.ಕು. ಅವರು ರಚಿಸಿದ ಮೂರು ಲಲಿತ ಪ್ರಬಂಧಗಳನ್ನು ವಿವೇಚಿಸಿದಾಗ ಅವುಗಳ ಮಹತ್ವವು ನಮಗೆ ಅರಿವಾಗುತ್ತದೆ.

ಗಾಳಿಪಟ : ೧೯೬೦ರಲ್ಲಿ ಮನೋಹರ ಗ್ರಂಥಮಾಲೆಯವರು ಪ್ರಕಟಿಸಿದ ಈ ಸಂಕಲನದಲ್ಲಿ ಒಟ್ಟು ೧೬ ಪ್ರಬಂಧಗಳ ಸಂಗ್ರಹವಿದ್ದು ಎಲ್ಲವೂ ಹಲವು ಹತ್ತು ವಿಷಯ ವಸ್ತುಗಳನ್ನು ಒಳಗೊಂಡಿದ್ದು, ಕನ್ನಡ ಲಲಿತ ಪ್ರಬಂಧ ಸಾಹಿತ್ಯವನ್ನು ಶ್ರೀಮಂತಗೊಳಿಸಿದೆ.

೧. ಸಹಜ ಮನರಂಜನೆ ನೀಡುವ ಸಾಧಾರಣ ಆಟಗಳನ್ನು ಕುರಿತಾಗಿ 'ಗಾಳಿಪಟ' ಹಾಗೂ 'ಇಸಪೇಟಿನ ಪಾಠ' ಪ್ರಬಂಧಗಳಲ್ಲಿ.

೨. 'ಪ್ರಚಲಿತ ಸಾಮಾಜಿಕ ಸಮಸ್ಯೆಗಳನ್ನು ಕುರಿತಾಗಿ', 'ಉಗಿಬಂಡೆಯ ಓದು', 'ಟೊಪ್ಪಿಗೆ', 'ಹೆಸರು', 'ನಿದ್ರಾಭ್ಯಾಸ' ಹಾಗೂ 'ಪ್ರಾತರುತ್ಥಾನ' ಪ್ರಬಂಧಗಳಲ್ಲಿ

೩. 'ವೈಯಕ್ತಿಕ ಅನುಭವ ಹಾಗೂ ಸಮಸ್ಯೆಗಳನ್ನು ಕುರಿತು' 'ಆಯುಷ್ಕರ್ಮ' 'ಅಂಕಗಣಿತ' 'ನನ್ನ ತೋಟಗಾರಿಕೆ' ಪ್ರಬಂಧಗಳು

೪. 'ಸಾಹಿತ್ಯಿಕ ವಿಷಯಗಳನ್ನು ಕುರಿತಾಗಿ' 'ಕವಿಜಿವ್ಹಾಬಂಧನ' ಹಾಗೂ 'ಭೃಂಗವಿಲಾಸ' ಪ್ರಬಂಧಗಳಲ್ಲಿ

೫. 'ವೈಚಾರಿಕವು ಚಿಂತನಾತ್ಮಕವಾದ ವೈಶಿಷ್ಟ್ಯಪೂರ್ಣ ವಿಷಯಗಳನ್ನು ಕುರಿತಾಗಿ' 'ಸ್ನಾನ ಸಂಗೀತ', 'ಕಿರುಕುಳ ರಜೆ', 'ಹಸ್ತಪತ್ರಿಕೆ' ಮತ್ತು ಕುರುಡು ಕಾಂಚಣ' ಪ್ರಬಂಧಗಳಲ್ಲಿ ಚರ್ಚಿಸಲಾಗಿದೆ.

'ಗಾಳಿಪಟ' ಸಂಕಲನವು ಅತ್ಯುತ್ತಮ ಪ್ರಬಂಧ ಸಂಕಲನ. ಈ ಪ್ರಬಂಧ ದೀರ್ಘತೆಯೊಂದನ್ನು ಬಿಟ್ಟರೆ ಒಂದು ಪ್ರಬಂಧ ಹೇಗಿರಬೇಕು ಎಂದು ಬೆರಳೆತ್ತಿ ಹೊರಬಹುದಾದ ಮಾದರಿ ಲಲಿತ ಪ್ರಬಂಧ ಸಂಕಲನವಿದು. ವಿಷಯ, ನಿರೂಪಣೆ, ಶೈಲಿ, ಕಲಾತ್ಮಕತೆ, ಆತ್ಮೀಯ ಭಾಷೆ, ಹಾಸ್ಯ, ವಿಡಂಬನೆ ಇವೆಲ್ಲಾ ಅಂಶಗಳ ಸುಂದರ ಹಾಗೂ ಸಮರ್ಪಕ ಪ್ರಯೋಗಗಳು ಈ ಪ್ರಬಂಧದಲ್ಲಿ ಆಗಿವೆ. ಪ್ರಬಂಧದ ಆರಂಭವು ಕಾವ್ಯಮಯವಾಗಿದೆ. "ಥಳಥಳಿಸುವ ನೀಲಿನಭ, ಬಿಳಿಯ ಬಿಂಕದಲ್ಲಿ.... ಮಂದವಾಗಿ... ವಿಜೃಂಭಿಸುವ ಮೋಡ..."[೧೫] ಈ ಪಂಕ್ತಿಗಳನ್ನು ಉದಾಹರಣೆಗಳಾಗಿ ನಾವು ನೋಡಬಹುದು. ಗಾಳಿಪಟದ

ಆಟ ಲೇಖಕನನ್ನು ಇಂದಿಗೂ ಕಲ್ಪನಾ ಲೋಕವಿಹಾರಕ್ಕೆ ಕರೆದೊಯ್ದು ಆನಂದ ನೀಡುತ್ತವೆ. ನಾಳಿನ ಚಿಂತೆಗೆ ಅಥವಾ ಸುಖಕ್ಕೆ ಇಂದಿನ ಸುಖ ತ್ಯಜಿಸದೆ ವಿಜ್ಞಾನ, ವೇದಾಂತಗಳ ವಿಚಾರಗಳನ್ನು ಮಡಿಚಿಟ್ಟು "ನನ್ನ ಪಟದೊಡನೆ ನಾನೊಬ್ಬ ಸಾಕು..." ಎಂದು ಪ್ರಾರಂಭಿಸಿದ ವಿಷಯ ಬಿಂದುವಿನಲ್ಲೇ ಬಂದು ಕೂಡುವಂಥ ಕಲಾತ್ಮಕ ಚೌಕಟ್ಟನ್ನು 'ಗಾಳಿಪಟ' ಪ್ರಬಂಧ ಹೊಂದಿದೆ. ಈ ಪ್ರಬಂಧ ಕನ್ನಡ ಲಲಿತ ಪ್ರಬಂಧ ಸಾಹಿತ್ಯದ ಕೆಲವೇ ಕೆಲವು ಶ್ರೇಷ್ಠ ಪ್ರಬಂಧಗಳಲ್ಲೊಂದು, 'ಇಸಪೇಟಿನ ಪಾಠ'ದಲ್ಲಿ ಬೇಡವಾದ ಆಟ ಕೊನೆಗೆ ಆ ಆಟದಿಂದ ಕೈಕೊಸರಿಕೊಂಡು ಪಾರಾಗುಣವ ಮನೋಭಾವವನ್ನು ಇಲ್ಲಿ ಚರ್ಚಿಸಲಾಗಿದೆ.

ಈ ಸಂಕಲನವನ್ನು ಸಾಮಾಜಿಕ ಅಂಶಗಳನ್ನು ಕುರಿತು ಅತ್ಯಂತ ಉತ್ತಮ ರೀತಿಯಲ್ಲಿ ಲೇಖಕರು ಚರ್ಚಿಸಿದ್ದಾರೆ. ಊಗಿಬಂಡಿಯ ಓದು ಇಲ್ಲಿನ ಒಂದು ಭೋಗಿಯಲ್ಲಿ ಲೇಖಕರು ಒಂದು ದಿನಪತ್ರಿಕೆಯನ್ನು ತೆಗೆದುಕೊಂಡು ಓದಲಾರಂಭಿಸಿದಾಗ ಸಹ ಪ್ರಯಾಣಿಕರು ಅವರ ಆ ಪತ್ರಿಕೆಯನ್ನು ತೆಗೆದುಕೊಂಡು ಬಿಡಿ ಬಿಡಯಾಗಿಸಿ ಒಬ್ಬಬ್ಬರು ಒಂದೊಂದು ಪುಟವನ್ನು ಹಂಚಿಕೊಂಡು ಓದುತಾ ಕೊನೆಗೊಮ್ಮೆ ಲೇಖಕರಿಗೆ ತಮ್ಮ ಪತ್ರಿಕೆಯ ಸಿಗದ ರೀತಿಯಲ್ಲಿ ಮಾಡುವುದರ ಜೊತೆಯಲ್ಲಿ ಆ ಪತ್ರಿಕೆಯು ಇಡೀ ಭೋಗಿಯನ್ನೆ ಸುತ್ತುವುದನ್ನು ಕಂಡು ನಮ್ಮ ಸಮಾಜದಲ್ಲಿನ ಪ್ರಜ್ಞೆಯುತ ಜನರ ವರ್ತನಾ ಮುಖವನ್ನು ತೋರಿಸುತ್ತಾರೆ. ಕೊನೆಗೊಮ್ಮೆ ಆ ಪತ್ರಿಕೆಯ ಮೇಲಿನ ಮಾಲಿಕತ್ವವನ್ನು ಅವರು ಕಳೆದುಕೊಳ್ಳುವದಂತೂ ನಮ್ಮ ಸಮಾಜದಲ್ಲಿನ ದೌರ್ಜನ್ಯದ ಒಂದು ಮುಖವನ್ನು ಇಲ್ಲಿ ಪರಿಚಯಿಸಿದ್ದಾರೆ. 'ಹೆಸರು' ಪ್ರಬಂಧದಲ್ಲಿ ಹುಟ್ಟಿದ ಮಗುವಿಗೆ ಇಂದಿನ ಕಾಲದಲ್ಲಿ ದೀರ್ಘನಾಮಗಳನ್ನು ಆದಷ್ಟು ಮೊಟಕುಗೊಳಿಸುವ ಒಂದು ಸಂಸ್ಕೃತಿಯನ್ನು ಇಂದಿನ ಸಮಾಜದಲ್ಲಿ ಹೇಗೆ ಬಳಸಿದ್ದಾರೆ. ಪಾಶ್ಚಿಮಾತ್ಯರ ಶೈಲಿಯ ನಾಮಗಳನ್ನು ಇಡಲು ಹೋಗಿ ಅವು ನಮ್ಮ ಸಂಸ್ಕೃತಿ-ಸಮಾಜಕ್ಕೆ ಒಗ್ಗದೆ ಅಪಹಾಸ್ಯಕ್ಕೆ ಎದುರಾಗುವುದನ್ನು ಮೊಟಕುಗೊಳಿಸಿದ ನಾಮಗಳನ್ನು ಕುರಿತು ರಾ.ಕು. ಅಲ್ಲಿ ವಿಶಿಷ್ಟವಾಗಿ ಚರ್ಚಿಸಿದ್ದಾರೆ. ವ್ಯಂಗ್ಯ ವಿಡಂಬನೆಗಳು ಪ್ರಬಂಧ ಪ್ರಕಾರದ ಮುಖ್ಯ ಅಂಗಗಳು ಪ್ರಬಂಧಗಳ ಮಾತಿನ ವ್ಯಂಗ್ಯ ವಿಡಂಬನೆಗಳು ಎಂದಿಗೂ ವ್ಯಕ್ತಿಗತವಾಗಿರದೆ, ಸಾಮೂಹಿಕ ಅನ್ಯಾಯ, ಅನಿಷ್ಟಗಳನ್ನು ಕುರಿತು ಬರೆದಿದ್ದಾಗಿರುತ್ತದೆ. ಆದ್ದರಿಂದಲೇ ಇಲ್ಲಿ ರಾ.ಕು. ಒಬ್ಬ ಉಚ್ಛಮಟ್ಟದ ಸಮಾಜ ಸುಧಾರಕನಾಗಿ ಕಾಣುತ್ತಾರೆ. ಈ ದೃಷ್ಟಿಯಲ್ಲಿ ತಮ್ಮ ಪ್ರಬಂಧಗಳಲ್ಲಿ ಸಮಾಜದ ಕುಂದು ಕೊರತೆಗಳ ಮೇಲೆ ತಮ್ಮ ನಿರ್ಭೀಡೆಯವಾದಗಳ ಕ್ಷಕಿರಣ ಪ್ರಯೋಗಿಸಿ, ಸಮಾಜ ಸುಧಾರಣೆಯ ತಮ್ಮ ಗುರುತರ ಸಂಕಲನವನ್ನು ತಲುಪುವ ಪ್ರಾಮಾಣಿಕ ಪ್ರಯತ್ನಗಳನ್ನು ತಮ್ಮ ಈ ಸಂಕಲನದಲ್ಲಿ ರಾ.ಕು ಮಾಡಿದ್ದಾರೆ.

ಲಲಿತ ಪ್ರಬಂಧಗಳಲ್ಲಿ ಹಾಸ್ಯವನ್ನು ರಾ.ಕು.ಬಳಸಿದ್ದು ವಿಶಿಷ್ಟವಾಗಿದೆ. 'ಇಸಪೇಟಿನ ಪಾಟ' 'ಉಗಿಬಂಡಿ ಓದು' 'ಆಯುಷ್ಕರ್ಮ' 'ನಿದ್ರಾಭ್ಯಾಸ' ಈ ಪ್ರಬಂಧಗಳಲ್ಲಿ ಹಾಸ್ಯತೆಯನ್ನು ಅತ್ಯಂತ

ಸ್ಫುಟವಾಗಿ ಓದುಗನಿಗೆ ಬೇಸರಬಾರದ ರೀತಿಯಲ್ಲಿ ರಾ.ಕು. ಅವರ ರಚಿಸಿದ್ದಾರೆ. ಕಲಾತ್ಮಕತೆ ಈ ಪ್ರಬಂಧಗಳಲ್ಲಿ ಸ್ಫೂಟವಾಗಿ ಮೂಡಿದ್ದು ಇದು ಗಮನಾರ್ಹ ಅಂಶ ಮನಸೆಳೆಯುವ ಪ್ರಾರಂಭಗಳು, ಚರ್ಚೆಯ ಕೊನೆಗೆ ಪ್ರಾರಂಭದ ವಿಚಾರದಲ್ಲಿ ಸಂಗಮವಾಗುವ ಕಲಾತ್ಮಕತೆ ಪ್ರಶಂಸನೀಯ, ಕೆಲವೊಮ್ಮೆ ಚತುರೋಕ್ತಿಗಳಿಂದ ಉದ್ಘಟಿತವಾದ ಪ್ರಬಂಧ ಪ್ರಭಾವಶಾಲಿಯಾಗಿದೆ. 'ಕಿರುಕುಳರಜೆ'ಯ ಪ್ರಾರಂಭವನ್ನು ಇಲ್ಲಿ ಗಮನಿಸಬಹುದು. "ಮುಖ ಇದ್ದವನಿಗೆ ಮೂಗು ಹೇಗೋ ನೌಕರಿ ಇದ್ದವನಿಗೆ ರಜೆ"[೧೬] ಒಂದು ವಿಷಯದಿಂದ ಇನ್ನೊಂದು ವಿಷಯಕ್ಕೆ ಕರೆದೊಯ್ಯುವಾಗ ಪ್ರಬಂಧದ ಮುಖ್ಯವಿಚಾರವನ್ನು ಮರೆಯದಂತೆ ಅದರ ಸೂತ್ರದಲ್ಲೆ ಮಣಿಗಳನ್ನು ಪವಣಿಸಿದಂತೆ ವಿಚಾರಗಳನ್ನು ಜೋಡಣೆ ಮಾಡಿದ್ದಾರೆ ಲೇಖಕರು.

ಗಾಳಿಪಟ ಸಂಕಲನವನ್ನು ಒಟ್ಟಾರೆಯಾಗಿ ಅವಲೋಕಿಸಿದ ನಂತರ ಇಲ್ಲಿನ ಲಲಿತ ಪ್ರಬಂಧಗಳಲ್ಲಿ ಲೇಖಕರು ಬಳಸಿದ ಭಾಷೆ, ಶೈಲಿ, ನಿರೂಪಣೆ, ತಂತ್ರಗಾರಿಕೆ, ಸಂಸ್ಕೃತ ಪದಗಳ ಬಳಕೆ, ಶ್ಲೋಕಗಳ ಬಳಕೆ, ಮನರಂಜನೆಯ ಜೊತೆಗೆ ವೃತ್ತಿ ಹಾಗೂ ಸಮಾಜಗಳ ವಿಮರ್ಶೆಗಳು ಲೇಖಕನ ಮೂಲ ಉದ್ದೇಶವಾದುದರಿಂದ ಇಲ್ಲಿ ಬಳಸಲ್ಪಡುವ ಭಾಷೆ, ಶೈಲಿ, ನಿರೂಪಣೆ ಮುಂತಾದ ತಂತ್ರಾಂಶಗಳ ಜವಾಬ್ದಾರಿ ಹಿರಿದಾಗಿದೆ. ಈ ಜವಬ್ದಾರಿಯನ್ನು ಅತ್ಯಂತ ಸುಂದರವಾಗಿ ನಿಭಾಯಿಸಿದ್ದರ ಫಲವೇ ಇಂದು ಈ ಗಾಳಿಪಟ ಕನ್ನಡ ಲಲಿತ ಪ್ರಬಂಧ ಪರಂಪರೆಯಲ್ಲಿ ಅಮರವಾಗಿ ಹಾರಾಡುತ್ತಿರುವುದು ರಾ.ಕು. ಕವಿಹೃದಯದ ಪ್ರಬಂಧಕಾರರು, ಅವರು ಕಾವ್ಯಮಯವಾದ ತಂತ್ರವು ಈ ಹದಿನಾರು ಪ್ರಬಂಧಗಳನ್ನು ಆಸ್ವಾದಿಸಲು ಹೊರಟ ಓದುಗನಿಗೆ ದಾರಿಯುದ್ದಕ್ಕೂ ಅಲ್ಲಲ್ಲಿ ಕಾವ್ಯಾತ್ಮಕ ಕಲ್ಪನೆಗಳ ರುಚಿಯನ್ನು ಸ್ಪರ್ಶಿಸುವುದು ಒಂದು ವಿಶಿಷ್ಟವಾದ ಕನ್ನಡ ಲಲಿತ ಪ್ರಬಂಧದ ಅನುಭವ.

೨. ದೇವಕನ್ಯೆ : ೧೯೭೦ರಲ್ಲಿ ಪ್ರೊ.ಮಳಗಿಯವರ ಒತ್ತಾಸೆಯಿಂದ ಲೋಟಸ್ ಪ್ರಿಂಟರ್ಸ್ ಬೆಂಗಳೂರ-೧೧ ಇವರು ಪ್ರಕಟಿಸಿದರು. ಈ ಸಂಕಲನದಲ್ಲಿ ಒಟ್ಟು ೧೩ ಪ್ರಬಂಧಗಳ ಸಂಗ್ರಹವಿದ್ದು, 'ಗಾಳಿಪಟ' ಸಂಕಲನದ ನಂತರ ಬರೆದ ಲೇಖನಗಳ ಸಂಗ್ರಹವೇ ಇದಾಗಿದೆ. ಇಲ್ಲಿಯೂ ಕೂಡಾ ರಾ.ಕು. ಅವರು ವೈವಿಧ್ಯಮಯವಾಗಿ ವಸ್ತುವಿಷಯಗಳನ್ನು ತಮ್ಮ ಪ್ರಬಂಧಗಳ ಪುರಣವನ್ನಾಗಿಸಿ, ಕನ್ನಡ ಲಲಿತ ಪ್ರಬಂಧ ಸಾಹಿತ್ಯದ ಓದುಗರಿಗೆ ಔತಣವನ್ನೇ ಊಣಬಡಿಸಿದ್ದಾರೆ. ಈ ಸಂಕಲನದಲ್ಲಿಯ ವಿಶಿಷ್ಟತೆ ಹೀಗಿದೆ.

I. ಸಾಮಾಜಿಕ ಅಂಶಗಳನ್ನೊಳಗೊಂಡ ಪ್ರಬಂಧಗಳು

೧. ದೇವಕನ್ಯೆ
೨. ಮಡಿವಾಳ ಮಹಾರಾಯ
೩. ಮೂಷಕಯಾಗ
೪. ಒಳ್ಳೆಯ ನಿರ್ಧಾರಗಳು
೫. ಸಿನಿಮಾ ಸಂಗಡಿಗರು

II. ಯಾಂತ್ರಿಕರಣವನ್ನು ಮತ್ತು ಕಾಲಜ್ಞಾನಿಕ ವಿಚಾರಗಳುಳ್ಳ ಪ್ರಬಂಧಗಳು

೧. ಒಂದು ಲೆಕ್ಕ ೨. ಡೀ ಲಕ್ಷ ಕೋಟು

೩. ಕಷ್ಟವಿಚಾರ ೪. ಕೊಡೆಯ ವಿಚಾರ

III. ಪೌರಾಣಿಕತೆಗೆ ಆಧುನಿಕತೆಯ ಲಘುತ್ವ ಸ್ಪರ್ಶದ ಪ್ರಬಂಧಗಳ

೧. ಅಕ್ಷುದ್ರ ೨. ಮಡಿವಾಳ ಮಹಾರಾಯ

IV. ಸಾಮಾನ್ಯತಾ ಶ್ರೀಯನ್ನು ಮತ್ತು ನಗೆಯ ಹಿಂದಿನ ನೋವು ಪ್ರಬಂಧಗಳು

೧. ಪದತ್ರಣ ೨. ಬದಲಿ ಛತ್ರಿ ೩. ಸಂಭಾಷಣ ಶತ್ರುಗಳು

'ದೇವಕನ್ಯೆ' ಪ್ರಬಂಧ ಸಂಕಲನವು ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಇದು ಕೂಡಾ ತನ್ನದೆಯಾದ ವೈಶಿಷ್ಟತೆಗಳಿಂದಾಗಿ ಒಂದು ಪ್ರಮುಖ ಲಲಿತ ಪ್ರಬಂಧ ಸಂಕಲನವಾಗಿ ಗೋಚರಿಸಿದೆ. ರಾ.ಕು. ಅವರು ತಮ್ಮ ಮೊದಲ ಸಂಕಲನ 'ಗಾಳಿಪಟ'ದಂತೆಯೇ ತಮ್ಮ ವಿಚಾರಗಳನ್ನು ಬಿತ್ತರಿಸುತ್ತಾ ಹೊಸದಾದ ಒಂದು ವಿಚಾರದೆಡೆಗೆ ಮಹತ್ವವನ್ನು ಕೊಡುವುದು ನಮಗೆ ಈ ಸಂಕಲನವನ್ನು ಅವಲೋಕಿಸಿದಾಗ ಗೋಚರವಾಗುತ್ತದೆ. ಗಾಳಿಪಟದಂತೆ ರಾ.ಕು ಇಲ್ಲಿಯೂ ಸಾಮಾಜಿಕ ಸುಧಾರಣೆ ಅಂಶಗಳು, ಚಿಂತನಾತ್ಮಕ ವಿಚಾರಗಳು, ಹಾಸ್ಯ ಜೊತೆಯಲ್ಲಿ ಈ ಸಂಕಲನದ ಒಂದು ವಿಶಿಷ್ಟ ಅಂಶ ಕಂಡುಬರುವುದು. ಯಾಂತ್ರೀಕರಣದ ಅಂಶಗಳನ್ನು ಬಿಂಬಿಸುವುದರ ಜೊತೆಯಲ್ಲಿ 'ನಗೆಯ ಹಿಂದಿನ ನೋವುಗಳನ್ನು ರಾ.ಕು ಅವರು ಇಲ್ಲಿ ಚಿಂತನಾತ್ಮಕ ರೀತಿಯಲ್ಲಿ ಅತ್ಯಂತ ರಸವತ್ತಾಗಿ ವಿವರಿಸಿದ್ದಾರೆ. 'ದೇವಕನ್ಯೆ' ಪ್ರಬಂಧ ಸಂಕಲನವನ್ನು ಕುರಿತು ರಂ.ಶ್ರೀ ಮುಗಳಿಯವರು ಇದಕ್ಕೆ ಮುನ್ನುಡಿಯಲ್ಲಿ "ರಾ.ಕು. ಅವರ 'ಗಾಳಿಪಟ'ದ ದಾರದಗುಂಟ ಈ 'ದೇವಕನ್ಯೆ' ಇಳೆಗಿಳಿದು ಬಂದಿದ್ದಾಳೆ. ಇದು ಅವರ ಪ್ರಬಂಧ ಪ್ರತಿಭೆಯ ಎರಡನೆಯ ಆವಿಷ್ಕಾರ ಈಗಾಗಲೇ ಜಾಣ ರಸಿಕರು ಅವರ ಬರವಣಿಗೆಯನ್ನು ಕೊಂಡಾಡಿದ್ದಾರೆ. ಕನ್ನಡ ಪ್ರಬಂಧ ಸಾಹಿತ್ಯದಲ್ಲಿ ಅದರ ವೈಶಿಷ್ಟ್ಯವನ್ನು ಕಂಡುಹಿಡಿದಿದ್ದಾರೆ. ಎಂದಿಗೂ ಜೀವನವು ಇಂಥ ಬರಹಗಳಿಗೆ ಸಾಕಷ್ಟು ಸಾಮಗ್ರಿಗಳನ್ನು ನೀಡುತ್ತಿರುತ್ತದೆ. ಇಂದಂತೂ ವಕ್ರೋಕ್ತಿ ವಿಲಾಸಗಳಿಗೆ, ಕೊಂಕು-ಕಟಕಿಗಳಿಗೆ ಗುರಿಯಾಗುವಂಥ ಸನ್ನಿವೇಶಗಳು ಸಂಗತಿಗಳು ಮತ್ತು ವ್ಯಕ್ತಿಗಳು ಹೆಜ್ಜೆ-ಹೆಜ್ಜೆಗೆ ಕಣ್ಣಿಗೆ ಬೀಳುತ್ತದೆ. ರಾ.ಕು. ಅವರ ದೃಷ್ಟಿ, ಲೇಖಕನಿಗೆ ಅವುಗಳು ಸೂಕ್ಷ್ಮವಾಗಿ ಕಂಡಿದೆ. ಕಂಡರಿಸಿದೆ, ಅವರ ಬರವಣಿಗೆಯ ತಂತ್ರದಲ್ಲಿ ಒಂದು ವಿಧದ ಸರಣಿಯಿದೆ... ವಕ್ರೋಕ್ತಿ ವಿಡಂಬನೆಗಳಿಂದ ಹಾಸ್ಯ ನಿರ್ಮಾಣವೇ ಇಂಥ ಪ್ರಬಂಧಗಳ ಗುರಿಯಾಗಿರುತ್ತದೆ ಎಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಯಾವಾಗಲೂ ಹಾಗೆ ಇರಬೇಕಾಗಿಲ್ಲ. ಇದಕ್ಕೆ 'ದೇವಕನ್ಯೆ' ಎಂಬ ಮೊದಲನೆಯ ಪ್ರಬಂಧ ನಿದರ್ಶನವಾಗಿದೆ. ಇದರಲ್ಲಿ ಮನುಷ್ಯನ ಸ್ವಪ್ನಶೀಲತೆ ಮತ್ತು ವಾಸ್ತವ ಸೃಷ್ಟಿಯಲ್ಲಿ ಆಗುವ ಸ್ವಪ್ನಭಂಗ

ಇದರ ಗಂಭೀರ ವಿವೇಚನೆ ಮಾರ್ಮಿಕವಾಗಿ ಬಂದಿದೆ. ಒಂದು ಬಗೆಯ ಆಶಾವಾದಿಯಾದ ಮನೋಧರ್ಮದಿಂದ ಇದು ಕೊನೆಗೊಳ್ಳುತ್ತದೆ. ಈ ಪ್ರಬಂಧಕಾರನು ಬರೀ ಹಾಸ್ಯಗಾರನಲ್ಲ ನಮ್ಮ ಸಚಿವನಲ್ಲ, ಗಂಭೀರ ಆಲೋಚಕನೆಂಬುದನ್ನು, ಇದರಿಂದ ಅರಿಯುತ್ತೇವೆ... ಗಂಭೀರದ ಅಭಾಸದಿಂದ ಮೈದಾಳುವ ವಕ್ರೋಕ್ತಿವಿಲಾಸಗಳ ಒಡಲಲ್ಲಿ ಗಂಭೀರವು ಅವಿತುಕೊಂಡಿರುವುದೇ ರಾ.ಕು. ಅವರ ಬರವಣಿಗೆಯ ಜೀವಾಳವೆಂದು ನಾನು ತಿಳಿದಿರುತ್ತೇನೆ."[೧೭]

ರಾ.ಕು. ಈ ಸಂಕಲನದಲ್ಲಿ ಯಾಂತ್ರೀಕರಣವನ್ನು ವಿಡಂಬಿಸುವಂಥ 'ಒಂದು ಲೆಕ್ಕ' ಪ್ರಬಂಧದಲ್ಲಿ ಹೇಗೆ ಒಂದು ವ್ಯವಸ್ಥೆಯಲ್ಲಿ ಸಂಪ್ರದಾಯತೆಯಿಂದ ಇಂದು ನಮ್ಮ ಬದುಕು ಒಂದು ರೀತಿಯಲ್ಲಿ ಅಂಕಗಣಿತದಂತೆ ಒಂದಲ್ಲಾ ಒಂದು ರೀತಿಯಲ್ಲಿ ಕೂಡಿಸುವ ಕಳೆಯುವ ಲೆಕ್ಕದಂತೆ ಒಂದು ರೀತಿಯ ಆಧುನಿಕ ವ್ಯವಸ್ಥೆಯನ್ನು ನಮ್ಮ ಜೀವನಕ್ಕೆ ಭಗವಂತನು ನೀಡಿದ್ದಾನೆ. ಹಾಗೆ ಇಂದಿನ ಯಂತ್ರಗಳು ತನ್ನ ಕೆಲಸ ಕಾರ್ಯಕ್ಕೆ ಇಂಧನಗಳು ಇಲ್ಲದೆ ಹೋದರೆ ತಕ್ಷಣವೇ ತಮ್ಮ ಕಾರ್ಯಗಳನ್ನು ಸ್ಥಗಿತಗೊಳಿಸಿ, ವ್ಯವಸ್ಥೆಯನ್ನು ಅಲ್ಲೋಲ ಕಲ್ಲೋಲವಾಗಿಸುವುದೂ ಹಾಗೆ ಇಂದಿನ ನಮ್ಮ ಜೀವನವು ಒಂದು ರೀತಿಯ ಯಂತ್ರವಾಗಿದ್ದು ನಮ್ಮದು ಒಂದು ತಪ್ಪಿತು ಎಂದರೆ ಎಲ್ಲವು ಅಯ್ಯೋಮಯವಾಗುವುದು ಎಂಬರ್ಥದಲ್ಲಿ ಅತ್ಯಂತ ರಸವತ್ತಾಗಿ ಈ 'ಒಂದು ಲೆಕ್ಕ' ಪ್ರಬಂಧದಲ್ಲಿ ರಾ.ಕು. ಚಿಂತಿಸಿದ್ದಾರೆ. ಹಾಗೆ 'ಡೀ ಲಕ್ಸಕೋಟು', 'ಕಷ್ಟವಿಚಾರ', 'ಕೊಡೆಯ ವಿಚಾರ'ಗಳಲ್ಲಿಯು ಈ ರೀತಿಯಾದ ಯಾಂತ್ರೀಕರಣ ಹಾಗೂ ಕಾಲಜ್ಞಾನಿ ಅಂದರೆ ಮುಂದೆ ಆಗುವುದನ್ನು ಈಗಲೇ ಜನಸಾಮಾನ್ಯನಿಗೆ ಅರ್ಥವಾಗುವಂತ ರೀತಿಯಲ್ಲಿ ರಾ.ಕು. ವಿವರಿಸಿದ್ದಾರೆ.

ಇನ್ನೊಂದು ಪ್ರಮುಖ ಅಂಶವನ್ನು ರಾ.ಕು. ಅವರು ಈ ದೇವಕನ್ಯೆ ಸಂಕಲನದಲ್ಲಿ ಹೇಳುತ್ತಾರೆ. 'ಸಾಮಾನ್ಯತಾ ಸ್ತ್ರೀ'ಯನ್ನು ಮತ್ತು 'ನಗೆಯ ಹಿಂದಿರುವ ನೋವನ್ನು' ಕುರಿತು ಯಾವುದೇ ಬೆಳಕಿನ ಹಿಂದೆ ಕತ್ತಲು ಇರುವಂತೆ ಒಂದು ನಗೆಯ ಹಿಂದೆ ನೋವು ಇರುತ್ತೆ. ಆದರೆ ಯಾವ ಆಸೆ, ಆಕಾಂಕ್ಷೆ, ಮನೋಹ್ಲಾದಕರ ವಿಚಾರಗಳನ್ನು ಅದು ಬದಿಗಿರಿಸಿ ಸಮಾಜಕ್ಕೆ ಅಥವಾ ಪ್ರಪಂಚಕ್ಕೆ ಅದು ಒಳಿತನ್ನು ತೋರಪಡಿಸುತ್ತಿರುತ್ತದೆ ಎನ್ನುವುದನ್ನು ರಾ.ಕು. 'ಪದತ್ರಣ' 'ಬದಲಿಛತ್ರಿ' 'ಸಂಭಾಷಣೆ ಶತ್ರುಗಳು', ಪ್ರಬಂಧಗಳಲ್ಲಿ ಚರ್ಚಿಸಿದ್ದಾರೆ. 'ಡೀಲಕ್ಸ್ ಕೋಟು' ಪ್ರಬಂಧದಲ್ಲಿ 'ಡೀಲಕ್ಸ ಸಂಸ್ಥೆ - ಡೀಲಕ್ಷ ಕಚೇರಿ - ಡೀಲಕ್ಷ ಮನುಷ್ಯರು - ಡೀಲಕ್ಷ ಜೀವನ ಶೈಲಿಗಳ ನಯ ವಂಚನೆಯನ್ನು 'ಡೀಲಕ್ಷ ಕೋಟು' ಪ್ರಬಂಧವು ನಯವಾಗಿಯೇ ನಿರಾಕರಿಸುತ್ತದೆ. ವ್ಯಕ್ತಿಯ ಮೂಲವಾದ ಅಥವಾ ವ್ಯಕ್ತಿವಾದಿ-ಚಿಂತನೆಗಳು ರಾ.ಕು.ಅವರ ದೇವಕನ್ಯೆ ಸಂಕಲನದಲ್ಲಿ ಕಂಡುಬರುವುದಿಲ್ಲ. ಇದಕ್ಕೆ 'ಒಳ್ಳೆಯ ನಿರ್ಧಾರಗಳು' ಪ್ರಬಂಧದ ಈ ಸಾಲುಗಳನ್ನು ಗಮನಿಸಿ "ಇನ್ನಷ್ಟು ಚೆನ್ನಾಗಿ ಬದುಕಲು ಸುತ್ತಲಿನ ಜಗತ್ತನ್ನು ಅಂತಃ ಕರಣ ಪೂರ್ವಕವಾಗಿ ಪ್ರೀತಿಸಲು ನಾವು ಬಿಡಿಕಾಳುಗಳಾಗಿರದೆ, ಒಂದು ಹಿರಿಯ 'ಇಡಿ'ಯ ಅಂಶವಾಗಿದ್ದೇವೆಂದು ತಿಳಿಯಲು ನಮ್ಮ ನಿರ್ಧಾರಗಳು ಸಹಾಯಕವಾಗಬೇಕು."[೧೮] ಒಂದು ಮಾತಿನಲ್ಲಿ

ಹೇಳುವುದಾದರೆ ವ್ಯಕ್ತಿ ಮತ್ತು ಸಮಾಜಕ್ಕೆ ಸಂಬಂಧಪಟ್ಟಂತ ಹದಿಗಟ್ಟಿರುವ ಸ್ಥಿತಿಗತಿಗಳ ವಿವೇಚನೆ, ರಾ.ಕು. ಪ್ರಬಂಧಗಳ ತಿರುಳಾಗಿದೆ. ಇದನ್ನು ನಿಸರ್ಗ ಮತ್ತು ಸಂಸ್ಕೃತಿಗಳ ಸಂಘರ್ಷವೆಂದೂ ಕರೆಯಬಹುದು. ಮಾನವ ನಿರ್ಮಿತ ಕಟ್ಟಲೆಗಳನ್ನು ಮೀರುವ, ನಾಗರಿಕತೆಯ ನಿರ್ಬಂಧಗಳಿಂದ ಪಾರಾಗುವ ತುಡಿತ ಮತ್ತು ನಿಸರ್ಗ ಸಹಜವಾಗಿರಲು ಬಯಸುವ ಅಭೀಪ್ಸೆ ರಾ.ಕು. ಪ್ರಬಂಧಗಳ ಮುಖ್ಯ ಕಾಣಿಕೆಯಾಗಿದೆ."[೧೯] ಗಾಳಿಪಟದಂತೆ ಈ ಎರಡನೆ ಪ್ರಬಂಧ ಸಂಕಲನವು ರಾ.ಕು. ಅವರ ಹೆಸರನ್ನು ಲಲಿತ ಪ್ರಬಂಧ ಸಾಹಿತ್ಯದಲ್ಲಿ ಅಮರವಾಗಿ ಉಳಿಸಿದೆ. ಇದರಲ್ಲಿ ವಿಶಿಷ್ಟ ಸಂಸ್ಕೃತ ಪದ ಬಳಕೆ, ಉಪಮೆ ಹಾಸ್ಯಗಳಂತೆ ಹಲವು ಉದಾಹರಣೆಗಳಿಂದ ಇದು ಲಲಿತ ಪ್ರಬಂಧಗಳ ಒಂದು ಉತ್ತಮ ಕೃತಿಗಳಲ್ಲಿ ನಿಲ್ಲುವಂತೆ ಈ ಕೃತಿಯನ್ನು ರಾ.ಕು. ರಚಿಸಿದ್ದಾರೆ. 'ದೇವಕನ್ಯೆ' ಪ್ರಬಂಧ ಸಂಕಲನವು ಬೆಂಗಳೂರ ವಿಶ್ವವಿದ್ಯಾಲಯ ಸೇರಿದಂತೆ ಹಲವು ವಿಶ್ವವಿದ್ಯಾಲಯಗಳ ಪದವಿ ಅಧ್ಯಯನಕ್ಕೆ ಪಠ್ಯವಾಗಿ ಆಯ್ಕೆಗೊಂಡಿರುವುದು ಒಂದು ವಿಶಿಷ್ಟತೆ ಈ ಪ್ರಬಂದದ್ದು.

೩. ಶೇಷ ವಿಶೇಷ : ೧೯೯೯ರಲ್ಲಿ 'ಗಾಳಿಪಟ', 'ದೇವಕನ್ಯೆ' ಪ್ರಬಂಧ ಸಂಕಲನಗಳು ಪ್ರಕಟಗೊಂಡ ಬಳಿಕ ಪತ್ರಿಕೆಗಳಲ್ಲಿ, ಕೈಬರಹಗಳಲ್ಲಿ ಹಾಗೂ ಅಲ್ಲಿ-ಇಲ್ಲಿ ಹಂಚಿಹೋಗಿದ್ದ ರಾ.ಕು ಅವರ ಪ್ರಬಂಧಗಳನ್ನು ಒಂದು ಕಡೆಗೆ ಕೂಡಿಸಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು. ಹಾವೇರಿ ಮತ್ತು ಅಭಿಮಾನಿ ಬಳಗ, ಶಿಷ್ಯ ವೃಂದದವರ ಫಲವಾಗಿ ಇದು ಪ್ರಕಟವಾಯಿತು. ಈ ಸಂಕಲನದಲ್ಲಿ ಒಟ್ಟು ೧೫ ಮೌಲಿಕ ಪ್ರಂಬಂಧಗಳಿದ್ದು ಇಲ್ಲಿಯೂ ರಾ.ಕು. ಅವರು ವಿವಿಧ ಸಾಮಾಜಿಕ, ಕೌಟುಂಬಿಕ ವ್ಯಕ್ತಿ-ವ್ಯಕ್ತಿಗಳ ನಡುವಿನ ಆಟ, ದುಷ್ಟಟಗಳಿಂದ ಮುಕ್ತಿ, ಹೊಸ ಬಗೆಯ ಆವಿಷ್ಕಾರಗಳ ಬಗೆಗೆ ಧಾರ್ಮಿಕ ಮೂಢನಂಬಿಕೆಗಳ ಬಗ್ಗೆ ವಿಡಂಬನೆಗಳನ್ನು ಕಾಣಬಹುದು. ಈ ಸಂಕಲನದ ವೈಶಿಷ್ಟ್ಯತೆಯನ್ನು ಹೀಗೆ ಕ್ರೋಢಿಕರಿಸಬಹುದು.

I. ಸಾಮಾಜಿಕ ವಿಷಯವನ್ನು ವಿಡಂಬಿಸುವ ಪ್ರಬಂಧಗಳು

   'ದೃಷ್ಟಿ ದೋಷ' ಮಿತವ್ಯಯ ಪ್ರಯೋಗ, 'ಸಿಗರೇಟು ಬಿಡುವ ಸಾಧಕ' 'ಹೆಂಗಸಾಗಿದ್ದರೆ' ಪ್ರಬಂಧಗಳಲ್ಲಿ ಕಂಡುಬರುತ್ತದೆ.

II. ವೈಯಕ್ತಿಕ ನೆಲೆಯಲ್ಲಿ ಕಂಡುಬರುವ ಪ್ರಬಂಧಗಳು

   'ಸಿಗರೇಟು ಬಿಡುವ ಸಾಧಕ', 'ಚದುರಂಗವನ್ನು ಕುರಿತು' 'ದಂತಪ್ರಶ್ನೆ' 'ವಿಶೇಷ ಸಂಚಿಕೆಗಳು'

III. ಇನ್ನಿತರ ಅಂಶಗಳನ್ನು ವಿಡಂಬಿಸುವ ಪ್ರಬಂಧಗಳು

   'ಭವಿಷ್ಯವಚನ', 'ಸೊಳ್ಳೆಯ ಸರಸ' 'ಧಾಟಿಯ ಮೇಲೆ ದಾಳಿ' 'ಗಂಡಸು ಹಾಗೂ ಅಡುಗೆ'

IV. ಆಧುನಿಕತೆಯ ಸ್ಪಷ್ಟತೆಯನ್ನು ಬಿಂಬಿಸುವ ಪ್ರಬಂಧಗಳು

'ಕಾಂಪೌಂಡ್ ಬಸ್ಸು', 'ಪಾಟಣಾ ಯೋಜನೆ' 'ಚದುರಂಗವನ್ನು ಕುರಿತು'

ಈ ಸಂಕಲನದಲ್ಲಿ ಬಹುಮುಖ್ಯವಾಗಿ ವೈಯಕ್ತಿಕ ನೆಲೆಯಲ್ಲಿ ಕಂಡುಬರುವಂಥ ಪ್ರಬಂಧಗಳಾದ 'ಸಿರಗೇಟು ಬಿಡುವ ಸಾಧಕ, 'ಚದುರಂಗವನ್ನು ಕುರಿತು ಹಲವು ಚಟಾದಿಗಳು ಹೇಗೆ ಬೆನ್ನು ಹತ್ತಿರುತ್ತವೆ. ಅವುಗಳನ್ನು ಬಿಡುವ ಉಪಾಯಗಳನ್ನು ಕುರಿತು ಹೇಳುತ್ತಾ ಸಿಗರೇಟು ಬಿಡುವುದಕ್ಕೆ "ಸೇದುವುದನ್ನು ಬಿಡಿಸುವ ಯಾವ ಒಂದು ಪ್ರಯೋಗವು ಪರಿಣಾಮಕಾರಿಯಾಗಿಲ್ಲ. ವೈದ್ಯಕೀಯ ಪ್ರಯೋಗಗಳಂತೂ ಸಂಪೂರ್ಣವಾಗಿ ನಿರಾಶಾದಾಯಕವೆನಿಸಿವೆ. ಸಿಗರೇಟಿನ ಚಟ ಸೇದಿ ಸೇದಿ ಪ್ರರೂಢವಾಗಿದ್ದು, ಅದು ಮಿತಿಮೀರಿದ ಮಧ್ಯಪಾನ ಅಥವಾ ಕೂಳಬಕ್ಕತನದ ಚಟಗಳಷ್ಟೇ ಬಿಡಲಾಗದ ಚಟವಾಗಿದೆ.[೨೦] ಇಲ್ಲಿ ಸಿಗರೇಟು ಬಿಡುವುದಕ್ಕೆ ಯಾವುದೇ ರೀತಿಯ ಬಾಹ್ಯವಾದ ಒತ್ತಡವನ್ನು ಹೇರಿದರು ಅದು ಸಾಧ್ಯವಿಲ್ಲ. ಸೇದುವಾತನ ಆಂತರಿಕಕತೆಯಿಂದ ಚಿಂತನೆಯನ್ನು ಮಾಡಿದಾಗ ಮಾತ್ರ ಇದನ್ನು ಬಿಡಲು ಸಾಧ್ಯ ಎಂದು ಓದುಗನನ್ನು ಚಿಂತನಾತ್ಮಕತೆಯ ಕಡೆಗೆ ಕರೆದೊಯ್ಯುವಲ್ಲಿ ರಾ.ಕು ಯಶಸ್ವಿಯಾಗಿದ್ದಾರೆ. ಹಾಗೆ ಚದುರಂಗವನ್ನು ಕುರಿತು ಪ್ರಸ್ತಾಪಿಸುತ್ತಾ ಇದು ವ್ಯಕ್ತಿಗತವಾದ ಆಟವಾಗಿದ್ದು ಇದನ್ನು ಕೇವಲ ಓದಿದರೆ ಇದು ಅರ್ಥವಾಗದು ಆಟಬಲ್ಲದೆ ಇರುವವನಿಗೆ ಈ ಪ್ರಬಂಧ ಎಂದೆಂದಿಗೂ ಅರ್ಥವಾಗದು ಈ ಪ್ರಬಂಧವನ್ನು ಅರ್ಥೈಸಿಕೊಳ್ಳಬೇಕಾದರೆ ಈ ಆಟವನ್ನು ಬಲ್ಲವನಿಗೆ ಮಾತ್ರ ಈ ಪ್ರಬಂಧವು ಅರ್ಥವಾಗಲು ಸಾಧ್ಯ. ಹೀಗೆ ರಾ.ಕು ಈ ಸಂಕಲನದಲ್ಲಿ ಬಹು ಅದ್ಭುತವಾದ ರೀತಿಯಲ್ಲಿ ಓದುಗನನ್ನು ಹಲವು ಇನ್ನಿತರ ವಿಷಯ ವಸ್ತುಗಳ ಆಯಾಮಗಳಲ್ಲಿ ಚಿಂತನಾತ್ಮಕವಾಗಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಈ ಪ್ರಬಂಧದಲ್ಲಿ 'ಸೊಳ್ಳೆಯ ಸರಸ'ದಂತ ಅದ್ಭುತವಾದ ಹಾಸ್ಯಮವಾದ ಪ್ರಬಂಧವು ಈ ಸಂಕಲನದಲ್ಲಿ ಮೂಡಿ ಬಂದಿದೆ. 'ಸೊಳ್ಳೆಯೊಡನೆ ಲೇಖಕಕರು ಆಟವಾಡುವುದನ್ನು ಹಾಗೂ ಅದು ಬುರ್‍ರನೆ ಬಂದು ಕಚ್ಚಿ ಹೋಗುವುದನ್ನು ರಾ.ಕು. ಅತ್ಯಂತ ಲಲಿತ ಹಾಸ್ಯದ ಶೈಲಿಯಲ್ಲಿ ಈ ಪ್ರಬಂಧವನ್ನು ರಚಿಸಿದ್ದಾರೆ.

ಈ ಮೂರು ಸಂಕಲನಗಳನ್ನು ನಾನು ಅಧ್ಯಯನ ಮಾಡಿದಾಗ, ರಾ.ಕು ಅವರ ಪ್ರಬಂಧಗಳಲ್ಲಿ ರಸಿಕ ವ್ಯಕ್ತಿತ್ವದ ವಿಕಾಸವಿದೆ. ಗಂಭೀರ ಲಲಿತ ಪ್ರಬಂಧದ ಅರಿವಿದ್ದು ಪಾಂಡಿತ್ಯದಾಯಕ ಭಾಷೆಯ ಪುನುಗಿದೆ. ಬದುಕಿನ ಸರಸ ಸಲ್ಲಾಪಗಳ ವಿವಿಧಕಲಾಪಗಳ ಸೊಬಗಿದೆ. ಬಯಸಿದವರಿಗೆ ವಿವೇಕವಿದೆ. ಅವಿವೇಕ ವಿಡಂಬನೆಯಿದೆ. ಇಂಗ್ಲೀಷ್ ಪ್ರಬಂಧಗಳ ಆಳ ಹಾಗೂ ನಿಖರವಾದ ಅಧ್ಯಯನದ ಫಲ ಇವರ ಅಭಿವ್ಯಕ್ತಿಯ ವಿಧಾನದಲ್ಲಿ ಕಂಡುಬರುತ್ತದೆ. ಆರೋಗ್ಯಕರ ಜೀವನದೃಷ್ಟಿ, ಸುಸಂಸ್ಕೃತ ಮನೋಭಾವ ಇತರ ಪ್ರಬಂಧಗಳನ್ನು ತುಂಬಿಕೊಂಡಿದೆ. ರಾ.ಕು. ಕನ್ನಡದಲ್ಲಿ ವಿಮರ್ಶಕರನ್ನು ಗೆದ್ದುಕೊಂಡ ಪ್ರಬಂಧಕಾರರು ಅವರು ಪ್ರಕಟಿಸಿದ 'ಗಾಳಿಪಟ', 'ದೇವಕನ್ಯೆ' ಮತ್ತು 'ಶೇಷವಿಶೇಷ' ಈ ಮೂರು ಸಂಕಲನಗಳು ಹೆಚ್ಚು ಜನಪ್ರಿಯವಾದವು. ಆದ್ದರಿಂದಲೇ ಇವರನ್ನು ಹುಡುಕಿಕೊಂಡು

ಹಲವು ಕನ್ನಡಪರ ಪ್ರಶಸ್ತಿಗಳು ಬಂದವು. ಅವುಗಳು ಇಂತಿವೆ. ‘೧೯೯೯’ರಲ್ಲಿ ‘ಶೇಷ ವಿಶೇಷ’ ಪ್ರಬಂಧ ಸಂಕಲನಕ್ಕೆ ಆ ಸಾಲಿನ ‘ಕನ್ನಡ ಶ್ರೇಷ್ಠ ಲಲಿತ ಪ್ರಬಂಧ’ ಪುರಸ್ಕಾರವು ದೊರಕಿತು. ಹಾಗೆಯೇ “೨೦೦೨ರಲ್ಲಿ ‘ಗಾಳಿಪಟ’ ಸಂಕಲನಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಪುರಸ್ಕಾರ”[೨೧] ಇನ್ನು ಸಿಂದಗಿಯ ಅಂಬಿಕಾತನಯದತ್ತ ವೇದಿಕೆಯವರು ಕೊಡ ಮಾಡುವ ೧೯೯೯ರ ಸಾಲಿನ ಬೇಂದ್ರೆ ಸ್ಮಾರಕ ಸಾಹಿತ್ಯ ಪುರಸ್ಕಾರವು ಇವರ ‘ಶೇಷ ವಿಶೇಷ’ ಕೃತಿಗೆ ದೊರಕಿತು. ಇವುಗಳನ್ನೆಲ್ಲ ಗಮನಿಸಿ ಹೇಳುವುದಾದರೆ, ರಾ.ಕು. ಅವರು ಲಲಿತ ಪ್ರಬಂಧವನ್ನು ರಚಿಸದೆ ಹೋಗಿದ್ದರೆ, ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಎಷ್ಟೊಂದು ಬರಡಾಗಿರುತ್ತಿತ್ತು ಎನ್ನುವುದು ನಮಗೆ ಗೋಚರವಾಗುತ್ತದೆ. ಪ್ರಬಂಧ ಸಾಹಿತ್ಯ ಪ್ರಕಾರದ ಎಲ್ಲ ಸಾಧ್ಯತೆಗಳನ್ನು ಅವರು ಸೂರೆಗೊಂಡಿದ್ದು, ಅವರ ಈ ಮೂರು ಪ್ರಬಂಧಗಳಲ್ಲಿ ಉಪಯೋಗಿಸುವ ವ್ಯಂಗೋಕ್ತಿ, ಕಟೋಕ್ತಿ, ತರ್ಕ, ಜಿಜ್ಞಾಸೆ, ಹಳೆಗನ್ನಡ ಕಾವ್ಯದ ಸಾಲುಗಳು, ಉಪಮೆಗಳು, ಸೂಕ್ತಿಗಳು ಹಾಗೂ ವಿಚಾರಗಳು ಇವುಗಳ ಜೊತೆ ಹಳೆಯ ಹೊಸ ಕವಿವಾಣಿ, ಜನರ ಪ್ರಚಲಿತ ರೂಢಭಾವಗಳು, ಸಾಮಾನ್ಯ ವಿಚಾರ ಸರಣಿ ಇವೆಲ್ಲವನ್ನೂ ಒಂದು ವಿಚಿತ್ರ ಮಿಶ್ರಣವನ್ನು ವಿರುದ್ಧ ದಿಕ್ಕಿನಲ್ಲಿ ಬಳಸುತ್ತಾರೆ. ವಿಮರ್ಶೆ, ಅನುಕಂಪ, ಅಸಡ್ಡೆ, ಅತ್ಯುಕ್ತಿ ಎಲ್ಲ ಸ್ತರಗಳಲ್ಲಿ ವಿಚಾರದ ಕೊಂಡಿಯನ್ನೂರಿ ವಿಷಯ ಪ್ರತಿಪಾದನೆ ಮಾಡುತ್ತಾರೆ. ಇಂಥದೊಂದು ಸಂಕೀರ್ಣ ಬರಹ ಶೈಲಿಯೂ ಸೃಷ್ಟಿ ರಾ.ಕು. ಅವರ ಪ್ರಬಂಧಗಳ ಮಹತ್ವವನ್ನು ಹೆಚ್ಚಿಸಿತು. “ಒಮ್ಮೊಮ್ಮೆ ಸಂಯಮದ ಕಟ್ಟೆಯನ್ನು ಮೀರುವ ವಿಸ್ತಾರ ಪ್ರಬಂಧಗಳಲ್ಲಿ ತಾವು ಎತ್ತುವ ಸಮಸ್ಯೆಗಳಿಗೆ ತಮ್ಮದೇ ಸಲಹೆಗಳನ್ನು ಪಟ್ಟಿ ಮಾಡಿಕೊಡುವ ಅವಾಹಕ-ವಿಸರ್ಜಕ ತಂತ್ರಗಳ ಬಳಕೆ ಈ ಎರಡು ಲೋಪಗಳನ್ನು ಮೀರಿಯೂ ಇವರ ಲಲಿತ ಪ್ರಬಂಧಗಳು ಮನಸೆಳೆಯುತ್ತವೆ.” ಗಟ್ಟಿಯಾದ ವ್ಯವಹಾರ ಜ್ಞಾನ, ವ್ಯಂಗ್ಯ ಪರತೆ, ವಚನ ಕಾವ್ಯಮಯತೆ, ಆಳವಾದ ಭಾಷಾಜ್ಞಾನ, ವಿರೋಧಗಳನ್ನು ಅರಗಿಸಿಕೊಳ್ಳುವ ಪ್ರವೃತ್ತಿ, ಇವೆಲ್ಲಕ್ಕಿಂತ ಹೆಚ್ಚಾಗಿ ಪುಟಿದೇಳುವ ಉತ್ಸಾಹ ಈ ಗುಣಗಳಿಂದ ತುಂಬಿಕೊಂಡ ಇವರ ಲಲಿತ ಪ್ರಬಂಧಗಳು, ವಿಮರ್ಶಕರು ಹೇಳುವಂತೆ ‘ರಾ.ಕು. ಅವರ ಶೈಲಿಯು ಟಂಕಶಾಲೆಯಾಗಿದೆ. ಆದ್ದರಿಂದ ಇವರ ಪ್ರಬಂಧಗಳು ಕನ್ನಡ ಲಲಿತ ಪ್ರಬಂಧ ವಲಯಕ್ಕೆ ಒಂದು ಹೊಸಗಾಳಿಯನ್ನು ಚಮರಿಸಿದೆ’ ಎಂಬ ಈ ಹೇಳಿಕೆ ರಾ.ಕು. ಅವರಿಗೆ ಅನ್ವರ್ಥಕವಾಗಿದೆ.

ಅಡಿಟಿಪ್ಪಣಿಗಳು

೧. ‘ಶತಮಾನದ ಲಲಿತ ಪ್ರಬಂಧ’ ಪ್ರಸ್ತಾವನೆ ಸಂಪಾದಕ ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳುರು, ಪು.xvi

೨. ‘ಆಂಗ್ಲ ಪ್ರಬಂಧಗಳು ಇತಿಹಾಸದ ನೋಟ’, ಸದಾಶಿವ ಒಡೆಯರ ಪ್ರಬಂಧ ಪ್ರಪಂಚ, ಸಂಪಾದಕರು : ಎಚ್.ವಿ.ನಾಗೇಶ, ಪು.೨೧

೩. ‘ಶತಮಾನದ ಲಲಿತ ಪ್ರಬಂಧ’ ಪ್ರಸ್ತಾವನೆ ಸಂಪಾದಕ ಗುರುಲಿಂಗ ಕಾಪಾಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.xxi

೪. ಅದೇ, ಪು.xxii

೫. 'ಕನ್ನಡ ಪ್ರಬಂಧದ ಮೊದಲ ಹೆಜ್ಜೆಗಳು' 'ಹೇಮಾ ಪಟ್ಟಣಶೆಟ್ಟಿ', 'ಪ್ರಬಂಧ ಪ್ರಪಂಚ', ಸಂಪಾದಕರು: ಎಚ್.ವಿ.ನಾಗೇಶ್, ಪು.೭೯

೬. 'ಪ್ರಬಂಧ ಸಾಹಿತ್ಯ' ಮಳಲಿ ವಸಂತ ಕುಮಾರ, ಪ್ರಸಾರಂಗ, ಮೈಸೂರ ವಿಶ್ವವಿದ್ಯಾಲಯ, ಪು.೪೨

೭. 'ಕನ್ನಡ ಪ್ರಬಂಧದ ಮೊದಲ ಹೆಜ್ಜೆಗಳು', 'ಹೇಮಾ ಪಟ್ಟಣಶೆಟ್ಟಿ', ಪ್ರಬಂಧ ಪ್ರಪಂಚ : ಸಂಪಾದಕರು ಎಚ್.ವಿ.ನಾಗೇಶ್, ಪು.೮೧

೮. 'ಶತಮಾನದ ಲಲಿತ ಪ್ರಬಂಧ' ಪ್ರಸ್ತಾವನೆ ಸಂಪಾದಕ : ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು, ಪು.xxiii

೯. ಪ್ರಬಂಧ ಸಾಹಿತ್ಯ : ಮಳಲಿ ವಸಂತಕುಮಾರ, ಪ್ರಸಾರಾಂಗ ಮೈಸೂರ ವಿಶ್ವವಿದ್ಯಾಲಯ, ಪು.೬೩

೧೦. 'ಶತಮಾನದ ಲಲಿತ ಪ್ರಬಂಧ' ಪ್ರಸ್ತಾವನೆ ಸಂಪಾದಕ : ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.xxx

೧೧. ಪ್ರಬಂಧ ೧೯೮೮, ಸಂಪಾದಕ : ಡಾ.ಪುರುಷೋತ್ತಮ, ಬಿಳಿಮಲೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಪು.೦೪

೧೨. 'ಗಾಳಿಪಟ' ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, 'ಗಾಳಿಪಟ ಪ್ರಬಂಧ', ಪು.೧

೧೩. 'ದೇವಕನ್ಯೆ' ಲೋಟಸ್ ಪ್ರಿಂಟರ್ಸ್ ಬೆಂಗಳೂರು, ರಾ.ಕು., ಮುನ್ನುಡಿ ರಂ.ಶ್ರೀ. ಮುಗಳಿ, ಪು.IV

೧೪. 'ಗಾಳಿಪಟ' ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, ಮುನ್ನುಡಿ, ದ.ರಾ.ಬೇದ್ರೆ, ಪು.xi

೧೫. 'ಗಾಳಿಪಟ' ರಾ.ಕು., ಮನೋಹರ ಗ್ರಂಥಮಾಲೆ, ಧಾರವಾಡ ಗಾಳಿಪಟ, ಪು.೧

೧೬. ಗಾಳಿಪಟ : ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, 'ಕಿರುಕುಳರಜೆ', ಪು.೩೭

೧೭. 'ದೇವಕನ್ಯೆ', ಲೋಟಸ್ ಪ್ರಿಂಟರ್ಸ್ ಬೆಂಗಳೂರು, ರಾ.ಕು., ಮುನ್ನುಡಿ, ರಂ.ಶ್ರೀ.ಮುಗಳಿ, ಪು.IV

೧೮. ರಾ.ಕು.ಪ್ರಬಂಧಗಳು : ವಿ.ಚಂದ್ರಶೇಖರ ನಂಗಲಿ, ಗೌರವ ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಸಾಧನೆ, ಸಂಪಾದಕರು : ಡಾ. ಗುರುಲಿಂಗ ಕಾಪಸೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೪೮

೧೯. ಅದೇ, ಪು.೪೯

೨೦. 'ಶೇಷ ವಿಶೇಷ' ರಾ.ಕು. 'ಸಿಗರೇಟು ಬಿಡುವ ಸಾಧಕ', ಪು.೩೭

೨೧. 'ಕನ್ನಡ ಸಾಹಿತ್ಯ ಕೋಶ' : ಸಂಪಾದಕ 'ರಾಜಪ್ಪದಳವಾಯಿ', ದಳವಾಯಿ ಪ್ರಕಾಶನ, ಬೆಂಗಳೂರು, ಪು.೬೭೨

ಅಧ್ಯಾಯ ೪

ರಾ.ಕು. ಅವರ ಲಲಿತ ಪ್ರಬಂಧಗಳಲ್ಲಿ ಸಾಮಾಜಿಕ ಆಯಾಮಗಳು

೪

ರಾ.ಕು. ಅವರ ಲಲಿತ ಪ್ರಬಂಧಗಳಲ್ಲಿ ಸಾಮಾಜಿಕ ಆಯಾಮಗಳು

ಲಲಿತ ಪ್ರಬಂಧ ಸಾಹಿತ್ಯದಲ್ಲಿ ಕನ್ನಡಿಗರ ಬದುಕಿನ ಸಾಂಸ್ಕೃತಿಕ ವೈಶಿಷ್ಟ್ಯಗಳು ಅನಾವರಣಗೊಂಡಿವೆ. ಅವುಗಳ ರಚನೆಯ ವಿನ್ಯಾಸವನ್ನು ಗಮನಿಸಿದಾಗ, ಅವುಗಳನ್ನು ಎರಡು ರೀತಿಯಾಗಿ ವರ್ಗೀಕರಿಸಬಹುದು.

೧. ವರ್ಣನಾತ್ಮಕ ಪ್ರಬಂಧಗಳು (ಇರುವುದನ್ನು ಇರುವಂತೆ ಹೇಳುವುದು)

೨. ದರ್ಶನಾತ್ಮಕ ಪ್ರಬಂಧಗಳು (ಹೇಳುವುದನ್ನು ಲಕ್ಷಣಾರ್ಥವಾಗಿ ಸಾಮಾಜಿಕ ಆಯಾಮವನ್ನು ಗಮನದಲ್ಲಿಟ್ಟುಕೊಂಡು ಹೇಳುವುದು)

ರಾ.ಕು. ಅವರ ಪ್ರಬಂಧಗಳು ದರ್ಶನಾತ್ಮಕ ಪ್ರಬಂಧಗಳ ಕಕ್ಷೆಯಲ್ಲಿ ಸಮಾವೇಶಗೊಳ್ಳುತ್ತವೆ. ಕನ್ನಡದ ಮಹತ್ವದ ಲಲಿತ ಪ್ರಬಂಧಕಾರರಾದ ರಾ.ಕು. ಅವರ ಪ್ರಬಂಧಗಳು ಕನ್ನಡದ ಆಡು ರಚನೆ ಸಾಹಿತ್ಯವನ್ನು ಪ್ರವೇಶಿಸುವಾಗಲೇ ರಚನೆಗೊಂಡಿರುವುದರಿಂದ ರಾ.ಕು. ಅವರ ಪ್ರಬಂಧಗಳು ಅದಕ್ಕೆ ಮಾದರಿ ಎನ್ನುವಷ್ಟರ ಮಟ್ಟಿಗೆ ಉನ್ನತ ಗುಣಮಟ್ಟವನ್ನು ಕಾಯ್ದುಕೊಂಡಿರುವುದು, ಗಮನಾರ್ಹ ಸಂಗತಿ. ಅವರ ಲಲಿತ ಪ್ರಬಂಧಗಳು ಪ್ರಬಂಧಗಳ ಬೆಳವಣಿಗೆಯ ಚರಿತ್ರೆಯಲ್ಲಿ ದಾಖಲೆಗಳಾಗಿ ಉಳಿಯುತ್ತವೆ. ಮಾತ್ರವಲ್ಲದೆ, ಕನ್ನಡ ಜನತೆಯಲ್ಲಿ ಓದುವ ಹವ್ಯಾಸವನ್ನು ಉಂಟುಮಾಡುವಂತಹ ಸಾಹಿತ್ಯಕ ಆಂದೋಲನದಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಇನ್ನೂ ಮುಖ್ಯವಾದುದು. ರಾ.ಕು. ಅವರ ''ಕಿರುಕುಳ ರಜೆ', 'ಟೊಪ್ಪಿಗೆ', ಕುರುಡು ಕಾಂಚಾಣ, ನಿದ್ರಾಭ್ಯಾಸ, ಮಡಿವಾಳ ಮಹರಾಯ ಮುಂತಾದ ಲಲಿತ ಪ್ರಬಂಧಗಳು ಓದುಗರನ್ನು ಸೃಷ್ಟಿಮಾಡಿವೆ. ಎಂದರೆ ಅವರ ಸಾಮಾಜಿಕ ಹಿರಿಮೆ ಅರ್ಥವಾಗುತ್ತದೆ.

ಓದುಗರ ನಿರಂತರ ಕುತೂಹಲವನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಲೆಗಾರಿಕೆ ರಾ.ಕು. ಅವರಿಗೆ ಸಹಜವಾಗಿ ಸಿದ್ಧಿಸಿದೆ. ಪ್ರಬಂಧದಾದ್ಯಂತ ಸಾಮಾಜಿಕ ವಿಡಂಬನೆ ಮತ್ತು ಹಾಸ್ಯ ಸಹಜವಾಗಿ ಚಲಿಸುವುದು ಅವರ ಇನ್ನೊಂದು ವಿಶೇಷ. ಜಾನಪದ ಸತ್ವ ಅವರ ಪ್ರಬಂಧಗಳ ಅಂತಃಸ್ಸತ್ವವಾಗಿ ಅವು ಕನ್ನಡದ ಇತರ ಲಲಿತ ಪ್ರಬಂಧಕಾರರಿಗಿಂತ ರಾ.ಕು. ಅವರನ್ನು ಭಿನ್ನವಾಗಿವೆ. ಅದಕ್ಕೆ ಕಾರಣ ಬದುಕಿನ ಹಲವು ಮಗ್ಗುಲುಗಳನ್ನು ಸಾಮಾಜಿಕ ಆಯಾಮಗಳನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸುವುದೇ ಆಗಿದೆ.

"ಆಯುಷ್ಕರ್ಮ, ಉಗಿಬಂಡೆಯ ಓದು, ಅಕ್ಷುದ್ರ ಮುಂತಾದ ಪ್ರಬಂಧಗಳನ್ನು ನಿದರ್ಶನಕ್ಕಾಗಿ ಕೊಡಬಹುದು.

ಅವರ ಪ್ರಬಂಧಸಂಕಲನಗಳಲ್ಲಿ ಸಾಮಾಜಿಕ ಪ್ರಸಂಗಗಳನ್ನು ವಿಡಂಬಿಸುವ ಹರಟೆಗಳೂ ಇವೆ. ಅವರ 'ಗಾಳಿಪಟ' 'ದೇವಕನ್ಯೆ' ತುಂಬ ಪ್ರಸಿದ್ಧವಾದ, ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದ ಪ್ರಬಂಧ ಸಂಕಲನಗಳು. ಅನಂತರ ಬಂದ ಅವರ 'ಶೇಷ ವಿಶೇಷ' ನಿಸ್ಸಂದೇಹವಾಗಿ ಅವರ ಚಿಂತನೆಯ ಪಕ್ವತೆಯನ್ನು ಸೂಚಿಸುತ್ತದೆ. ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ಸಾಹಿತ್ಯದ ಅವರ ಗಾಢ ವ್ಯಾಸಂಗ, ಜೀವನವನ್ನು ಸೂಕ್ಷ್ಮವಾಗಿ ನೋಡುವ ದೃಷ್ಟಿ ಭಾಷೆಯ ಮೇಲಿನ ಪ್ರಭುತ್ವ ಈ ಗುಣಗಳಿಂದಾಗಿ ಹಾಗೂ ವಿನೋದ, ವಿಡಂಬನೆಗಳನ್ನು ಸೂಕ್ತವಾಗಿ ಬಳಸುವ ಕೌಶಲ್ಯದಿಂದಾಗಿ ರಾ.ಕು. ಅವರ ಪ್ರಬಂಧಗಳು ಕನ್ನಡ ಪ್ರಬಂಧ ಸಾಹಿತ್ಯದಲ್ಲಿ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತವೆ. ದ.ರಾ.ಬೇಂದ್ರೆಯವರು ರಾ.ಕು ಅವರ ವಾಣಿ ವಿಲಾಸದ ಬೆಡಗು, ಬಿನ್ನಾಣಗಳನ್ನು ಮುಕ್ತ ಮನಸ್ಸಿನಿಂದ ಪ್ರಶಂಸಿದ್ದಾರೆ. ರಂ.ಶ್ರೀ ಮುಗಳಿಯವರು ಅವರ ವಕ್ರೋಕ್ತಿ ವಿಲಾಸದ ಒಡಲಲ್ಲಿ ಗಾಂಭೀರ್ಯವಿರುವುದನ್ನು ಗುರುತಿಸಿದ್ದಾರೆ. "ಗಾಳಿಪಟವೆಂಬುದು ಭೂಮಿಯ ಬಂಧನವನ್ನು ಬಿಡಿಸಿಕೊಂಡು ಜೀವಂತವಾಗಿ ಅನಂತಕ್ಕೆ ಏರುವ ಕನಸನ್ನು ಅಭಿವ್ಯಕ್ತಪಡಿಸುತ್ತದೆ" ಎನ್ನುತ್ತಾರೆ ರಾ.ಕು. ಅವರು. ಅವರ ಲಲಿತ ಪ್ರಬಂಧಗಳೂ ಕೂಡ ಅನಂತಕ್ಕೆ ಏರುವ ಕನಸನ್ನು ಕಾಣುತ್ತವೆ. ತರ್ಕಪೂರ್ಣವಾದ, ಜಿಜ್ಞಾಸೆ ಮೂಡಿಸುವ, ವೈಚಾರಿಕ ದೃಷ್ಟಿಯುಳ್ಳ ಹೀಗಿದ್ದು ಸರಸವಾದ, ಧ್ವನಿಪೂರ್ಣ ವಿಡಂಬನೆ ಬಳಸಿಕೊಂಡ ರಾ.ಕು. ಅವರ ಪ್ರಬಂಧಗಳು ಅಧ್ಯಯನಪೂರ್ಣವಾಗಿವೆ.

ಸಮುದಾಯವು ಸದಾಕಾಲ ಪರಿವರ್ತನೆಯಾಗುತ್ತದೆ. ಅವಿಭಕ್ತ ಕುಟುಂಬಗಳು ಇಂದು ಹಂತಹಂತವಾಗಿ ಮಾಯವಾಗುತ್ತಿವೆ. ಸಮಾಜವು ಕುಟುಂಬ ಕೇಂದ್ರಬಿಂದುವಾಗಿ ರೂಪುಗೊಂಡಿದೆ. ಸಮಾಜದಲ್ಲಿನ ಪರಿವರ್ತನೆಗಳು ಕುಟುಂಬದ ಮೇಲೆ, ವ್ಯಕ್ತಿಗಳ ಮೇಲೆ ನಿಶ್ಚಿತವಾಗಿ ಪರಿಣಾಮವನ್ನು ಬೀರುತ್ತವೆ. ನಂಬಿಕೆಗಳು ಸಂಪ್ರದಾಯಗಳು ಅಷ್ಟು ಸುಲಭವಾಗಿ ಬದಲಾಗುವುದಿಲ್ಲ. ಅಂತಹ ಸಾಮಾಜಿಕ ಸಂದರ್ಭದಲ್ಲಿ ಒಂದಿಲ್ಲೊಂದು ಬಗೆಯ ದರ್ಶನಗಳು ಉಂಟಾಗುತ್ತವೆ.

ರಾ.ಕು. ಅವರ ಲಲಿತ ಪ್ರಬಂಧಗಳು ಸಾಮಾಜಿಕ ಈ ಬದುಕನ್ನು ಅರ್ಥಪೂರ್ಣವಾಗಿ ಸೆರೆಹಿಡಿದಿವೆ. ಆಧುನಿಕ ಸಮಾಜ ಮತ್ತು ಕೌಟುಂಬಿಕ ಜೀವನದ ಬದಲಾವಣೆಗಳು ಅವರ ಪ್ರಬಂಧದಲ್ಲಿ ಸಮರ್ಥವಾಗಿ ಅಭಿವ್ಯಕ್ತಿಗೊಂಡಿವೆ. 'ಗಾಳಿಪಟ' ಪ್ರಬಂಧದಲ್ಲಿ ಬರುವ ಕೋತಿಪಟ, ಬುಗಲಿ, ಕಿಳ್ಳಿಕೇತ, ಮಕಾಳೆಪಟ ಮುಂತಾದ ಬಗಬಗೆಯ ಗಾಳಿಪಟಗಳ ವರ್ಣನೆಯಿಂದ ಪ್ರಾರಂಭವಾಗುವ ಈ ಪ್ರಬಂಧವು ಕಣ್ಣಿಗೆ ಕಾಣದ 'ಮನದ ಗಾಳಿಪಟ'ವೆಂಬ ಕಲ್ಪನೆಯಗುಂಟ ಸಾಗುತ್ತದೆ. "ಅಂತರಿಕ್ಷ ಮಂಟಪಕ್ಕೆ ನಿನ್ನ ಹೃದಯ ಕಾವ್ಯ ಚಿತ್ರವನ್ನು ಪಟದೊಡನೆ ಹಾರಬಿಡು, ಅನಂತವಾದ ಆಕಾಶದಲ್ಲಿ ನಿನ್ನ ಅಂತರಂಗವನ್ನು ಈಸಗೊಡು"[೧] ಗಾಳಿಪಟದ ಸೂತ್ರ ಹಿಡಿದು ರಾ.ಕು. ವ್ಯಕ್ತಪಡಿಸಿರುವ ಮುನ್ನೋಟ ಅಥವಾ ಮುಂಗಾಣ್ಕೆ

ಒಂದು ಸಹಜ ಸಿದ್ಧಿಯಾಗಿದೆ. ನಿಯಂತ್ರಣವಿಲ್ಲದೆ ಬೆಳೆಯುತ್ತಿರುವ ನಗರ ಮತ್ತು ಗ್ರಾಮಗಳ ಸಂಘರ್ಷದ ಚಿತ್ರವೊಂದು ಇಲ್ಲಿದೆ : "ನಾವೆಷ್ಟು ಪಟ ಏರಿಸುತ್ತಿದ್ದೆವು! ನಮ್ಮ ಮನಸ್ಸು ಮುಕ್ತವಾಗಿತ್ತು; ಆಕಾಶ ಅಬಾಧಿತವಾಗಿತ್ತು... ಏರಿದ ಪಟಗಳನ್ನು ಹಿಡಿದುಕೊಂಡು ನಾವು ಆಗಾಗ ಮನೆಯವರೆಗೆ ತಂದಲ ಬಾಗಿಲ ಚಿಲಕಕ್ಕೊ ಕಿಟಕಿಯ ಸರಳಿಗೊ ಕಟ್ಟುತ್ತಿದ್ದೆವು. ಈಗಿನ ಮಕ್ಕಳಿಗೆ ಆ ಸುಖ ಸರ್ವತ್ರ ಸಾಧ್ಯವಿಲ್ಲ. ಏಕೆಂದರೆ ವಿದ್ಯುತ್ತಿನ ವ್ಯಾಮೋಹಕ್ಕೆ ವಿಯಕ್ತಳವನ್ನು ಮಾರಿಕೊಂಡು, ಓಣಿ ಓಣಿಯ ಅಂತರಿಕ್ಷಗಳನ್ನು ತಂತಿಯ ಬಲೆಗಳಿಂದ ಬಿಗಿದುಕಟ್ಟಿ ಪಂಜರದ ಪಕ್ಷಿಗಳಾಗಿ ನಾವು ಬದುಕುತ್ತಿದ್ದೇವೆ."[೨] ಇಂಥ ಬಾಳಿನ ಪರಿಣಾಮ ಮುಂದಿನ ಪೀಳಿಗೆಯ ಮೇಲೆ ಹೀಗದೆ : "ಅಂಗಳದಲ್ಲಿ ಕುಳಿತು ಆಕಾಶದ ನಾಡಿ ನೋಡುವ ವಿದ್ಯೆ ಇಲ್ಲಿಯ ಮಕ್ಕಳಿಗೊಂದು ಅಸಾಧ್ಯ ವಿಷಯ. ಇಂದಿನ ಮಕ್ಕಳು ಅರಸಿಕರೆಂದು ನಾನು ಹೇಳಲಾರೆ. ಮಕ್ಕಳಿದ್ದಲ್ಲೆಲ್ಲ ಮಾಯಾಲೋಕ ಮೂಡುತ್ತದೆ. ಆದರೆ, ಆಕಾಶ ಅವರಿಗೆ ದೂರವಾಯಿತು. ನಮ್ಮ ಅಂಗಳದಲ್ಲಿಯೇ ಆಕಾಶವಿತ್ತು. ಇವರು ಅದನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ."[೩]

ಗಾಳಿಪಟವನ್ನು ನೆಲದಿಂದ ಮೇಲಕ್ಕೇರುವ ಮನುಕುಲದ ಕನಸೆಂಬಂತೆ ವಿವರಿಸುತ್ತಾ ಅದನ್ನೊಂದು 'ಆದಿಮ ಪ್ರತಿಮಾವಳಿ' (PRIMORDIAL IMAGERY) ಮಾಡಿರುವ ರಾ.ಕು.ಅವರು ಗಾಳಿಪಟ ಹಾರಿಸುವಿಕೆಯಲ್ಲಿ ಮಾನವ ಜನಾಂಗದ ಯುಗಯುಗಾಂತರ ಅಭೀಪ್ಸೆಯನ್ನು ಪ್ರಕಟಿಸಿದ್ದಾರೆ : "ನೆಲಕ್ಕೆ ಯಾವಾಗಲೂ ನಭದ ಸ್ವಪ್ನ. ನಮಗೆ ಎಂದೆಂದಿಗೂ ಅನಂತದ ಕನಸು... ಒಂದಲ್ಲ ಒಂದು ದಿನ ಈ ಭೂಮಿಯ ಬಂಧನವನ್ನು ಬಿಡಿಸಿಕೊಂಡು ಜೀವಂತವಾಗಿ ಅನಂತಕ್ಕೆ ಏರುವ ಕನಸು ಮನುಷ್ಯನನ್ನು ಮುತ್ತಿ ಹಿಡಿದಿದೆ. ಅಭಿವ್ಯಕ್ತಿಯನ್ನು ಅರಿಯದ ಕೂಸು ತನ್ನ ಬಯಕೆಯನ್ನು ಬಿಂಬಿಸಿದಂತೆ, ನಮ್ಮ ಯುಗಯುಗಾಂತರದ ಅಭೀಪ್ಸೆಯನ್ನು ಪಟಹಾರಿಸಿ ಪ್ರಕಟಿಸುತ್ತಿದ್ದೇವೆ."[೪]

ಮೇಲಿನ ವಿಚಾರಧಾರೆಯಲ್ಲಿ ಪರಿಸರ ನಾಶದಿಂದ ತತ್ತರಿಸುತ್ತಿರುವ ಇರುವುದೊಂದೆ ಭೂಮಿ, ಅಣ್ವಸ್ತ್ರ ಪೈಪೋಟಿ, ತಾರಾಸಮರದ ಕಲ್ಪನೆಗಳಿವೆ. ಇದನ್ನು ನಿರೂಪಿಸುವಾಗ ರಾ.ಕು. ಅವರು ಬಿಳಿ ಜನರು ಮತ್ತು ಕರಿಜನರ ಸಂಘರ್ಷವನ್ನು ಕೂಡ ಸ್ಪಷ್ಟವಾಗಿ ಗುರುತಿಸಿದ್ದಾರೆ. ಇಂದು ಪ್ರಪಂಚದ ಬಿಗ್ ಬಾಸ್ ಆಗಿ ಮೆರೆಯುತ್ತಿರುವ ಅಮೇರಿಕಾ ದೇಶದ ಜಾಗತಿಕ ದಬ್ಬಾಳಿಕೆ ಮತ್ತು ದೂರವಸಾಹತು ನೀತಿಯನ್ನು ರಾ.ಕು. ಅವರು ಗ್ರಹಾಂತರ ವಸಾಹತುಗಳ ಕಲ್ಪನೆಯ ಮೂಲಕ ತೀವ್ರವಾಗಿ ವಿಡಂಬಿಸಿದ್ದಾರೆ.

ಪ್ರಬಂಧದ ಮಟ್ಟಿಗೆ ಹೇಳುವುದಾದರೆ, ವಸ್ತುವಿಗಿಂತ ಅಭಿವ್ಯಕ್ತಿ ಮುಖ್ಯ. ಯಾವುದೇ ಸಾಧಾರಣ ವಿಷಯವನ್ನು ತೆಗೆದುಕೊಂಡರೂ ಉನ್ನತ ಮಟ್ಟದ ಪ್ರಬಂಧ ರಚಿಸಲು ಸಾಧ್ಯ ಎಂಬುದಕ್ಕೆ 'ಬದಲಿ ಛತ್ರಿ' ಎಂಬ ಪ್ರಬಂಧವೇ ಸಾಕ್ಷಿಯಾಗಿದೆ. ಈ ಪ್ರಬಂಧದಲ್ಲಿ ಛತ್ರಿ ಬದಲಿಯಾದಾಗ ಆಗುವ ಫಜೀತಿಗಳನ್ನು ಅರ್ಥಪೂರ್ಣವಾಗಿ ಹೇಳಿದ್ದಾರೆ. ಜೀವನದಲ್ಲಿ ಅಂತಹ ಬದುಕಿನ ಸಂಕೀರ್ಣತೆಗಳು ಹೇಗೆ ಬರುತ್ತವೆ ಎಂಬುದನ್ನು 'ಪಾದತ್ರಾಣ' ಪ್ರಬಂಧದಲ್ಲಿ ಸೊಗಸಾಗಿ ಅಭಿವ್ಯಕ್ತಿಸಿದ್ದಾರೆ. ಸಮುದಾಯದ

ಧೋರಣೆಯನ್ನು ಸಂಕೇತದಲ್ಲಿ ತಂದಿದ್ದಾರೆ. ರಾ.ಕು. ಪ್ರಬಂಧಗಳು ಘಟನಾಪ್ರಧಾನವಾದುವುಗಳು. ಅವರ ಪ್ರಬಂಧಗಳನ್ನು ಓದಿ ಮುಗಿಸಿದಾಗ ಒಮ್ಮೊಮ್ಮೆ ಹಾವೇರಿ ಭಾಗದ ಸಾಮಾಜಿಕ ಪ್ರಸಂಗಗಳನ್ನು ನೋಡಿದ ಅನುಭವಾಗುತ್ತದೆ.

ರಾ.ಕು. ಅವರ ಅನುಭವಗಳು ಸಮಾಜ ಜನ್ಯವಾಗಿರುವುದರಿಂದ ಪ್ರಬಂಧಗಳಲ್ಲಿ ನೈಜತೆ ಎದ್ದು ಕಾಣುತ್ತದೆ. 'ಮಡಿವಾಳ ಮಹಾರಾಯ, ಕಷ್ಟವಿಚಾರ, ಅಂಕಗಣಿತ, ಕಿರುಕುಳರಜೆ ಇಂಥ ಪ್ರಬಂಧಗಳನ್ನು ಗಮನಿಸಬಹುದು. ಇಲ್ಲೆಲ್ಲಾ ಸಾಮಾಜಿಕ ವಿಡಂಬನೆಯ ನವುರಾದ ವಿಮರ್ಶೆ ಇದೆ. ಇವರಿಗೆ ಪರಿಸರ ದೊಂದಿಗೆ, ಐಕ್ಯತೆಯೊಂದಿಗೆ ತಾದ್ಯಾತ್ಮವಿದೆ. ಜನತೆಯ ನಿತ್ಯದ ಬಾಳಿನ ನೋವು ನಲಿವು ಎಲ್ಲವನ್ನೂ ಸಹೃದಯ ವಾಚಕರ ಗಮನಕ್ಕೆ ತಂದಿದ್ದಾರೆ.

ಗ್ರಾಮಸಮಾಜದ ಹತ್ತಾರು ಜನಾಂಗಗಳ ಜೀವನದ ವೈವಿಧ್ಯದ ನಿಕಟ ಪರಿಚಯ ಅವರಿಗಿದೆ. ಅವರಿಗಿರುವ ಒಳ್ಳೆಯ ಅಧ್ಯಯನ, ಜನಪದ ಗೀತೆಗಳ ಒಲವು ಪ್ರಾಚೀನ ಸಾಹಿತ್ಯದ ಅರಿವು ಸದಭಿರುಚಿ, ರಸಿಕತೆ ಇವು ಅವರ ಪ್ರಬಂಧಗಳ ವೈಶಿಷ್ಟ್ಯವಾಗಿವೆ. ಮನುಕುಲದ ಏಳ್ಗೆಯನ್ನು ಲಲಿತ ಗಂಭೀರ ಶೈಲಿಯಲ್ಲಿ ಮಂಡಿಸುವ ರಾ.ಕು. ಅವರ ಪರಿಣತ ಮತಿಗೆ 'ಶೇಷ ವಿಶೇಷ'ದ ಕಾಂಪೌಂಡ್ ಬಸ್ಸು' ಎಂಬ ಪ್ರಬಂಧ ಮತ್ತೊಂದು ನಿದರ್ಶನವಾಗಿದೆ. ಬಿ.ಟಿ.ಎಸ್ ಬಸ್ಸಿನ ಚಾಲಕನೊಬ್ಬ ಕಾಂಪೌಂಡಿನ ಮೇಲೆ ತನ್ನ ಬಸ್ಸನ್ನು ನುಗ್ಗಿಸಿದ ನೈಜವಾರ್ತೆಗೆ ರಾ.ಕು. ಪ್ರತಿಕ್ರಿಯೆ ಹೀಗಿದೆ : "ಸಾಮಾನ್ಯರಾದ ಬಸ್ ಸಾರಥಿಗಳು ಮನುಜರ ಮೇಲೆ, ಸಾವವರ ಮೇಲೆ, ಕನಿಷ್ಠರ ಮೇಲೆ ಮಾತ್ರ ತಮ್ಮ ವಾಹನ ಓಡಿಸುವ ಹಳೆಯ ಸಂಪ್ರದಾಯದಲ್ಲಿಯೇ ಇನ್ನೂ ಇರುವಾಗ, ಈತನು ಕಾಂಪೌಂಡು ಏರುವ ಹೊಸಹಾದಿ ಕಂಡುಕೊಂಡಿದ್ದಾನೆ. ಪ್ರೋತ್ಸಾಹ ದೊರೆತರೆ ಇವನು ಮಾಳಿಗೆಯ ಮೇಲೂ ಬಸ್ಸು ನಡೆಸಬಲ್ಲನು. ಈ ಯುಗದ ಮಹತ್ವಾಕಾಂಕ್ಷೆಯನ್ನು ಅವನು ಮೈಗೂಡಿಸಿಕೊಂಡಿದ್ದಾನೆ. ಇತರ ದೇಶಗಳು ಅಂತರಿಕ್ಷ ಸಂಚಾರವನ್ನು ರೂಢಿಸಿಕೊಂಡು ನಕ್ಷತ್ರಗಳಿಗೆ ಕೈ ನೀಡಿರುವಾಗ ಬಡದೇಶದವರಾದ ನಾವು ನೆಲದ ಮೇಲೆ ಮಾತ್ರ ಹರಿದಾಡುತ್ತಿದ್ದೇವಲ್ಲ! ಇದನ್ನು ಅವನು ಹೇಗೆ ಸಹಿಸಬಲ್ಲ? ಆಕಾಶಕ್ಕೆ ಏರಲು ವಿಮಾನವೆ ಏಕೆ ಬೇಕು? ಬಿ.ಟಿ.ಎಸ್. ಬಸ್ಸುಗಳನ್ನೇ ಅಂತರೀಕ್ಷದಲ್ಲಿ ನಡೆಯುವಂತೆ ಏನಾದರೂ ಏರ್ಪಾಡು ಮಾಡಿಕೊಡುವುದು ಈಗ ತೀರ ಅಗತ್ಯವಿದೆ."[೫] ಇಂದಿನ ಬೆಂಗಳೂರು ಮಹಾನಗರದ ಸೇತುವೆರಸ್ತೆಗಳ ಯೋಜನೆಯನ್ನು ಸ್ಮರಿಸಿದಲ್ಲಿ, ರಾ.ಕು. ನೀಡಿದ ಸೂಚನೆ ಸರಿಯಾಗಿದೆಯಲ್ಲವೆ?

ರಾ.ಕು. ಅವರು ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ಹೊಸದಾರಿ ನಿರ್ಮಿಸಿದ್ದಾರೆ. ಕನ್ನಡ ಭಾಷೆ, ಸಮಾಜ, ಸಂಸ್ಕೃತಿಯ ಜೀವಾಳವನ್ನು ಬಲ್ಲ ರಾ.ಕು. ಅವರು ಅವುಗಳಲ್ಲಿ ಹುದುಗಿರುವ ಭಾವ ಪ್ರಪಂಚವನ್ನು ತೆರೆದು ತೋರಿಸಿದ್ದಾರೆ. 'ದೇವಕನ್ನೆ'ಗೆ ಮುನ್ನುಡಿ ಬರೆದ ರಂ.ಶ್ರೀ.ಮುಗುಳಿಯವರು ಈ ರೀತಿಯಾಗಿ ಅಭಿಪ್ರಾಯಪಡುತ್ತಾರೆ.

"ವಕ್ರೋಕ್ತಿ ವಿಡಂಬನೆಗಳಿಂದ ಹಾಸ್ಯ ನಿರ್ಮಾಣವೇ ಇಂಥ ಪ್ರಬಂಧಗಳ ಗುರಿಯಾಗಿರುತ್ತದೆ ಎಂದು ಸಾಮಾನ್ಯವಾಗಿ ಹೇಳಬಹುದು. ಆದರೆ ಯಾವಾಗಲೂ ಹಾಗೆ ಇರಬೇಕಾಗಿಲ್ಲ. ಇದಕ್ಕೆ 'ದೇವಕನ್ಯೆ' ಎಂಬ ಮೊದಲನೆಯ ಪ್ರಬಂಧ ನಿದರ್ಶನವಾಗಿದೆ. ಇದರಲ್ಲಿ ಮನುಷ್ಯನ ಸ್ವಪ್ನಶೀಲತೆ ಮತ್ತು ವಾಸ್ತವ ಸೃಷ್ಟಿಯಲ್ಲಿ ಆಗುವ ಸ್ವಪ್ನಭಂಗ ಇದರ ಗಂಭೀರ ವಿವೇಚನೆ ಮಾರ್ಮಿಕವಾಗಿ ಬಂದಿದೆ. ಒಂದು ಬಗೆಯ ಆಶಾವಾದಿಯಾದ ಮನೋಧರ್ಮದಿಂದ ಇದು ಕೊನೆಗೊಳ್ಳುತ್ತದೆ. ಈ ಪ್ರಬಂಧಕಾರನು ಬರೀ ಹಾಸ್ಯಗಾರನಲ್ಲ. ನರ್ಮಸಚಿವನಲ್ಲ, ಗಂಭೀರ ಆಲೋಚಕನೆಂಬುದನ್ನು ಇದರಿಂದ ಅರಿಯುತ್ತೇವೆ. ಇತರ ಪ್ರಬಂಧಗಳಲ್ಲೂ ಆಲೋಚನೆ ಅಂತರಗಂಗೆಯಾಗಿ ಹರಿಯುತ್ತದೆ. ಗಂಭೀರದ ಅಭ್ಯಾಸದಿಂದ ಮೈದಾಳುವ ವಕ್ರೋಕ್ತಿ ವಿಲಾಸಗಳ ಒಡಲಲ್ಲಿ ಗಂಭೀರವು ಅವಿತುಕೊಂಡಿರುವುದೇ ರಾ.ಕು. ಅವರ ಬರವಣಿಗೆಯ ಜೀವಾಳ"(ರಂ.ಶ್ರೀ.ಮುಗಳಿ, ದೇವಕನ್ಯೆ) ಎಂಬ ಮಾತು ರಾ.ಕು. ಅವರ ಲಲಿತ ಪ್ರಬಂಧಗಳ ಲಾಲಿತ್ಯವನ್ನು ತೋರಿಸುತ್ತದೆ.

ಲಲಿತ ಪ್ರಬಂಧಗಳು ಕವಲು ದಾರಿಯಲ್ಲಿ ಸಾಗುವಾಗ ಅನಿರೀಕ್ಷಿತವಾಗಿ ಬೇರೊಂದು ಸಂಗತಿಯೊಂದಿಗೆ ವಿಚಿತ್ರ ಸಂಬಂಧ ಕಲ್ಪಿಸಿ, ಮತ್ತೆ ಹಳೆಯ ಜಾಡಿನಲ್ಲಿ ಸಾಗುವ ವಕ್ರಪದವು ಲಲಿತ ಪ್ರಬಂಧಗಳಿಗಿರುವುದು ಒಂದು ವೈಶಿಷ್ಟ್ಯ. ಆದರೆ ರಾ.ಕು. ಅವರು ಇದಕ್ಕೆ ಸಂಪೂರ್ಣ ಹೊರತಾಗಿದ್ದಾರೆ. ಬದುಕಿನ ವಾಸ್ತವದ ಅನಾವರಣ ಇವರಿಗೆ ಬಹಳ ಮುಖ್ಯವಾಗಿದೆ. ಅದನ್ನು ಅವರ ಲಲಿತ ಪ್ರಬಂಧಗಳಲ್ಲಿ ಕಾಣಬಹುದು. ಕ್ಷೌರಿಕರ ಸನ್ನಿವೇಶವನ್ನು ಹೇಳುವ ಒಂದು ಉದಾಹರಣೆ ಹೀಗಿದೆ.

"ಗಿರಾಕಿಯ ಕುತೂಹಲಬುದ್ಧಿಯನ್ನು ಹತ್ತಿಕ್ಕುವುದು ಕ್ಷೌರಿಕನ ಪ್ರಧಾನ ಕರ್ತವ್ಯ ಹಾಗೂ ಅವನ ವ್ಯಕ್ತಿತ್ವವನ್ನು ಅಲ್ಲಗಳೆಯುವುದು ಕ್ಷೌರ ಕಲೆಯ ಪ್ರಥಮ ತತ್ವ. ಸಲೂನುಗಳಲ್ಲಿ ಆಳೆತ್ತರದ ನಿಲುಗನ್ನಡಿಗಳನ್ನು ಏಕೆ ನಿಲ್ಲಿಸಿರುತ್ತಾರೆ? ಹಜಾಮನು ತನ್ನ ಮೀಸೆ ಹುರಿಮಾಡಿ ನೋಡಿಕೊಳ್ಳಲೆಂದು, ನೀವು ನಿಮ್ಮ ಮುಂಡವನ್ನು ಕಾಣಲೆಂದಲ್ಲ. ಅದನ್ನು ನೀವು ನೋಡಲೇಕೂಡದು. ಅದಕ್ಕೆಂದೆ ನಿಮ್ಮ ಹೆಡತಲೆಯನ್ನು ಹಿಂದಕ್ಕೆ ಎಳೆದು ಒಂದು ಕಟ್ಟಿಗೆಯ ಕವಲಿನ ಮೇಲೆ ತೂಗುಬಿಡುತ್ತಾನೆ. ಇಲ್ಲವೆ ಹತ್ತಿಕ್ಕಿ ಹಿಡಿಯುತ್ತಾನೆ. ಚುರುಕುಗಣ್ಣಿನ ಅಥವಾ ಮೆಳ್ಳಗಣ್ಣಿನ ಗಿರಾಕಿಯಿದ್ದರೆ ಅಂತಹ ವಿಷಮ ಸನ್ನಿವೇಶದಲ್ಲಿಯೂ ಕಡೆಗಣ್ಣಿನಿಂದಲೊ ಕೆಳಗಣ್ಣಿಂದಲೊ ಕನ್ನಡಿಯಲ್ಲಿ ಕದ್ದು ನೋಡಬಹುದೆಂಬ ಸಂಶಯದಿಂದ ಅವನು ಗಟ್ಟಿಯಾಗಿ ಕಣ್ಣುಮುಚ್ಚುವವರೆಗೂ ಸುಣ್ಣಬಡಿದಂತೆ ಸಬಕರಾದ ನೊರೆಯನ್ನು ಮುಖದ ತುಂಬಾ ಮೆತ್ತುತ್ತಾನೆ. ಆಮೇಲೆ ಕತ್ತಿ ಮಸೆವ ನೆಪದಿಂದ ಇನ್ನಷ್ಟು ಹೊತ್ತು ಕಳೆಯುತ್ತಾನೆ. ಚರ್ಮಪಟ್ಟಿಕೆಯ ಮೇಲೆ ಅದರ ಎರಡೂ ಮೈ ಒರಗುವ ಸಮಾರಂಭ ನಡೆಯುತ್ತದೆ. ಇಷ್ಟು ಹೊತ್ತಿಗೆ ನೋಡುತ್ತೇನೆಂಬ ನೀಚನ ಕಣ್ಣು ಸೋತುಹೋಗಿರುತ್ತವೆ. ಆ ಪ್ರಸ್ತಾವದಲ್ಲಿ ನೀರುನೀರಾಗಿರುವ ಸಾಬಾಣದ ಕಲ್ಕದಲ್ಲಿ ಸ್ನಾನಮಾಡಿ ಬಂದ ಸದೃಢ ಕುಂಚ ಸಟಲ್ ಪಟಲ್ ಎಂದು ಓತಪ್ರೋತವಾಗಿ

ಮುಖದಲ್ಲಿ ಎಡತಾಕ ತೊಡಗುತ್ತವೆ. (ಈ ಹೊತ್ತಿನಲ್ಲಿ ಹಜಾಮನು ನಿಮ್ಮನ್ನು ಬಿಟ್ಟು ಇನ್ನೇನನ್ನೋ ನೋಡುತ್ತಿರುವನೆಂಬುದನ್ನು ಗಮನಿಸಿರಿ.) ಹೀಗೆ ನೊರೆಯಲ್ಲಿ ನೆನೆದ ಅತಿಶಯಧವಳನನ್ನು ಈ ಹೊತ್ತಿಗೆ ಈಷನ್ ಮೂರ್ಛೆಯಂತಹ ಒಂದು ಆಯಾಸದ ಸಷುಪ್ತಿ ಕವಿದಿರುತ್ತದೆ. ಮೆಲುಕಿನ ಮೇಲೆ ಚೊರಕ್ ಎಂದಾಗಲೇ ಅವನಿಗೆ ಎಚ್ಚರ. ಧೂರ್ತ ಗಿರಾಕಿ ಕಣ್ಣು ತೆರೆದನೆಂದು ಕಂಡ ಕೂಡಲೇ ಖಡ್ಗಪಾಣಿಯು ಕುಚಿರ್ಯನ್ನು ಸರ್‍ರನೆ ಹೊರಳಿಸುತ್ತಾನೆ. ಇಲ್ಲವಾದರೆ ಅವನ ಸೋಟೆಯನ್ನು ಅದುಮಿ ಹಿಡಿದು ಕನ್ನಡಿಗೆ ಅಡ್ಡವಾಗಿ ತಾನೆ ನಿಲ್ಲುತ್ತಾನೆ. ಆ ಕಾಲದಲ್ಲಿ ಅವನು ಏನು ಮಾಡಿದರೂ ನೀವು "ಬ್ರ" ಎಂಬ ಹಾಗಿಲ್ಲ. ಡೆಮಾಕ್ಲೀಸನ ಖಡ್ಗದಂತೆ ತನ್ನ ಮಸೆದಡಾಯುಧವನ್ನು ನಿಮ್ಮ ಉಸಿರಿನ ಕೊಣವೆಗೆ ನೇರವಾಗಿ ಅವನು ಝುಳಪಿಸುತ್ತಾ, ಬೀದಿಯಲ್ಲಿ ಹೋಗುವ ಪೈಲ್ವಾನನನ್ನು ನೋಡುತ್ತಿರುತ್ತಾನೆ. ಇಲ್ಲವೆ ವಿದ್ಯುತ್ ಸ್ತಂಭಕ್ಕೆ ಆತು ನಿಂತ ಸಿನಿಮಾ ನಕ್ಷತ್ರಗಳ ರಾಕ್ಷಸ ಚಿತ್ರವನ್ನು ಚಿತ್ತಗೊಟ್ಟು ಅಭ್ಯಾಸಿಸುವುದರಲ್ಲಿ ತೊಡಗಿರುತ್ತಾನೆ. ನೀವು ಮಿಸುಗದಂತೆ ನಿಮ್ಮನ್ನು ಅಜಾನುಕಂಠವಾಗಿ ಬಟ್ಟೆಯಲ್ಲಿ ಸುತ್ತಿ ಕುರ್ಚಿಯಲ್ಲಿ ಸಿಗೆ ಹಾಕಿದ್ದಾನೆ. ಬಾಯಲ್ಲೊಂದು ಬಟ್ಟೆಯ ಚೆಂಡು ತುರುಕಿಲ್ಲ. ಇದೇ ನಿಮ್ಮ ಪುಣ್ಯ."[೬]

ಈ ಪ್ರಬಂಧದಲ್ಲಿ ಕ್ಷೌರಿಕ ಸಮುದಾಯದ ಚಿತ್ರಣವನ್ನು ಸೊಗಸಾಗಿ ಬಿಂಬಿಸಿದ್ದಾರೆ. ಉತ್ತಮ ಪ್ರಬಂಧ ಬರೆಯುವುದು ಉತ್ತಮ ಕಾವ್ಯ ಬರೆದಷ್ಟೇ ಒಂದು ಯೋಗ ಎಂಬುದಕ್ಕೆ ರಾ.ಕು. ಪ್ರಬಂಧಗಳು ಉತ್ತಮ ನಿದರ್ಶನಗಳಾಗಿವೆ.

'ಶೇಷ ವಿಶೇಷ' ಸಂಕಲನದಲ್ಲಿರುವ 'ದೃಷ್ಟಿದೋಷ'ವೆಂಬ ಪ್ರಬಂಧಕ್ಕೂ, ಕಾರಂತರ 'ಬಾಳ್ವೆಯೇ ಬೆಳಕು' ಕೃತಿಯಲ್ಲಿರುವ 'ನಮ್ಮನೋಟದ ಮುಖ್ಯ ಕೊರತೆಗಳು' ಪ್ರಬಂಧಕ್ಕೂ ಶೀರ್ಷಿಕೆಯಲ್ಲಿ ಮಾತ್ರವಲ್ಲ; ಆಂತರಿಕವಾಗಿಯೂ ಹೆಚ್ಚು ಸಾಮ್ಯಗಳಿವೆ. "ಅನೇಕ ಶತಮಾನಗಳಲ್ಲಿ ವಿಕಾಸ ಹೊಂದಿ ಹೊಂದಿ, ನಾವು ಆಧುನಿಕರಾಗಿದ್ದೇವೆ. ಆದರೆ ನಮ್ಮ ಅಂತರಂಗದ ಒಂದು ಪಾರ್ಶ್ವ ಮಾತ್ರ ನಿಕಸನ ಸೂತ್ರವನ್ನು ತಪ್ಪಿಸಿಕೊಂಡು, ಇನ್ನೂ ಆದಿಕಾಲದ ಅರ್ಭಕನಾಗಿಯೇ ಉಳಿದಿದೆ. ಶಿಶು ಸಹಜವಾದ ಭೀತಿಗಳೂ, ಪ್ರಾಕ್ತನ ಕಾಲದ ಕಲ್ಪನೆಗಳೂ, ಕಾಡುಮನುಷ್ಯನ ನಂಬಿಕೆಗಳೂ ನಿರಾತಂಕವಾಗಿ ನಮ್ಮಲ್ಲಿ ನೆಲೆಯೂರಿವೆ. ಬುದ್ಧಿಯ ಜೊತೆಗೆ ಹೃದಯ ಹೆಜ್ಜೆ ಹಾಕುತ್ತಾ ಇಲ್ಲ"[೭] ಇವೆರಡು ಪ್ರಬಂಧಗಳ ವ್ಯತ್ಯಾಸವೆಂದರೆ ಕಾರಾಂತರದು ಗಹನವಾದ ತಾತ್ವಿಕ ದೃಷ್ಟಿಯ ವಿಶ್ಲೇಷಣೆ. ರಾ.ಕು. ಅವರದು ಸಾಮಾನ್ಯತಾಶ್ರೀಯೊಂದಿಗೆ ಮೇಳೈಸಿದ ಲಲಿತ ಗಂಭೀರ ಚಿಂತನೆ. ಮೇಲೆ ಉಲ್ಲೇಖಿಸಿರುವ ಸಾಲುಗಳು ರಾ.ಕು. ಅವರ 'ದೃಷ್ಟಿದೋಷ'ದಿಂದ ಆಯ್ದಭಾಗ. ಇದೇ ಪ್ರಬಂಧದಲ್ಲಿ ತನ್ನಿಂದ ಪುಟ್ಟಮಕ್ಕಳಿಗೆ 'ದೃಷ್ಟಿದೋಷ' ತಾಕುತ್ತದೆಯೆಂಬ ಮಿಥ್ಯಾರೋಪಕ್ಕೆ ಗುರಿಯಾಗಿದ್ದ ಗಂಗಮ್ಮನೆಂಬ ಅಜ್ಜಿಯೊಬ್ಬಳ ಮೂಕಸಂಕಟಕ್ಕೆ ಧ್ವನಿಯಾಗುವ ರಾ.ಕು. ಅವರು "ನಾನು ವರ್ಣಿಸುವುದು ನನ್ನನ್ನೇ"(ಮೈಕೇಲ್

ಮಾಂಟೇನ್) ಮಾರ್ಗ ಹಿಡಿಯದೆ, ಸಾಮಾನ್ಯತಾ ಶ್ರೀ ಮೂಲಕವೇ ಆದಿಮಕಾಲ ಮತ್ತು ಆಧುನಿಕ ಕಾಲಗಳ ನಿರಂತರ ಗತಿಶೀಲ ಸಂಬಂಧವನ್ನು ಶೋಧಿಸಿದ್ದಾರೆ.

ಆರಿಸಿಕೊಂಡ ವಿಷಯಕ್ಕೆ ತಕ್ಕಂತೆ ಜಿಜ್ಞಾಸೆಯ ಅರಿವಿನ ಕಿಡಿಗಳನ್ನು ಹಚ್ಚುವುದು ಇವರ ಪ್ರಬಂಧಗಳ ಒಳದನಿಯಾಗಿದೆ. 'ಅಂಕಗಣಿತ' ಎಂಬ ಪ್ರಬಂಧದಲ್ಲಿ ವಿದ್ಯಾರ್ಥಿಗಳು ಗಣಿತದ ವಿಷಯದ ಬಗೆಗೆ ಪಡುವ ಪಾಡನ್ನು ಪ್ರಬಂಧಕಾರರು ಪ್ರಾಂಜಲ ಮನಸ್ಸಿಗೆ ಹಿಡಿದ ಕನ್ನಡಿಯಂತೆ ಚಿತ್ರಿಸಿದ್ದಾರೆ. ಸಾಮೂಹಿಕವೂ ಸಾಮಾಜಿಕವೂ ಆದ ಸಮಸ್ಯೆಗಳನ್ನು ಕುರಿತ ವಿಷಯದ ಚರ್ಚೆ 'ಉಗಿಬಂಡಿಯ ಓದು'ವಿನಲ್ಲಿದೆ. ಲೇಖಕ ಮಹಾಶಯರು ಒಂದು ವರ್ತಮಾನ ಪತ್ರವನ್ನು ಖರೀದಿಸಿ ತಮ್ಮ ಮೂರನೆಯ ದರ್ಜೆಯ ಬೋಗಿಯನ್ನು ಹತ್ತುತ್ತಾರೆ. ಆದರೆ ಅವರು ತಮ್ಮ ಪತ್ರಿಕೆಯ ಮಾಲಿಕತ್ವವನ್ನು ಕಳೆದುಕೊಂಡು ತಮ್ಮ ಪ್ರಯಾಣದುದ್ದಕ್ಕೂ ಪಡುವ ಬವಣೆಯ ಒಂದು ಹಾಸ್ಯಭರಿತ ಚಿತ್ರಣವು ಇಲ್ಲಿದೆ. ವ್ಯಂಗ್ಯ, ವಿಡಂಬನೆ ಹಾಸ್ಯಗಳು ಈ ಪ್ರಬಂಧದ ಹಾಸು ಹೊಕ್ಕುಗಳಲ್ಲಿವೆ. "ಹೆಸರು" ಲೇಖನವು ನಾಮಕರಣದ ಸಮಸ್ಯೆ, ದೀರ್ಘನಾಮಗಳ ಆವಾಂತರ, ಸಾಂಪ್ರದಾಯಿಕ ಹೆಸರಿನಲ್ಲಿಯ ಸಮಸ್ಯೆ, ಹೆಸರುಗಳನ್ನು ಮೊಟಕುಗೊಳಿಸುವ ಪ್ರವೃತ್ತಿ ಇತ್ಯಾದಿ ವಿಷಯಗಳಿಗೆ ಹಂತ ಹಂತವಾಗಿ ಹರಡಿಕೊಳ್ಳುತ್ತದೆ. ಕೂತಕೂತಲ್ಲಿ ನಿಂತನಿಂತಲ್ಲಿ ನಿದ್ರಾಯೋಗವನ್ನು ಸಾಧಿಸಿದ ಕುಂಭಕರ್ಣನ ಸಂತತಿಯ ಜನರನ್ನು ಕುರಿತ ವಿನೋದಪೂರ್ಣ ಪ್ರಬಂಧವೇ "ನಿದ್ರಾಭ್ಯಾಸ" ಪುರಾತನ ಕಾಲದ ಟೊಪ್ಪಿಗೆ ತೊಡುವ ಜನಾಂಗಗಳ ಇತಿಹಾಸದಿಂದ ಇಂದಿನ ತಲೆತೆಗೆದ, ಟೊಪ್ಪಿಗೆ ರಹಿತ ಜನಾಂಗದವರೆಗಿನ ಟೊಪ್ಪಿಗೆಯ ಫ್ಯಾಶನ್ನಿನ ಉತ್ಕ್ರಾಂತಿಯ ಹಾಸ್ಯಭರಿತ ವಿವರಣೆ 'ಟೊಪ್ಪಿಗೆ' ಪ್ರಬಂಧ. "ನನ್ನ ತೋಟಗಾರಿಕೆ"ಯಲ್ಲಿ ಸ್ವಂತದ ತೋಟಗಾರಿಕೆಯ ಅನುಭವಗಳ ಜೊತೆ ಜೊತೆ, ವಿವಿಧ ಗಿಡಬಳ್ಳಿಗಳ ಮಾಹಿತಿ, ತುಡುಗರ ಸಮಸ್ಯೆ, ತೋಟಗಾರಿಕೆಯ ಕಲೆ, ನಿಸರ್ಗದ ಔದಾರ್ಯಗಳನ್ನು ಕುರಿತ ಹೊಸವಿಚಾರಗಳು ರುಚಿಕಟ್ಟಾಗಿವೆ. "ಅಂಕಗಣಿತ" ಪ್ರಬಂಧವನ್ನು ಇಲ್ಲಿ ಮತ್ತೆ ಸ್ಮರಿಸಿಕೊಳ್ಳುವುದಾದರೆ ಇದೊಂದು ಹಾಸ್ಯ ಪ್ರಧಾನ ಲೇಖನ. ಬಾಲ್ಯದಿಂದಲೂ ಲೇಖಕರಿಗೆ ಈ ವಿಷಯದ ಬಗ್ಗೆ ಇದ್ದ ಜಿಗುಪ್ಸೆ ಅದನ್ನು ಪದೇ ಪದೇ ಪ್ರಕಟಿಸುವ ಬೇರೆ ಬೇರೆ ವಿಧಾನಗಳು ಓದುಗನನ್ನು ಹೊಟ್ಟೆ ಹುಣ್ಣಾಗಿಸುವಂತೆ ನಗಿಸುತ್ತವೆ. ಇನ್ನು 'ಸ್ನಾನಸಂಗೀತ' 'ಕಿರುಕುಳ ರಜೆ', 'ಆಯುಷ್ಕರ್ಮ', 'ಕುರುಡು ಕಾಂಚಾಣ' ಈ ಪ್ರಬಂಧಗಳಲ್ಲಿ ವಿಷಯ ವಿಶಿಷ್ಟತೆ ಇವುಗಳ ಸ್ವಾರಸ್ಯದ ಬೇರು. ಸಾಮಾನ್ಯ ವಿಷಯಗಳನ್ನು ರಸಪೂರ್ಣ ಅನುಭವಗಳನ್ನಾಗಿ ಮಾಡುವ ಕಲೆಗಾರಿಕೆಯ ಪರಿಚಯವನ್ನು ಪ್ರಬಂಧಕಾರರು ಈ ಲೇಖನಗಳಲ್ಲಿ ಹೃದಯವಂತಿಕೆಯಿಂದ ಮಾಡಿಸಿದ್ದಾರೆ.

ರಾ.ಕು. ಅವರು ವೈರುಧ್ಯಗಳನ್ನು ಗ್ರಹಿಸಿ ಸಾಂಸ್ಕೃತಿಕ ಸಂಘರ್ಷಗಳನ್ನುಂಟುಮಾಡುವ ಬಗೆ ಅಭ್ಯಾಸಯೋಗ್ಯವಾಗಿದೆ. ಇದರ ಅರಿವಾಗಬೇಕಾದರೆ 'ಇಸಪೇಟಿನ ಪಾಠ'ದ ಜೊತೆಗೆ 'ಚದುರಂಗವನ್ನು ಕುರಿತು' ಎಂಬ ಪ್ರಬಂಧವನ್ನು ಹೋಲಿಸಬೇಕು. 'ಇಸಪೇಟು' ರಾ.ಕು. ಪ್ರಕಾರ ಬಿಳಿ ಜನರಲ್ಲಿ ಹೆಚ್ಚು

ಪ್ರಚಾರದಲ್ಲಿರುವ ಕ್ರೀಡೆ. ಚದುರಂಗವು ಭಾರತೀಯ ಆಟವಾಗಿದೆ. ಚದುರಂಗದ ಹಲವು ವರಸೆಗಳನ್ನು, ಚಲನೆಯ ಸ್ಥಿತಿ-ಗತಿಗಳನ್ನು ಇತಿಹಾಸ ಮತ್ತು ಪುರಾಣಗಳ ವೈವಿಧ್ಯಮಯ ನಿದರ್ಶಗಳ ಮೂಲಕ ರಾ.ಕು. ಅವರು ಹೊಳೆಯಿಸಿರುವುದು ಧ್ವನಿರಮ್ಯವಾಗಿದೆ. ಇಸಪೇಟಿನ ಏಕರೂಪಾತ್ಮಕ ನೆಲೆ ಹಾಗೂ ಚದುರಂಗದ ಬಹು ರೂಪಾತ್ಮಕ ನೆಲೆಗಳು ಸಹೃದಯರಿಗೆ ಸುಸ್ಪಷ್ಟವಾಗಿ ಬೋಧೆಯಾಗುತ್ತದೆ. 'ಏಕರೂಪಾತ್ಮಕ'ವೆನ್ನಬಹುದಾದ ನೆಲೆಗಳು, ರಾ.ಕು.ಪ್ರಬಂಧಗಳಲ್ಲಿ ಮುರಿದು ಬೀಳುವ ಬಗೆ ತುಂಬಾ ಪ್ರಸ್ತುತವೆನಿಸುತ್ತದೆ. ಉದಾಹರಣೆಗೆ, 'ನಿದ್ರಾಭ್ಯಾಸ'ವೆಂಬ ಪ್ರಬಂಧದಲ್ಲಿ 'ಇಚ್ಛಾನಿದ್ರೆ'ಯನ್ನು ವಿವರಿಸುತ್ತಾ (ಅವರ ಭಾಗ್ಯವನ್ನು ಕೊಂಡಾಡುತ್ತಾ) ನಿದ್ರೆಗಾಗಿ ಪರಿತಪಿಸುವವರ ಬವಣೆಯನ್ನು ನಿರೂಪಿಸಲಾಗಿದೆ. ಈ ದಿಸೆಯಲ್ಲಿ ಅಮೇರಿಕಾ ದೇಶದ ವಿಜ್ಞಾನಿಯ ಸಾಧನೆಯೊಂದನ್ನು-ಸ್ನಾಯು ಶಿಥಿಲೀಕರಣ-ಪ್ರಸ್ತಾಪಿಸಲಾಗಿದೆ. ಮೈ-ಮನಸ್ಸುಗಳನ್ನು ಸಡಿಲಬಿಡುವುದರ ಮೂಲಕ ನಿದ್ರೆಯನ್ನು ವಶಪಡಿಸಿಕೊಳ್ಳಬಹುದೆಂಬ ಅಮೇರಿಕನ್ ವಿಜ್ಞಾನಿಯ ಸೂಚನೆಗಳಿಗೆ ರಾ.ಕು. ಪ್ರತಿಕ್ರಿಯೆ ಹೀಗಿದೆ: " ಸಡಿಲು ಬಿಡುವುದು ಎಂದರೇನು? ನಿಮ್ಮ ಎಲ್ಲ ಚಿಂತೆಗಳನ್ನು ಮರೆತುಬಿಡಬೇಕು. ಕಲ್ಪನೆ ಮಾಡುವುದನ್ನು ಬಿಟ್ಟುಕೊಡಬೇಕು. ಯಾವುದೇ ವಿಷಯದ ನೆನಪನ್ನಾಗಲಿ, ವಿಚಾರವನ್ನಾಗಲಿ ತಂದುಕೊಳ್ಳಬಾರದು. ತೊಳೆದು ಇಟ್ಟ ಕರಿ ಹಲಗೆಯಂತೆ ಮನಸ್ಸು ತೆರವಾಗಬೇಕು"[೮].

ಪ್ರಬಂಧದ ಸ್ವರೂಪ, ಲಕ್ಷಣ ಹಾಗೆಯೇ ಅದರ ಬೆಲೆಕಟ್ಟುವ ರೀತಿ, ವಿನ್ಯಾಸಕ್ರಮ, ಮೇಲ್ಮಟ್ಟದ್ದಾಗಿದೆ. ಮಾಲತಿ ಪಟ್ಟಣಶೆಟ್ಟಿ ಅವರು ಗಾಳಿಪಟದ ಬಗ್ಗೆ ಹೇಳಿರುವ ಮಾತುಗಳು ನೆನಪಿಗೆ ಬರುತ್ತವೆ. "ವ್ಯಂಗ್ಯ ವಿಡಂಬನೆಗಳು ಪ್ರಬಂಧ ಪ್ರಕಾರದ ಮುಖ್ಯ ಅಂಗಗಳು. ಪ್ರಬಂಧಗಳಲ್ಲಿ ಮೂಡಿದ ವ್ಯಂಗ್ಯ ವಿಡಂಬನೆಗಳು ಎಂದಿಗೂ ವ್ಯಕ್ತಿಗತವಾಗಿರದೆ ಸಾಮೂಹಿಕ ಅನ್ಯಾಯ, ಅನಿಷ್ಟಗಳನ್ನು ಕುರಿತು ಬರೆದಂಥವಾಗಿರುತ್ತವೆ. ಪ್ರಬಂಧಕಾರನೂ ಒಬ್ಬ ಉಚ್ಚಮಟ್ಟದ ಸಮಾಜ ಸುಧಾರಕನಾಗಿರುತ್ತಾನೆ. ರಾ.ಕು. ಈ ಅವರು ದೃಷ್ಟಿಯಲ್ಲಿ ತಮ್ಮ ಪ್ರಬಂಧಗಳಲ್ಲಿ ಸಮಾಜದ ಕುಂದು ಕೊರತೆಗಳ ಮೇಲೆ ತಮ್ಮ ನಿರ್ಭೀಡೆಯ ವಾದಗಳ ಕ್ಷಕಿರಣ ಪ್ರಯೋಗಿಸಿ ಸಮಾಜ ಸುಧಾರಣೆಯ ತಮ್ಮ ಗುರುತರ ಸಂಕಲ್ಪವನ್ನು ತಲುಪುವ ಪ್ರಾಮಾಣಿಕ ಪ್ರಯತ್ನಗಳನ್ನು ಮಾಡಿದ್ದಾರೆ. ತಮ್ಮ ಪ್ರಬಂಧ ಸಂಕನದ ಪ್ರಥಮ ಲೇಖನದಲ್ಲಿ ಸರ್ವನಾಶ ಎಸಗುವ ವೈಜ್ಞಾನಿಕ ಶೋಧಗಳ ಮೇಲೆ ಕತ್ತಿಯನ್ನೆತ್ತಿದ್ದಾರೆ. 'ಉಗಿಬಂಡೆಯ ಓದು' ಪ್ರಬಂಧದಲ್ಲಿ ಪರರ ವಸ್ತುವನ್ನು ಕಿತ್ತುಕೊಳ್ಳುವ ಅಸಭ್ಯತೆಯ ವಿರುದ್ಧ "ಸ್ನಾನ ಸಂಗೀತದಲ್ಲಿ" ಆಪಾದಿಸಿದ್ದಾರೆ. ಅಧಿಕಾರಿಗಳ ಕ್ರೂರ ಶೋಷಣೆಗಳನ್ನು ಕುರಿತ ಹರಿತವಾದ ವಿಡಂಬನೆ 'ಕಿರುಕುಳ ರಜೆ'ಯಲ್ಲಿ ಪ್ರಧಾನ ವಿಷಯ. 'ಹೂ ಬಹು ಪ್ರೀತಿಯ ವಸ್ತು, ಅದರಲ್ಲಿಯೂ ಮಂದಿಯ ತೋಟದ ಹೂ ಮೋಹಿನಿಯಂತೆ ಕಣ್ಣು ಸೆಳೆದು ಕೈ ಎಳೆಯುತ್ತದೆ.'(ನನ್ನ ತೋಟಗಾರಿಕೆ) ಎಂಬಲ್ಲಿ, 'ನಮ್ಮ ತಲೆಗೆ ನಾವು ಎಷ್ಟು ಬೆಲೆ ಕೊಡುತ್ತೇವೆಂಬುದನ್ನು ನಮ್ಮ ಟೊಪ್ಪಿಗೆ ಎಲ್ಲರಿಗೂ ತಿಳಿಸುತ್ತದೆ.'(ಟೊಪ್ಪಿಗೆ)ಎಂಬಲ್ಲಿ,

'ನಲವತ್ತೆರಡರ ಚಳವಳಿ ಬ್ರಿಟೀಷರೊಂದಿಗೆ ಗಾಂಧಿ ಟೊಪ್ಪಿಗೆಯ ಗುಣಕ್ಕೂ ಚಲೇಜಾವ್ ಎಂದಿತು.' (ಟೊಪ್ಪಿಗೆ) ಎಂಬಲ್ಲಿ, 'ಮಗ್ಗದವನು ಲಾಳಿ ಒಗೆದಂತೆ ಎಳೆಯ ಜೀವಗಳನ್ನು ಮನೆಯಿಂದ ಶಾಲೆಗೂ, ಶಾಲೆಯಿಂದ ಮನೆಗೂ ಅಲೆದಾಡಿಸುವುದು ನಿರಂತರದ ನೇಯ್ಗೆಯಾಗಿ ಬಂದಿದೆ.'(ಪ್ರಾತರುತ್ಥಾನ) ಎಂಬಲ್ಲಿ ವ್ಯಂಗ್ಯ ವಿಡಂಬನೆಗಳು ಹರಳುಗಟ್ಟಿಕೊಂಡದ್ದನ್ನು ಗಮನಿಸಬಹುದು. ಈ ಸಂಗ್ರಹದುದ್ದಕ್ಕೂ ಸ್ಥಾನ ಸ್ಥಾನಗಳಲ್ಲಿ ಹೇರಳವಾಗಿ ಪ್ರಯೋಗಿಸಲ್ಪಟ್ಟ ವ್ಯಂಗ್ಯ ವಿಡಂಬನೆಗಳು ಸಶಸ್ತ್ರ ಸೈನಿಕರಂತೆ ನಮ್ಮ ಕಾರ್ಯತತ್ಪರತೆಯನ್ನು ತೋರಿವೆ.''[೯](ಮಾಲತಿ ಪಟ್ಟಣಶೆಟ್ಟಿ, ರಾ.ಕು. ಹಾರಿಸಿದ ಗಾಳಿಪಟ ಪ್ರಬಂಧ ಪ್ರಪಂಚ, ಢಾ.ರಾ.ಯ.ಧಾರವಾಡಕರ ಅಭಿನಂದನ ಸಂಪುಟ).

ಬದುಕಿನ ವೈರುಧ್ಯಗಳು, ಪ್ರಶ್ನೆಗಳು, ರಾ.ಕು ಪ್ರಬಂಧಗಳ ಮುಖ್ಯ ಬಿತ್ತಿಯಾಗಿವೆ. ಕೋಮಲವಾದ ಗ್ರಹಿಕೆ, ವಿವೇಕ ಮತ್ತು ಸಾಮಾಜಿಕ ಬದಲಾವಣೆಯ ಮಾರ್ಗವನ್ನು ರಾ.ಕು ಹಿಡಿದಿದ್ದಾರೆ. ಬದುಕಿನ ದ್ವಂದ್ವಗಳನ್ನು ಅವರು ಕಂಡುಕೊಳ್ಳಲು ಹವಣಿಸುತ್ತಾರೆ. ಅವರ ಪ್ರಬಂಧಗಳ ಇನ್ನೊಂದು ಮಹತ್ವವೆಂದರೆ, ಬಹುಮುಖಿ ಸಂವೇದನೆಯನ್ನು ಅತ್ಯಂತ ಧ್ವನಿಪೂರ್ಣವಾಗಿ ಅಳವಡಿಸಿಕೊಂಡಿರುವುದು. ವಿದ್ಯಾರ್ಥಿ ಜೀವನದ ಅನುಭವಗಳು, ಆಯಗಾರರ ಸಮಸ್ಯೆಗಳು, ಸಮಕಾಲೀನ ವಿದ್ಯಮಾನದ ಸನ್ನಿವೇಶಗಳು ದೇಸಿ ಪ್ರತಿಮೆಗಳ ಮೂಲಕ ಅನುಭವವನ್ನು ರೂಪಿಸುವ ಕ್ರಮವೇ ವಿಶಿಷ್ಟವೆನಿಸುತ್ತದೆ. ಇಷ್ಟೊಂದು ತೀವ್ರವಾಗಿ ದೇಸಿಯ ಲಯದಲ್ಲಿ ಮತ್ತು ಆಶಯದಲ್ಲಿ ಲಲಿತ ಪ್ರಬಂಧಗಳನ್ನು ಈವರೆಗೆ ಯಾರೂ ರಚಿಸಿರಲಿಲ್ಲ. ರಾ.ಕು. ಅವರ ಸೃಜನಶೀಲತೆಯಲ್ಲಿ ಗ್ರಾಮೀಣ ಸಮುದಾಯದ ಜೀವಂತ ಚಿತ್ರಗಳು ತುಂಬಿಕೊಂಡಿರುವುದರಿಂದ ಇಂತಹ ಲಲಿತ ಪ್ರಬಂಧಗಳು ಹುಟ್ಟಲು ಕಾರಣವಾಗಿದೆ.

ರಾ.ಕು. ಪ್ರಬಂಧಗಳು ಸಾದರಪಡಿಸುವ, ವಿಷದೀಕರಿಸುವ ವಿಷಯ ಪ್ರತಿಪಾದನೆ ಹಾಗೂ ಸಾರುವ ಲೋಕದರ್ಶನಗಳು ಬಹಳ ಮುಖ್ಯವಾಗಿವೆ. ಅವು ಲೋಕದ ಕಣ್ಣು ತೆರೆಯಿಸಿ ಜನರಲ್ಲಿ ತಿಳಿವಳಿಕೆ ಮೂಡಿಸಿವೆ. ಸನ್ನಿವೇಶಗಳ ನಿರ್ಮಾಣದಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ರಾ.ಕು ಅವರದ್ದೇ ಆದ ಛಾಪು ಇದೆ. ಓದಿಸಿಕೊಂಡು ಹೋಗುವುದು ಇವರ ಪ್ರಬಂಧಗಳ ಇನ್ನೊಂದು ಲಕ್ಷಣ ಮನಸೆಳೆಯುವ ಪ್ರಾರಂಭದ ಭಾಗಗಳು, ಪ್ರಬಂಧದ ಕೊನೆಗೆ ಒಟ್ಟು ಅದರ ಆಶಯ ವ್ಯಕ್ತವಾಗುವ ರೀತಿ ಎಲ್ಲವೂ ಅನುಕರಣೀಯವಾಗಿದೆ. ಲೇಖಕರ ಪರಿಪಕ್ವ ಜೀವನ ದೃಷ್ಟಿ, ಪರಿಣತ ಪ್ರಬಂಧ ಕಲೆ, ಸುಸಂಸ್ಕೃತ ವಿಚಾರ ಶೀಲತೆ ಮೆಚ್ಚತಕ್ಕುದಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಕನ್ನಡ ಪ್ರಬಂಧ ಲೋಕದಲ್ಲಿ ರಾ.ಕು. ಪ್ರಬಂಧಗಳು ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿವೆ.

ಅಡಿ ಟಿಪ್ಪಣಿಗಳು

೧. **ಗಾಳಿಪಟ**, ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, ೨೦೦೨, ಪು.೧

೨. ಅದೇ, ಪು.೯

೩. ಅದೇ, ಪು.೯

೪. ಅದೇ, ಪು.೧೦

೫. **ಶೇಷ ವಿಶೇಷ,** ರಾ.ಕು., ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾವೇರಿ, ರಾ.ಕು. ಅಭಿಮಾನಗಳು ಮತ್ತು ಶಿಷ್ಯವೃಂದ, ೧೯೯೯, ಪು.೯೫

೬. **ದೇವಕನ್ಯೆ,** ರಾ.ಕು. ಲೋಚನ್ ಪ್ರಿಂಟರ್ಸ್ ರಾಜಾಜಿನಗರ, ಬೆಂಗಳೂರು, ೧೯೭೦, ಪು.೬೮

೭. **ಶೇಷವಿಶೇಷ,** ರಾ.ಕು. ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು, ಅಭಿಮಾನಿಗಳು ಮತ್ತು ಶಿಷ್ಯವೃಂದ, ೧೯೯೯, ಪು.೨೦

೮. **ಗಾಳಿಪಟ,** ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, ೨೦೦೨, ಪು.೯೩

೯. **ಪ್ರಬಂಧ ಪ್ರಪಂಚ,** ಎಚ್.ವಿ.ನಾಗೇಶ(ಸಂ), ಡಾ.ರಾ.ಯ.ಧಾರವಾಡದ ಸನ್ಮಾನ ಸಮಿತಿ, ಧಾರವಾಡ, ಲೇ. ಮಾಲತಿ ಪಟ್ಟಣಶೆಟ್ಟಿ, ಪು.೪೩೩

ಅಧ್ಯಾಯ ೫

ರಾ.ಕು. ಅವರ ಲಲಿತ ಪ್ರಬಂಧಗಳ ಭಾಷೆ ಮತ್ತು ಶೈಲಿ

೫

ರಾ.ಕು. ಅವರ ಲಲಿತ ಪ್ರಬಂಧಗಳ ಭಾಷೆ ಮತ್ತು ಶೈಲಿ

ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ರಾ.ಕು ಅವರದು ಬಹುದೊಡ್ಡ ಹೆಸರು. ಸಾಮಾನ್ಯವಾಗಿ ಲಲಿತ ಪ್ರಬಂಧಗಳನ್ನು ವಿದ್ವಾಂಸರು ಚಿತ್ತ ಪ್ರಧಾನ, ವ್ಯಕ್ತಿ ಪ್ರಧಾನ, ವಸ್ತು ವಿಚಾರ ಪ್ರಧಾನ ಎಂದು ಹಲವು ವಿಧಗಳಲ್ಲಿ ವಿಂಗಡಿಸಿದ್ದಾರೆ. ಯಾವುದೇ ಪ್ರಕಾರದ ಲಲಿತ ಪ್ರಬಂಧಗಳಾಗಲಿ ಅವುಗಳ ವಸ್ತು ಲಾಲಿತ್ಯವೇ 'ತೀ.ನಂ.ಶ್ರೀ ಅವರ ನೆಂಟರು ನಾ ಕಸ್ತೂರಿಯವರ 'ಡೊಂಕುಬಾಲ', ವಿ.ಸೀತಾರಾಮಯ್ಯ ಅವರ 'ಬೆಳದಿಂಗಳು' ಅವುಗಳ ಸಾಲಿನಲ್ಲಿ ಸೇರುತ್ತವೆ. ರಾ.ಕು ಅವರ ಗಾಳಿಪಟ. ಯಾವುದಕ್ಕಾದರೂ ಒಂದು ಆರಂಭ ಇರುವಂತೆ ಲಲಿತ ಪ್ರಬಂಧಕ್ಕೂ ಒಂದು ಆರಂಭ ಇದ್ದೇ ಇರುತ್ತದೆ. ಆರಂಭದ ಸ್ವಾರಸ್ಯವನ್ನು ಗೆಲ್ಲುವುದರಲ್ಲಿಯೇ ಇಡೀ ಪ್ರಬಂಧದ ಯಶಾಪಶಯ ಅಡಕವಾಗಿರುತ್ತದೆ. ಆರಂಭದಲ್ಲಿ ಓದುತ್ತಿದ್ದಂತೆಯೇ ಸಹೃದಯ ವಾಚಕರನ್ನು ತನ್ನತ್ತ ಸೆಳೆಯುತ್ತದೆ. ಪ್ರಬಂಧದ ಶಿಲ್ಪ ಗಟ್ಟಿಯಾದಂತೆ ಪ್ರಬಂಧಕ್ಕೆ ಹೆಚ್ಚು ಅನುಕೂಲ. ಈ ನಿಟ್ಟಿನಲ್ಲಿ ರಾ.ಕು. ಅವರ ಭಾಷೆ ಮತ್ತು ಶೈಲಿಯನ್ನು ಗಮನಿಸಬೇಕು.

ರಾ.ಕು. ಅವರು ಹಾವೇರಿ ಪ್ರದೇಶದವರಾಗಿರುವುದರಿಂದ ಸಂದರ್ಭಕ್ಕೆ ತಕ್ಕಂತೆ ಆಡುಭಾಷೆಯನ್ನು, ವ್ಯವಹಾರಿಕ ಶಿಷ್ಟ ಭಾಷೆಯನ್ನು ಧಾರಾಳವಾಗಿ ಬಳಸುತ್ತಾರೆ. ಆ ಭಾಗದ ಕನ್ನಡವನ್ನು ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ. ಈ ಅಧ್ಯಾಯದಲ್ಲಿ ಅವರ ಭಾಷೆಯ ಬಳಕೆಯನ್ನು ಕುರಿತು ಚರ್ಚೆ ಬೆಳೆಸಲಾಗಿದೆ. ಅವರ ಪ್ರಬಂಧಗಳ ಭಾಷೆಯ ವೈಲಕ್ಷಣಗಳನ್ನು ಹೀಗೆ ಕಲೆಹಾಕಲಾಗಿದೆ.

೧. ಪ್ರಮಾಣ ಕನ್ನಡ ನಾಮಪದ ಅಂತ್ಯದ ಎ > ಇ ಆಗಿ ಪರಿವರ್ತನೆಯಾಗಿದೆ.

ತಲೆ > ತಲಿ

ಮಳೆ > ಮಳಿ

೨. ಪ್ರಮಾಣ ಕನ್ನಡದ ನಾಮಪದ ಅಂತ್ಯದ ಉ > ಅ ಆಗಿ ಪರಿವರ್ತನೆಯಾಗಿದೆ.

ಬಾಗಿಲು > ಬಾಗ್ಲ

ಕತ್ತಲು > ಕತ್ಲ

೩. ಪ್ರಮಾಣ ಕನ್ನಡ ನಾಮಪದ ಅಂತ್ಯದ ಏ > ಯ ಆಗಿ ಪರಿವರ್ತನೆಯಾಗಿದೆ.

ಪೇಟೆ > ಪ್ಯಾಟಿ

ಬೇನೆ > ಬ್ಯಾನಿ ಮುಂತಾದುವು.

೪. ಬರಹ ಕನ್ನಡದ ಪದಾಂತ್ಯ ಉ ಕಾರದ ಬದಲು ಅ ಇರುವುದು ಸಾಮಾನ್ಯ

ಅವರು > ಅವ್ರ

ಅದು > ಅದ

ಹುಳು > ಹುಳ

೫. ಬರಹ ಕನ್ನಡದ ದ್ವಿತೀಯಾಕ್ಷರದಲ್ಲಿ ರ ಕಾರವಿದ್ದು ತೃತೀಯಾಕ್ಷರದಲ್ಲಿ ಪರಿವೇಷ್ಟಿತ ಧ್ವನಿಗಳಾದ ಟ ಡ ಣ ಳ ಗಳಿದ್ದರೆ ರ ಕಾರದ ಮುಂದಿನ ಸ್ವರವು ಲೋಹೊಂದಿ ಮುಂದಿನ ವ್ಯಂಜನದೊಡನೆ ಸಮರೂಪ ಧಾರಣೆಯಾಗುತ್ತದೆ.

ಕುರುಡ > ಕುಡ್ಡ

ಹೊರಳು > ಹೊಳ್ಳ

ಕರಡಿ > ಕಡ್ಡಿ

೬. ಸಂಬೋಧನೆಯಲ್ಲಿ ತಮ್ಮ ಸಮ ವಯಸ್ಕರರನ್ನು ಮತ್ತು ಕೆಳಸ್ತರದವನ್ನು ಕರೆಯುವಾಗ ಯ ಎಂಬ ಪ್ರತ್ಯಯವನ್ನು ಹಚ್ಚುವುದು ಸಾಮಾನ್ಯ.

ಶ್ರೀನಿವಾಸ > ಸೀನ್ಯ

ಭೀಮಾಚಾರ್ > ಭೀಮ್ಯ

ಸ್ತ್ರೀಲಿಂಗವಿದ್ದರೆ ಇ ಕಾರದ ಬಳಕೆಯಾಗುತ್ತದೆ.

ರಾಧಾಬಾಯಿ > ರಾಧಿ

ಭಾಗೀರತಿಬಾಯಿ > ಬಾಗಿ

೭. ಅ ಕಾರದ ಬಂಧು ಸೂಚಕಗಳನ್ನು ಕರೆಯುವಾಗ ಯ ಕಾರಂತವಾಗಿ ಉಚ್ಚರಿಸಲಾಗುತ್ತದೆ.

ಅಜ್ಜ > ಯಜ್ಜ

ಅಪ್ಪ > ಯಪ್ಪ

ಅಣ್ಣ > ಯಣ್ಣ

ಅವ್ವ > ಯವ್ವ

ಹೀಗೆ, ರಾ.ಕು ಅವರ ಪ್ರಬಂಧಗಳಲ್ಲಿ ಹಾವೇರಿ ಪ್ರದೇಶದ ಧ್ವನಿರಚನೆಗಳು ಕಂಡುಬರುತ್ತವೆ. ರಾ.ಕು ಅವರು ತಮ್ಮ ಪ್ರಬಂಧಗಳ ಉದ್ದಕ್ಕೂ ಉತ್ತರ ಕರ್ನಾಟಕದಲ್ಲಿ ಹೆಚ್ಚು ಪ್ರಚಲಿತವಾಗಿರುವ ನುಡಿಗಟ್ಟುಗಳನ್ನು ಬಳಸುತ್ತಾರೆ.

ಹಲ್ಲುತಿನ್ನು

ನಿರ್ವಂಶಾಗಲಿ

ಚಂಡಿಚೂಟು

ಹೆಜ್ಜೆಯಲ್ಲಿ ಸಜ್ಜಿ ಬಿತ್ತು

ಮುಂತಾದ ನುಡಿಗಟ್ಟುಗಳು ರಾ.ಕು ಅವರ ಲಲಿತ ಪ್ರಬಂಧಗಳ ಭಾಷಿಕ ಶಕ್ತಿಯನ್ನು ಹೆಚ್ಚಿಸಿವೆ. ರಾ.ಕು ಅವರು ಇಂತಹ ನುಡಿಗಟ್ಟುಗಳಂತೆ ಹಲವಾರು ವಿಶಿಷ್ಟ ಪದ ಪುಂಜಗಳನ್ನು ಬಳಸುತ್ತಾರೆ.

ತಗ್ಗಿ ಬಗ್ಗಿ ಹೋದ್ರೆ ತುತ್ತಸಿಕ್ಕತಿ

ಕೆಟ್ಟಿ ನಾಣ್ಯ ಕೊಟ್ಟಿ ಮಗ ಮನೀಗೆ

ಕುರಡನಿಗೆ ದಾರಿ ತೋರಿಸಿದ್ರೆ ದುರ್ದೈವಿ ಅಲ್ಲ

ಇಂತಹ ಹಲವಾರು ವಿಶಿಷ್ಟ ಪದ ಪುಂಜಗಳು ವಿಶಿಷ್ಟ ಅರ್ಥವನ್ನು ಕೊಡುತ್ತವೆ. ಅವು ಪ್ರಬಂಧಗಳ ಮಧ್ಯ ಮಧ್ಯ ಬಂದಾಗ ಲಕ್ಷಣಾರ್ಥವನ್ನು ಕೊಡುತ್ತವೆ. ರಾ.ಕು ಅವರು ವಿಶಿಷ್ಟ ಅವ್ಯಯಗಳನ್ನು ಸಹಿತ ಬಳಸಿದ್ದಾರೆ.

ಗಸಕ್ಕನೆ - ಕೂಡಲೇ

ಬುದಂಗನೆ - ಕೂಡಲೇ

ಹಿಂದಾಗಡೆ - ಆಮೇಲೆ

ಇಂತಹ ಅವ್ಯಯಗಳು ಭಾಷಿಕ ಕ್ರಿಯೆಯು ನಡೆಯುವ ರೀತಿಯನ್ನು ಹೇಳುತ್ತವೆ. ಒಂದು ಸಾಮಾಜಿಕ ಘಟನೆಯನ್ನು ವಿವರಿಸುವಾಗ ರಾ.ಕು ಅವರು ಆಡುಭಾಷೆಯ ರೂಪಗಳನ್ನು ಬಳಸುತ್ತಾರೆ.

ಯಾನು - ಏನು

ಯಾಂಬಲ್ಲ - ಗೊತ್ತಿಲ್ಲ

ಈಟ - ಸ್ವಲ್ಪ

ಹಗುರಕ - ಮೆಲ್ಲನೆ

ಕುದ್ದ - ಸಮಕ್ಷಮ

ಕುಂದ - ಕಳಂಕ

ದರಕಾರ - ಗಮನ

ಲಘು - ಬೇಗ

ಸವಡು - ಬಿಡುವು

ಜಗ್ಗ - ಎಳೆ

ದಿಗರ - ಭಯ, ಅಂಜಿಕೆ

ಹರ್‍ಯಾಗ - ಮುಂಜಾನೆ

ಮುಂತಾದ ಅನೇಕ ಶಬ್ದಗಳು ಸಹಜವಾಗಿ ಬಳಕೆಯಾಗಿವೆ. ಪಾತ್ರಗಳು ಇಂತಹ ಶಬ್ದಗಳನ್ನು ಬಳಸುವುದರಿಂದ ಓದುಗರಿಗೆ ಹತ್ತಿರವಾಗುತ್ತವೆ. ಅಷ್ಟೇ ಅಲ್ಲದೆ ಕತೆಯ ಆಶಯ ನಿಚ್ಚಳವಾಗಿ ಸಹೃದಯರಿಗೆ ತಿಳಿಯುತ್ತದೆ. ಭಾಷಾಸಂವಹನದ ದೃಷ್ಟಿಯಿಂದ ಪ್ರಾದೇಶಿಕ ಪದಗಳು ತುಂಬಾ ಮಹತ್ವದ ಪಾತ್ರ ವಹಿಸುತ್ತವೆ. ಅವುಗಳಿಗಿರುವ ಚುರುಕುತನದಿಂದ ಪ್ರೇಕ್ಷಕರ ಮನ ತಟ್ಟುತ್ತವೆ. ರಾ.ಕು. ಅವರ ಪ್ರಬಂಧಗಳಲ್ಲಿ ಪ್ರಾದೇಶಿಕ ಪದಗಳಂತೆ ಅನುಕರಣ ವಾಚಕಗಳೂ ಸಹಿತ ಧಾರಣವಾಗಿ ಬಳಕೆಯಾಗಿವೆ.

ಬುದು ಬುದು ಓಡಿಬಂದ

ಲುಟು ಲುಟು ನಡಿದ

ಗಳ ಗಳ ನೀರು ಕುಡಿದ

ಸರ ಸರ ಇಳಿದರು

ಗಣಲ್ ಗಣಲ್ ಎಂಬ ಘಂಟೆಯ ಸಪ್ಪಳಾಯಿತು

ಗಡ ಗಡ ಓಡಿ ಬಂದರು

ಮುಂತಾದ ಉದಾಹರಣೆಗಳನ್ನು ನೋಡಿದಾಗ ಅನುಕರಣ ವಾಚಕಗಳು ಲಲಿತ ಪ್ರಬಂಧಗಳ ಕಾವ್ಯ ಸೌಂದರ್ಯಕ್ಕೆ ಪೂರಕವಾಗುತ್ತವೆ ಎಂಬ ಅಂಶ ಮನದಟ್ಟಾಗುತ್ತದೆ. ರಾ.ಕು. ಅವರು ಸಂದರ್ಭಕ್ಕೆ

ತಕ್ಕಂತೆ ದ್ವಿರುಕ್ತಿಗಳನ್ನು ಸಹಿತ ಬಳಸುತ್ತಾರೆ ವಿಶೇಷಾರ್ಥವನ್ನು ವ್ಯಕ್ತಪಡಿಸುವುದಕ್ಕಾಗಿ ಒಂದು ಪದವನ್ನು ಅಥವಾ ಒಂದು ವಾಕ್ಯವನ್ನು ಬಿಡುವಿಲ್ಲದಂತೆ ಎರಡು ಸಲ ಪ್ರಯೋಗಿಸುವುದನ್ನು ದ್ವಿರುಕ್ತಿಯೆಂದು ಕರೆಯುತ್ತಾರೆ.

ಭೀಮರಾಯರು ಬೇಡ ಬೇಡ ಎಂದರು ಕೇಳಲಿಲ್ಲಿ

ಮಳೆ ಬಂದು ಅಲ್ಲೋಲ ಕಲ್ಲೋಲವಾಯಿತು

ಕಣ್ಣು ಕಣ್ಣು ಪಿಳುಕಿಸದೇ ತಾಯಿ ಕರುವನ್ನು ನೋಡಿದಳು

ಎದೆ ಛಿದ್ರ ಛಿದ್ರವಾಗಿಬಿಟ್ಟವು

ಭಾವನೆಗಳ ಯಥಾಸಂದರ್ಭದ ತೀವ್ರತೆಗೆ ದ್ವಿರುಕ್ತಿಗಳು ತುಂಬಾ ನೆರವಾಗುತ್ತವೆ. ಭಾಷಿಕ ಸನ್ನಿವೇಶವನ್ನು ಕಣ್ಮುಂದೆ ಕಟ್ಟುವಂತೆ ಮಾಡುವ ಚಿತ್ರಕ ಶಕ್ತಿ ದ್ವಿರುಕ್ತಿಗಿದೆ.

ರಾ.ಕು. ಅವರ ಪ್ರಬಂಧಗಳಲ್ಲಿ ಪ್ರತಿಮೆಗಳು (ಶಬ್ದ ಚಿತ್ರಗಳು) ಹೇರಳವಾಗಿ ಬಳಕೆಯಾಗಿ ಪ್ರಬಂಧದ ಸೌಂದರ್ಯ್ಯವನ್ನು ಹೆಚ್ಚಿಸಿವೆ. ಅಲ್ಲಿ ಬಳಕೆಯಾದ ಪ್ರತಿಮೆಗಳು ದೇಶಿ ಮೂಲವಾಗಿವೆ. ಕೆಲವೊಂದು ಇಲ್ಲಿ ಕಲೆ ಹಾಕಲಾಗಿದೆ.

ತಾಯಿ ಹಾಗೆ ಮಗಳು ನೂಲಿನ ಹಾಗೆ ಸೀರೆ

ಗುರುವಿನಂತೆ ಶಿಷ್ಯ : ಮುಖ್ಯೋಪಾಧ್ಯಾಯನಂತೆ ಶಾಲೆ

ದೀಪದ ಕೆಳಗೆ ಕತ್ತಲೆ

ಕೆರೆ ಹರಿಯುವಾಗ ಅರವೆ ಕಟ್ಟಿದರೆ ನಿಲ್ಲುತ್ತದೆಯೇ?

ಉದ್ದನ್ನ ಮೂಳಾ ಬುದ್ದಿಲ್ಲ ಹೋಳಾ

ಆನೆಗೆ ಮದ ಬಂದ ಹಾಗೆ

ಇಂತಹ ಪ್ರತಿಮೆಗಳು, ರೂಪಕಗಳು ಪ್ರಬಂಧದ ಶಕ್ತಿಯನ್ನು ಹೆಚ್ಚಿಸಿವೆ. ಅವುಗಳಿಂದ ಪ್ರಬಂಧಗಳಿಗೆ ಹೊಸ ಅರ್ಥವಂತಿಕೆ ಹೊಳೆಯುತ್ತದೆ. ಅವರ ಪ್ರಬಂಧಗಳು ಅಲಂಕಾರ ಮತ್ತು ಪ್ರತಿಮೆಗಳ ಮೂಲಕ ಮಾತನಾಡಿದಂತೆ ಭಾಸವಾಗುತ್ತವೆ.

ರಾ.ಕು. ಅವರ ಪ್ರಬಂಧಗಳು ಪ್ರಾದೇಶಿಕ ಸೊಬಗಿನಿಂದ ತುಂಬಿವೆ. ಅವರ ಭಾಷೆಯೆಂದರೆ ಕೇವಲ ಅದರ ಪದಗಳಲ್ಲ ಅಲ್ಲಿ ಬರುವ ಭಾಷಾ ಬಳಕೆಯ ಬೇರೆ ಬೇರೆ ಸಾಮಾಜಿಕ ಸಂದರ್ಭದಲ್ಲಿ ಹೇಗೆ ಪುನರ್ ಸಂದರ್ಭೀಕರಣಕ್ಕೊಳಗಾಗಿ ಹೊಸ ಅರ್ಥವನ್ನು ವಿವಿಧ ರೀತಿಯಲ್ಲಿ ಕೊಡುತ್ತವೆ

ಎಂಬುದು ತುಂಬಾ ಆಸಕ್ತಿದಾಯಕ ವಿಷಯವಾಗಿದೆ. ಭಾಷೆಯ ಆಧುನೀಕರಣ ಸಾಹಿತಿ ಕಲಾವಿದರಿಂದ, ಮಾಧ್ಯಮಗಳಿಂದ ಪ್ರಜ್ಞಾಪೂರ್ವಕವಾಗಿ ಅಪ್ರಜ್ಞಾಪೂರ್ವಕವಾಗಿ ನಡೆಯುತ್ತದೆ. ಶಬ್ದ ಕೋಶದ ವಿಸ್ತರಣೆ ಭಾಷೆಯ ಆಧುನೀಕರಣಕ್ಕೆ ಒಂದು ದಾರಿ ತನ್ನ ಸಾಮಾಗ್ರಿಗಳ ಮೂಲಕವೇ ಬರಹಗಾರರು ಹೊಸ ಪದಗಳನ್ನು ಬಳಸುತ್ತಾರೆ. ಇದಕ್ಕೆ ರಾ.ಕು ಅವರು ಹೊರತಲ್ಲ ಅವರು ಬಳಸಿದ ಕೆಲವು ಹೊಸ ಪದಗಳು ಕನ್ನಡ ಯಾವ ನಿಘಂಟಿನಲ್ಲಿಯೂ ದಾಖಲಾಗಿಲ್ಲ ಎಂಬುವುದು ಗಮನಿಸಬೇಕಾದ ಸಂಗತಿ.

ಉದಾಹರಣೆಗೆ - ಆಕಾಶದಂಗಳ - ಮುಗಿಲು

ಉರಿಮಾತು - ಕೋಪದ ನುಡಿ

ಉರಿಗಣ್ಣು - ಕೆಂಗಣ್ಣು

ಬೆವರು ಜಲ - ದುಡಿಯುವಾಗ ಬರುವ ಕಠಿ ನೀರು

ಕಲ್ಲೊಡ್ಡು - ಕಲ್ಲಿನ ಕೆಲಸದಲ್ಲಿ ನಿರತನಾಗಿರುವವ

ಹೂಗಾಳಿ - ತಂಗಾಳಿ

ಸಾದೃಶ್ಯ ಸೃಷ್ಟಿಯ ಮೂಲಕ ರಾ.ಕು ಅವರು ಈ ಪದಗಳನ್ನು ಸೃಷ್ಟಿಸಿ ಚಲಾವಣೆಗೆ ತಂದಿದ್ದಾರೆ. ಭಾಷೆಯ ಅಭಿವ್ಯಕ್ತಿ ಶಕ್ತಿಯನ್ನು ಹೆಚ್ಚಿಸಬೇಕಾದರೆ ಇಂತಹ ಹೊಸ ಪದಗಳ ಪ್ರಯೋಗಗಳು ಅವಶ್ಯಕವಾಗಿವೆ. ಮೇಲಿನ ಅಂಶಗಳನ್ನು ಗಮನಿಸಿದಾಗ ರಾ.ಕು ಅವರ ಪ್ರಬಂಧಗಳು ಕನ್ನಡ ಸಾಹಿತ್ಯದಲ್ಲಿ ಮಹತ್ವದ ಸ್ಥಾನ ಪಡೆದಿವೆ ಎನ್ನುವುದರಲ್ಲಿ ಸಂದೇಹವಿಲ್ಲ. ಇಲ್ಲಿಯವರೆಗೆ ಅವರ ಪ್ರಬಂಧಗಳ ಭಾಷಾ ಸ್ವರೂಪವನ್ನು, ಭಾಷಾ ಬಳಕೆಯ ರೀತಿಯನ್ನು ಸ್ಥೂಲವಾಗಿ ಪರಿಚಯಿಸಿಕೊಡಲು ಯತ್ನಿಸಲಾಗಿದೆ ಇನ್ನು ಬೇರೆ ಬೇರೆ ವಿಧಾನಗಳಿಂದ ವಿವೇಚಿಸುವುದು ಸಾಧ್ಯ. ಅರ್ಥ ರಚನೆಯ ದೃಷ್ಟಿಯಿಂದಲೂ ರಾ.ಕು ಪ್ರಬಂಧಗಳು ಅಧ್ಯಯನಕಾರರ ಕುತೂಹಲವನ್ನು ಕೆರಳಿಸುತ್ತವೆ.

ರಾ.ಕು. ಅವರಿಗೆ ಅವರದ್ದೇ ಆದ ಆಕರ್ಷಕ ಶೈಲಿ ಇದೆ. ವಾಸ್ತವವಾಗಿ ಅವರು ಕನ್ನಡದ ಅತ್ಯುತ್ತಮ ಗದ್ಯಕಾರರಲ್ಲಿ ಒಬ್ಬರು. ಸರಳವಾಗಿ, ಸಹಜವಾಗಿ, ನಿರಾಡಂಬರವಾಗಿ ಬರೆದುಕೊಂಡು ಹೋಗುವುದು ಅವರ ಜಾಯಮಾನ. ಇಂತಹ ಸ್ವಾಭಾವಿಕ ಬರವಣಿಗೆಯಲ್ಲಿ ಸೊಬಗಿದೆ. ಮಾರ್ಮಿಕವಾಗಿ ಹೇಳುವ ಜಾಣ್ಮೆಯಿದೆ ಇರುವುದನ್ನು ಇರುವಂತೆಯೇ ಕಟ್ಟುವ ಕಲೆ ಅವರಿಗೆ ಸಾಧಿಸಿದೆ. ಎಂಥದ್ದೇ ಒಳ್ಳೆಯ ವಸ್ತುವಿದ್ದರೂ ವಿಷಯ ಸಂಗ್ರಹವಿದ್ದರೂ ಕೆಲವರು ಅಭಿವ್ಯಕ್ತಿಯ ಸಾಮರ್ಥ್ಯವಿಲ್ಲದೆ ಸೋತುಬಿಡುತ್ತಾರೆ. ಆದರೆ ರಾ.ಕು ಅವರು ತೀರ ಸಾಮಾನ್ಯ ವಿಷಯಗಳಿಗೂ ಸಾಮಾರ್ಥ್ಯವನ್ನು ತುಂಬಿ ಸಾಹಿತ್ಯ ಕ್ಷೇತ್ರದಲ್ಲಿ ಸ್ಥಾನವನ್ನು ಉಳಿಸುತ್ತಾರೆ. ಅವರು ಬಳಸುವ ಭಾಷೆ, ಶೈಲಿ ಜನಭಾಷೆಗೆ ಹತ್ತಿರವಾಗಿದೆ. ಆಡುನುಡಿ, ಗಾದೆ, ಪ್ರತಿಮೆಗಳು, ಉಪಮೆ, ಇವುಗಳಿಂದ ಕೂಡಿದ ಅವರ ಭಾಷಾ ಶೈಲಿ

ಲಯ ಸಮನ್ವಯವಾಗಿದೆ. ಲಲಿತವಾದ ನಿರೂಪಣೆ ಹಾಗೂ ಸುಸಂಸ್ಕೃತವಾದ ಹಾಸ್ಯದಿಂದಾಗಿ ಅವರ ಪ್ರಬಂಧಗಳು ಎಂಥವರನ್ನೂ ಬಹುಬೇಗ ಆಕರ್ಷಿಸುತ್ತವೆ. ಇದಕ್ಕೆ ನಿದರ್ಶನವಾಗಿ ಅವರ ಪ್ರಾತರುತ್ಥಾನ ಪ್ರಬಂಧದ ಒಂದು ಭಾಗವನ್ನು ನೋಡಬಹುದು.

"ನಸುಕಿನಲ್ಲಿ ಬಿದ್ದ ಕನಸು ಹುಸಿಹೋಗದ ಭವಿಷ್ಯವೆಂದೇ ಕೇಳಿದ್ದೇನೆ. ಅಂತಹ ಯಾವ ಕನಸೂ ನನಗೆ ಈವರೆಗೆ ಬಿದ್ದಿಲ್ಲ. ನನ್ನ ಭವಿಷ್ಯತ್ತಿಗೆ ಮುಂದಾಗಿ ಕಾಣಿಸಿಕೊಳ್ಳುವ ಚಪಲವಿದ್ದಂತಿಲ್ಲ. ಅಥವಾ ಮುಂದಾಗಿ ತಿಳಿಸಬೇಕಾದ ಅಂಶಗಳೂ ಇರಲಿಕ್ಕಿಲ್ಲ. ಏನೆ ಇದ್ದರೂ ಭವಿಷ್ಯವಾಗಿಯೇ ಉಳಿದಿರುವುದು ನನಗೆ ಸಂತೋಷ. ಮುಂಚಿತವಾಗಿಯೇ ತಿಳಿದು ಅದರ ಸೊಗಸು ಕೆಡಿಸುವುದಾಗಲಿ, ಅದರ ವಿಧಾನಕ್ಕೆ ಅಡ್ಡಗಾಲು ಹಾಕುವುದಾಗಲಿ ಸಂಸ್ಕೃತಿಯ ಲಕ್ಷಣವಲ್ಲ. ಅಲ್ಲದೆ ಈ ಭವಿಷ್ಯ ಸೂಚೀ ಸ್ವಪ್ನಗಳ ಸ್ವಭಾವವೂ ವಿಚಿತ್ರ. ಯಾರೂ ಏಳದಿರುವಾಗ ಕಳ್ಳ ಹೆಜ್ಜೆಯಿಂದ ಬಂದು ಸನ್ನೆ ಮಾಡಿ ಹೋಗುವ ಚಟ ಭವಿಷ್ಯಕ್ಕೆ ಏಕೆ ಬೇಕೋ ನನಗೆ ತಿಳಿಯದು ಈ ಸಂಕೋಚ. ಈ ಚಪಲ ನನಗೆ ಸೇರದು. ಸರಳವಾಗಿ ಬಂದು ಸ್ಪಷ್ಟವಾಗಿ ಮಾತಾಡುವುದು ಸಜ್ಜನ ಲಕ್ಷಣ. ಅವಸರವಾಗಿ ಬಂದು ಸಾಂಕೇತಿಕ ಭಾಷೆಯಲ್ಲಿ ಗೂಡಾರದ ಕವಿಯಂತಿರೆ ಮುಚ್ಚಿಹೋಗುವ ಈ ವಾಣಿಯನ್ನು ನಾವು ತಿಳಿಯಲಾರೆವು. ಅದನ್ನು ಅರ್ಥಮಾಡಲು ನಾವು ಇನ್ನೊಬ್ಬ ಶಾಸ್ತ್ರಿಯ ಬಳಿಗೆ ಹೋಗಬೇಕು. ಸ್ವಪ್ನವನ್ನು ನೆನಪಿಟ್ಟು ಅವನಿಗೆ ಸ್ಪಷ್ಟವಾಗಿ ತಿಳಿಸಬೇಕು. ಮೊದಲನೆಯ ಕಷ್ಟ ಅವನು ಹೇಳಿದನ್ನು ನಾವು ತಿಳಿದುಕೊಳ್ಳಬೇಕು ಎರಡನೆಯ ಕಷ್ಟ ಆಮೇಲೆ ಆ ಫಲದ ಆಸೆಯಿಂದಲೋ ಭಯದಿಂದಲೋ ಈಗಿಂದಲೆ ಚಡಪಡಿಸಬೇಕು. ಎಲ ಎಲ ಯಾರು ಹೇಳಿದ್ದಾರು? ಬರುವದೇನುಂಟೊಮ್ಮೆ ಬಂದಾಗ ಬರಲಿ. ಈಗ ತಣ್ಣಗೆ ನಿದ್ದೆ ಮಾಡಬಾರದೆ? ಆದರೆ ತಣ್ಣಗೆ ಇರಲಿಕ್ಕೆ ನಾವು ಯಾರು? ಸನ್ಯಾಸಿಯಾದವನು ಇನ್ನಷ್ಟು ಹೊತ್ತು ಮಲಗಬಹುದು. ಸಾಸಿವೆಯಷ್ಟು ಕೆಲಸಕ್ಕೆ ಸಾಗರದಷ್ಟು ದುಃಖ ಕೊಡುವುದು ಸಂಸಾರದ ರೀತಿ. ಎಷ್ಟೋ ವರ್ಷ ನಾನು ಸ್ವತಂತ್ರನಾಗಿದ್ದು ವಿದ್ಯಾಭ್ಯಾಸವೆಂದೋ, ಪರಸ್ಥಳದ ನೌಕರಿಯೆಂದೋ, ವಸತಿಗೃಹದಲ್ಲಿ, ಶ್ವಶುರ ನಿವಾಸದಲ್ಲಿ ಬಾಡಿಗೆಯ ಕೋಣೆಗಳಲ್ಲಿ ಸೂರ್ಯನಿಂದ ಸೇವೆ ಮಾಡಿಸಿಕೊಂಡು ಸುಖಪಟ್ಟಿದ್ದೇನೆ. ಈಗ ಅದೆಲ್ಲ ಒಂದು ಹಳೆಯ ಕನಸು."[೧] (ಪ್ರಾತರುತ್ಥಾನ-ತಾಳಿಪಟ)

ಇಲ್ಲಿ ವರ್ಣಮಯವಾದ ಹಾಸ್ಯ ಚಿತ್ರವನ್ನು ನಾವು ಕಾಣುತ್ತೇವೆ. ನಮ್ಮ ನಾಡಿನಲ್ಲಿ ಜನ ಬದುಕಿಗಾಗಿ ಪಡುವ ಪಾಡು ಇಲ್ಲಿ ಅಭಿವ್ಯಕ್ತವಾಗಿದೆ. ಸಮಾಜದಲ್ಲಿ ನೂರಾರು ವಿಚಿತ್ರ ವಿಪರ್ಯಾಸಗಳು ಅವರ ಪ್ರಬಂಧದಲ್ಲಿ ಸಚಿತ್ರವಾಗಿ ತೆರೆದುಕೊಂಡಿವೆ. ಕೆಲವು ಕಡೆ ಕಾವ್ಯಮಯವಾದ ವರ್ಣನೆಗಳೂ ಸುಂದರವಾದ ಕಲ್ಪನೆಗಳೂ ಇವರ ಪ್ರಬಂಧದಲ್ಲಿ ಕಂಡುಬರುತ್ತವೆ. 'ಆಯುಷ್ಕರ್ಮ' ಎಂಬ ಪ್ರಬಂಧದ ವರ್ಣನಾಭಾಗವನ್ನು ನಿದರ್ಶನಕ್ಕಾಗಿ ಗಮನಿಸಬಹುದು. "ಒಮ್ಮೊಮ್ಮೆ ಎನಿಸುತ್ತದೆ - ಬೋಳಿಸಿ, ಬೋಳಿಸಿ ಬೇಸರಗೊಳ್ಳುವುದಕ್ಕಿಂತ ಲುಂಚಂ ಮಾಡಿಕೊಂಡರೆ ಒಳ್ಳೆಯದಲ್ಲವೆ"? ಎಂದು. ಲುಂಚನ

ವಿಧಾನವನ್ನು ಕೇಳಿದರೆ ಮಾತ್ರ ಮೈಜುಮ್ಮೆನ್ನುತ್ತದೆ. ಬೇಡ, ಮಹಾರಾಯ! ನಾವು 'ಕುರುಳ್ಗಳ ಸವಣ'ರಾಗಿರುವುದೇ ಲೇಸು; ಈ ಭಯಾನಕ ಲುಂಚನಕ್ಕೆ ನಾವಿನ್ನೂ ಸಿದ್ಧರಿಲ್ಲ. ಭಾರತದ ವೀರರು ರಾತ್ರಿ ತಮ್ಮ ಪಾಳ್ಯದಲ್ಲಿ ಕುಳಿತು, ತಮ್ಮ ತಲೆಯಲ್ಲಿ ನಟ್ಟ ಬಾಣಂಶಗಳನ್ನು ಇಕ್ಕುಳದಿಂದ ಕೀಳಿಸಿ ಕೊಳ್ಳುತ್ತಿದ್ದರೆಂದು ಪಂಪ ಹೇಳುತ್ತಾನೆ. ಇರಬಹುದು, ಆದರೆ ಜೈನ ತಪಸ್ವಿಯಾಗುವವನು ತನ್ನ ತಲೆಯ ತುಂಬ, ಮೊಗದುಂಬ ಇರತಕ್ಕ ಕೂದಲನ್ನು ಒಂದೂ ಬಿಡದಂತೆ, ಸಮೂಲವಾಗಿ ಕೀಳಬೇಕಂತೆ! ಇದು "ಲುಂಚ"ವಾದರೆ ನಮೋ ಎನ್ನುತ್ತೇನೆ. ನಾವು ತೀರ್ಥಂಕರರಾಗುವ ಕಾಲ ಬಂದಾಗ (ನಾನು ಒಲ್ಲೆ) ನೋಡೋಣವಂತೆ. ಈಗ ಬೋಳಿಸಿಕೊಳ್ಳುವುದೇ ವಾಸಿ.

ಹೊಸದೊಂದು ಸೇಫ್ಟಿ ಸಲಕೆಯನ್ನು ಕೊಂಡಿದ್ದೇನೆ. ಸಾಬೂನು ಸವರಿ ಸಲಕೆ ಎಳಯತೊಡಗಿದರೆ ಎಂತಹ ಲಲಿತ ಗತಿಯಿಂದ ಸರಿಯುತ್ತದೆ! ಎಲ ಎಲ ! ಈ ಸುಖದ ಸ್ವಾರಸ್ಯವನ್ನೂ ಅಲ್ಲಗಳೆಯುವುದುಂಟೆ? ಕೂದಲು ಕೊನರುತ್ತಿರಬೇಕು. ನಾವು ಸವರುತ್ತಿರಬೇಕು. ಪುರುಷ ಪ್ರಸಾಧನದ ಈ ಅಮೋಘ ಸಾಧನವನ್ನು ನಾವು ಬೇಡವೆನ್ನೋಣವೆ? ಕೂದಲು ಮೊಳೆಯದ ಬೋಳು ಮುಖ ಹಾಳು-ಮುಖ, ಸಸಿಯನ್ನೆ ಸವರಿ ಹಾಕಿದರೂ, ಅಹಿರಾವಣನ ಸೈನ್ಯದಂತೆ ಎದ್ದೆದ್ದು ಬರುವ ಗಡ್ಡದ ರಾಕ್ಷಸ ವೃದ್ಧಿಯನ್ನು ಕಂಡು ನಮ್ಮ ಗಂಡುದರ್ಪ ಕೆರಳುವುದು, ನಿಜ. ಅದರ ಮನನದಿಂದ ತನನವೆನುವುದಿಲ್ಲ. ನಮ್ಮ ತನು-ದಣದಣ ಎನ್ನುತ್ತದೆ; ಅದೂ ನಿಜ. ಆದರೆ ಒಂದು ಸಮಾಧಾನವಿದೆ : "ಭೀಮನು ಬಿದ್ದನೆ, ಕೌರವ ಗೆದ್ದನೆ" ಎಂಬ ಪ್ರಶ್ನೆ ಇಲ್ಲಿ ಏಳುವುದಿಲ್ಲ. ದೈವ ಎನ್ನುವುದು ಪಂಕ್ತಿ ಭೇದ ಮಾಡಿರಬಹುದು ; ಜನಕ್ಕೆ ಜನ ಪಕ್ಷಪಾತ ಮಾಡಿರಬಹುದು; ಆದರೆ ನವಕೋಟಿ ನಾರಾಯಣನಿಂದ ದರಿದ್ರ ದಾಮೋದರನವರೆಗೆ ಎಲ್ಲ ಗಂಡಂತೆಂಬರ ಮುಖದ ಮೇಲೂ ವರದ ಹಸ್ತ ಎಳೆದಿದೆ ಸಮಾತಾವಾದಿಯಾದ ಈ ಕ್ಷೌರದ ಬೆಳೆ. ಅದರ ಪ್ರತ್ಯಕ್ಷ ಫಲ-ಸಮೃದ್ಧಿಗೆ ಆ ಮುಖಾ ಈ ಮುಖಾ-ಎಲ್ಲಾ ಮುಖ ಸಾಕ್ಷಿ. ವರ್ಗವರ್ಗಗಳ ಕಲಹವೇಕೆ? ಪ್ರಕೃತಿ ಹೇಳುತ್ತದೆ ನಾವೆಲ್ಲ ಒಂದೆಂದು. ಕೆಂಪು ನಕ್ಷತ್ರವೇ ಬೇಕು, ಕೊಡಲಿ ಸುತ್ತಿಗೆಗಳ ಸುತ್ತಿಗೆಗಳ ಬಾವುಟವೇ ಬೇಕು ಎಂಬಂತಿಲ್ಲ. ನಾವೆಲ್ಲ ಒಂದೇ ಎಂದು ಹೇಳುವುದಕ್ಕೆ ನಮ್ಮ ಅಸಂಸ್ಕೃತ ಮುಖ ಒಂದೇ ಸಾಕು."[೨] ಈ ಪ್ರಬಂಧದಲ್ಲಿ ರಾ.ಕು ಅವರು ಹಳ್ಳಿಯ ಕ್ಷೌರದ ಚಿತ್ರಣವನ್ನು ಹಾಸ್ಯಮಯ ಶೈಲಿಯಲ್ಲಿ ಚಿತ್ರಿಸಿದ್ದಾರೆ. ವಿಡಂಬಿಸಿ, ವಿತರ್ಕ, ಹಾಸ್ಯ, ಹರಟೆ ಇವೆಲ್ಲವೂ ಅರ್ಥಪೂರ್ಣವಾಗಿ ಮೂಡಿಬಂದಿವೆ.

ರಾ.ಕು. ಅವರ ಪ್ರಬಂಧಗಳಲ್ಲಿ ಜಾನಪದ, ಭಾವ, ಭಾಷೆ ಮತ್ತು ಸಂಗತಿಗಳು ಹದವರಿತು ಬೆರೆತಿವೆ. ರಾ.ಕು ಅವರು ಪ್ರಯೋಗಶೀಲ ಗದ್ಯಕಾರರಾಗಿದ್ದಾರೆ. ಕನ್ನಡ ದೇಸಿ ಪರಂಪರೆಯನ್ನು ವ್ಯಾಪಕ ವಾಗಿ ಅಧ್ಯಯನ ಮಾಡಿದ ಅವರು ದೇಸಿ ಸಂಸ್ಕೃತಿಯನ್ನು ಹಿನ್ನಲೆಯಾಗಿಟ್ಟುಕೊಂಡು ಮೌಲಿಕ ಪ್ರಬಂಧ ಗಳನ್ನು ರಚಿಸಿದ್ದಾರೆ. ಅವರ ಗದ್ಯಶೈಲಿಯಲ್ಲಿ ಸಮತೋಲನ ನಿರೂಪಣೆ ಇದೆ. ಅಭಿವ್ಯಕ್ತಿಯಲ್ಲಿ ಸೃಜನ

ಸಾಮರ್ಥ್ಯವಿದೆ. ಆಳವಾಗಿ ಅಂತಃಕರಣದ ಮಿಡಿತವಿದೆ, ಹಾಸ್ಯವೂ ಇದೆ. ಅದಕ್ಕೆ ನಿದರ್ಶನವೆಂಬಂತೆ ಕಿರುಕುಳ ರಜೆಯ ಪ್ರಬಂಧದಲ್ಲಿ ಒಂದು ಘಟನೆಯು ನೆನಪಿಗೆ ಬರುತ್ತದೆ. "ನವಕರನು ತನ್ನ ಹಕ್ಕಿನ ರಜೆಯನ್ನು ತಾನು ಬೇಡುವಾಗ ಸುಳ್ಳು ಕಾರಣವನ್ನು ಏಕೆ ತೋರಿಸುತ್ತಾನೆ? ಏಕೆಂದರೆ ಸುಳ್ಳು ಗೆದ್ದಂತೆ ಸತ್ಯ ಗೆಲ್ಲದು. ಮಂಜೂರ್ ಮಾಡುವ ಪ್ರಭುಶಕ್ತಿಯೊಂದು ಇನ್ನೊಬ್ಬನ ಹತ್ತಿರ ಉಂಟಲ್ಲವೆ? ಅವನು ಸತ್ಯವನ್ನು ಎದುರಿಸಿ, ತಡೆದುಕೊಳ್ಳಲಾರ. ನಾವು ಸತ್ಯರಾಜಾ ಹರಿಶ್ಚಂದ್ರನ ಅಪರಾವತಾರ, ದ್ವಿತೀಯ ಧರ್ಮರಾಜ, ಪ್ರತಿರಾಮಚಂದ್ರರಾಗಿ ನಡೆಯುವಂತೆ ನಡೆಯುವ ಅಸಾಧ್ಯ ಪ್ರಯೋಗವನ್ನೇ ಆರಂಭ ಮಾಡಿದೆವು ಎನ್ನೋಣ. ನೀವು ಮಂಜೂರಾತಿ ನೀಡುವ ಸ್ಥಾನದಲ್ಲಿ ಕುಳಿತುಕೊಳ್ಳಿ, ಕುಳಿತಿರಾ? ನಾನು ಒಂದು ಚೀಟಿ ಬಿಡುತ್ತೇನೆ, ಪತಕರಿಸೋಣವಾಗಲಿ.

ಮಹಾಸ್ವಾಮಿ, ಈ ಹೊಲಸು ನವಕರಿ ಮಾಡಿ ಮಾಡಿ, ನನ್ನ ಜೀವ ಹೇಸಿ ಹೋಗಿದೆ. ತಲೆ ಗಿರ್‍ರೆಂದೂ, ಭಂವೆಂದೂ, ತಿರುಗುತ್ತದೆ. (ಒಂದು ದಿನದ ಮಟ್ಟಿಗಾದರೂ ನಿಮ್ಮ ಹೇಸಿ ಮುಖ ನೋಡುವ ದುರ್ದೆಸೆ ತಪ್ಪಿಸಿರಿ ನಿಮಗೆ ಏನೆಂದು ಅಷ್ಟು ಪಗಾರಕೊಟ್ಟು ಅಲ್ಲಿ ಕೂಡಿಸಿದರೊ ನಾನು ಕಾಣೆ.) ನನ್ನ ಹೆಂಡತಿಯ ಮುಂದೆ ಕುಳಿತು ಚಕ್ಕಂದ ಮಾಡಿ ಜಂಬ ಕೊಚ್ಚಿಕೊಳ್ಳುತ್ತೇನೆ. ಇಲ್ಲವೆ ತಣ್ಣಗೆ ಕಾಲುಚಾಚಿ ಮನೆಯಲ್ಲಿ ಬಿದ್ದುಕೊಳ್ಳುತ್ತೇನೆ. ರಜಾ ಮಂಜೂರ್ ಮಾಡಿರಿ. (ನಿಮ್ಮಪ್ಪನ ಗಂಟೇನೂ ಹೋಗುವುದಿಲ್ಲ. ಅದು ನನ್ನ ಹಕ್ಕು). ಏನು? ಮಂಜೂರ್ ಮಾಡುವಿರಾ? ಇದು ನಿಮ್ಮ ಮನಸ್ಸಿಗೆ ಬರಲಿಲ್ಲವಾದರೆ ಇನ್ನೊಂದು ಚಾಚುತ್ತೇನೆ : ಮಹಾನೀಯರೆ, (ಸರಕಾರಿ ನಿಯಮ ಹಾಗು ನನ್ನ ಹೊಟ್ಟೆ ಇಲ್ಲದಿದ್ದರೆ ನಿನ್ನನ್ನು ಏನೆಂದು ಕರೆಯುತ್ತಿದ್ದೆ ಗೊತ್ತೇ? ಅಥವಾ ನಿನ್ನನ್ನು ಕರೆಯುವುದಾದರೂ ಏನು ಅಗತ್ಯವಿತ್ತು?) (ಕಿರುಕುಳ ರಜೆ -ಗಾಳಿಪಟ) ರಾ.ಕು. ಪ್ರಬಂಧದ ಲಾಲಿತ್ಯದ ಲಾಸ್ಯವೇ ವಿಭಿನ್ನ ರೀತಿಯದು ಪುಟ್ಟ ಪುಟ್ಟ ವಾಕ್ಯಗಳು ತರ್ಕಬದ್ಧವಾಗಿ ಬಳಕೆಯಾಗಿವೆ. ಅವರ ಗದ್ಯ ಸಾಹಿತ್ಯದಲ್ಲಿ ಕಂಡುಬರುವ ಗಮನಾರ್ಹ ಅಂಶ ವಸ್ತು ನಿಷ್ಠ ಶೈಲಿಯ ವಿವರಣಾತ್ಮಕ ಗುಣ. ಪ್ರತಿಯೊಂದು ಘಟನೆಯನ್ನು ಸಾದ್ಯಂತವಾಗಿ ಅಲ್ಲಲ್ಲಿಯೇ ವಿವರಿಸಿ ಬಿಡುವುದು ಅವರ ಜಾಯಮಾನವಾಗಿದೆ.

ರಾ.ಕು. ಅವರ ಪ್ರಬಂಧಗಳಲ್ಲಿ ವಾಸ್ತವತೆಯ ಜೊತೆಗೆ ಸಹೃದಯತೆಯ ಮಿಡಿತವಿದೆ. ಸಣ್ಣ ಕತೆಯ ಓಟವಿದೆ. ನಿರೂಪಣೆಯಲ್ಲಿ ಅಚ್ಚುಕಟ್ಟುತನವಿದೆ. ಹೇಳಬೇಕಾದುದನ್ನು ನೇರವಾಗಿ ಸರಳವಾಗಿ ಹೇಳುತ್ತಾರೆ. ಅದಕ್ಕೆ ಒಂದು ನಿದರ್ಶನ ಹೀಗಿದೆ. "ಇದು ಒಣ ಹೆಮ್ಮೆಯೆಂದೂ, ತುಪ್ಪದ ಕುಡಿಕೆ ತೋರಿಸಿ ಒಣ ರೊಟ್ಟಿ ಕಡಿಯುವ ಜಿಪುಣನ ಜಾಣ್ಮೆಯೆಂದೂ ಕೆಲವರು ಹೇಳುತ್ತಾರೆ. ಇವರು "ಋಣಂಕೃತ್ವಾಘೃತಪಿಬ"ಕ್ಕೆ ಸೇರಿದವರು. ವರ್ಷದ ಕೊನೆಗೆ ಮುಳುಗಿ ಹೋಗುವ ಬಿಡುವಿನ ಅವಧಿಗೆ ಪುನರಾಗಮನವೆಲ್ಲಿ? ಅದು ಅಲ್ಲಿಗೇ ಭಸ್ಮೀಭೂತವಾಯಿತು. ಆದುದರಿಂದ ಹೀಗೆ ಉಳಿಸಿ ಉಳಿಸಿ ಅದನ್ನು ಅವಮರ್ಯಾದೆಯಿಂದ ಕಳುಹಿಸಿಬಿಡುವುದು ಪಶ್ಚಾತ್ತಾಪಕ್ಕೆ ಕಾರಣವಲ್ಲವೆ? ಇದನ್ನು ನಾನು

ಒಪ್ಪುತ್ತೇನೆ. ಹೊಟ್ಟೆ ಕಟ್ಟಿ ಅನ್ನ ಉಳಿಸುವುದು ಜಾಣತನದ ಲಕ್ಷಣವಲ್ಲ. ಆದರೆ ನಾಳೆಗೆ ಹಳಿಸಿಹೋದೀತೆಂದು ಇಂದಿಗೇ ಅದೆಲ್ಲವನ್ನೂ ತುತ್ತಿನ ಚೀಲಕ್ಕೆ ತುಂಬಿಕೊಳ್ಳಬಾರದು. ಅಧರಕ್ಕೆ ಸಿಹಿಯಾದದ್ದು ಉದರಕ್ಕೆ ಸಿಹಿಯಾದಾಗ ಊಟ ಮಾಡಿದ್ದಕ್ಕೂ ಸಾರ್ಥಕ. ಆದರೆ ಈ ನನ್ನ ದೃಷ್ಟಾಂತದ ಸೌಂದರ್ಯವನ್ನಾಗಲಿ, ತರ್ಕಶುದ್ಧತೆಯನ್ನಾಗಲಿ ಮೆಚ್ಚಬಲ್ಲವನನ್ನು ನಾನಿನ್ನೂ ಅರಸಬೇಕು. ರಜೆಯನ್ನು ಮಂಜೂರ್ ಅಥವಾ ನಾ ಮಂಜೂರ್ ಮಾಡುವ ಸ್ಥಾನದಲ್ಲಿ ನಾನಿಲ್ಲವಾದ್ದರಿಂದ ನನಗೆ ನೀವಾಗಲಿ ನಿಮಗೆ ನಾನಾಗಲಿ ಹೆದರಬೇಕಾಗಿಲ್ಲ. ಅಂತಹ ಅಪ್ರಿಯ ಅಧಿಕಾರವನ್ನು ನಾನು ಒಲ್ಲೆ. ರಜೆಯನ್ನು ನಾ ಮಂಜೂರ್ ಮಾಡುವವನು ನವಕರರ ಪ್ರಪ್ರಥಮ ವೈರಿ. ನವಕರರಿಗೂ ವರಿಷ್ಠರಿಗೂ ಜಗಳ ಹೆಚ್ಚುವುದಕ್ಕೆಂದೇ ರಜೆ ಹುಟ್ಟಿತು ಎಂದು ಕಾಣುತ್ತದೆ. ಕರ್ತುಮಕರ್ತುಮನ್ಯಥಾ ಕರ್ತುಂ-ಹೀಗೆ ಶಕ್ತ್ಯಯಂ ತಿಸ್ರಃ ಉಳ್ಳ ಈ ಪ್ರಭು ಬಹುಶಃ ಎಸ್ಪ್ರೊ ಗುಳಿಗೆಯ ಏಜೆಂಟ್ ಯಾ ಭಕ್ತನಾಗಿರುತ್ತಾನೆ. ಏಕೆಂದರೆ ಇವನಿಗೂ ಇವನ ಕೈಕೆಳಗಿನವರಿಗೂ ತಲೆಶೂಲೆ ಕಾಯಂ ರೋಗವಾಗಿರುತ್ತದೆ."[೩] ಹೀಗೆ ಕಿರುಕುಳ ರಜೆಯ ಕುರಿತು ಹಾಸ್ಯ ಚಿತ್ರಣವನ್ನು ಕಣ್ಣುಂದೆ ನಿಲ್ಲಿಸಿದ್ದಾರೆ. ಅಲ್ಲಿ ಬಂದಿರುವ ವಾಕ್ಯಗಳನ್ನು ಓದಿದರೆ ಗದ್ಯಶಕ್ತಿಯುತವಾಗಿದೆ. ಓದುಗರನ್ನು ಕೂಡಾ ಒಂದು ವಿಶೇಷ ಸೂಕ್ಷ್ಮತೆ ಸಿದ್ಧತೆಗೊಳಪಡಿಸಿ ಮುಂದುವರೆಯುವಂತೆ ಮಾಡುತ್ತದೆ.

ರಾ.ಕು. ಅವರ ಪ್ರಬಂಧಗಳ ಆರಂಭವನ್ನು ಓದುತ್ತಿರುವಂತೆಯೇ ಒಂದಕ್ಕಿಂತ ಹೆಚ್ಚು ಧ್ವನಿಗಳು ಒಂದು ವಿಶಿಷ್ಟವಾದ ಕ್ರಮದಲ್ಲಿ ಸಂಯೋಜನೆಯಾಗುತ್ತದೆ. ಓದುತ್ತ ಹೋದಂತೆ ಗದ್ಯ ಕ್ಷಣಾರ್ಧದಲ್ಲಿಯೇ ವಾಚಕರನ್ನು ಆಕರ್ಷಿಸುತ್ತದೆ. ಅದಕ್ಕೆ ಒಂದು ನಿದರ್ಶನ ಹೀಗಿದೆ. "ಈ ಪರೋಪಕಾರ ಬುದ್ಧಿ ನನಗೆ ಮೊದಲು ಇರುವುದಿಲ್ಲ. ಸಂಗತಿ ಜರುಗಿಹೋದ ಬಳಿಕ ನಾನು ಪರೋಪಕಾರಿಯಾದೆನೆಂಬುದು ತಿಳಿಯುತ್ತದೆ. ಈ ತಿಳಿವಳಿಕೆಯಿಂದ ಮೊದಮೊದಲು ನನಗೆ ಕಳವಳವಾಗುತ್ತಿತ್ತು. ಈಗ ರೂಢಿಯಾಗಿದೆ. ನನ್ನ ಕಣ್ಣಿನ ಬಗೆಗೊ, ಬುದ್ಧಿಯ ಬಗೆಗೆ ಅಥವಾ ಎರಡನ್ನೂ ಕುರಿತೊ ನೀವು ಈಗಾಗಲೇ ಒಂದು ಅಭಿಪ್ರಾಯಕ್ಕೆ ಬರತೊಡಗಿದ್ದೀರಿ. ನಾನು ಬಲ್ಲೆ - ನೀವು ತಪ್ಪಿದ್ದೀರಿ. ಇಂತಹ ನಾಣ್ಯಗಳನ್ನು ಗುರುತಿಸುವಲ್ಲಿ ನಾನು ಎತ್ತಿದ ಕೈ. ಎಷ್ಟೋ ಸಲ ನಡೆಯದ ನಾಣ್ಯಗಳನ್ನು ಆಗಿಂದಾಗಲೇ ಹೆಕ್ಕಿ ತೆಗೆದು, ಅವುಗಳ ಒಡೆಯರಿಗೆ ತಿರುಗಿ ಒಪ್ಪಿಸಿದ್ದೇನೆ. ಆದರೆ ಎಂತಹ ಎಚ್ಚರದಲ್ಲಿಯೂ ಒಂದು ತೂಕಡಿಕೆ ಬರುತ್ತದೆ. ಆ ಹೊತ್ತಿನಲ್ಲಿಯೇ ಟೊಪ್ಪಿಗೆ ತಲೆಗೆ ಬೀಳುವುದು. ಮರೆವು, ದೇಹಾಲಸ್ಯ, ಅವಸರ, ಆವೇಶದಲ್ಲಿ ಕವಿತೆಗೇ ಕುಂದು ಬರುವಾಗ ಒಂದು ಖೊಟ್ಟಿ ನಾಣ್ಯ ಕೈಗೆ ಬರುವುದು ಏನು ಸೋಜಿಗ? ರಾಘವಾಂಕ ಕವಿಯ ಅನೇಕ ಗುಣಗಳಲ್ಲಿ ಅವನ ತಪ್ಪು ಅಪ್ಪಿಕೊಳ್ಳುವ ಈ ಗುಣವನ್ನು ನಾನು ಬಲವಾಗಿ ಮೆಚ್ಚಿದ್ದೇನೆ. ವ್ಯವಹಾರದಲ್ಲಿ ಕಡೆತನಕ ಬಂದ ಲೇಸಿಂಗೆ ತಲೆದೂಗುತ್ತಾ ಇರುವ ಹೊತ್ತಿಗೆ ಯಾವನೊ ಒಬ್ಬ ಒಂದು ನಾಣ್ಯವನ್ನು ಎಡವಾಯಿಸಿ ಬಿಡುತ್ತಾನೆ. ನಡೆಯುವವನು ಎಡವಿ ಬೀಳುತ್ತಾನೆ. ನಡೆಯದ

ನಾಣ್ಯವನ್ನು ಇನ್ನೊಬ್ಬರ ಕೈಗೆ ನಡೆಯಿಸಿ ಬಿಡುವುದೆ ಬಹು ಕುಶಲವಾದ ಕಲೆ. ಎವರಸ್ಟ ಏರುವುದಕ್ಕಿಂತಲೂ ನಾಣ್ಯ ನಡೆಸುವುದು ಕಷ್ಟ ಕೆಲಸ. ನನ್ನ ಕೈಗೆ ಇಂತಹ ಸಂಪತ್ತು ಸೇರಿದ ಸಲಕ್ಕೊಮ್ಮೆ ನಾನು ಈ ಕಲಾವಿದನನ್ನು ಮೆಚ್ಚುತ್ತೇನೆ. ಸುಳ್ಳು ಹೇಳುವುದು ಸುಲಭವಾದೀತು. ಸಲ್ಲದ ಬದುಕನ್ನು ಸರಿಯೆಂದು ಸಾಧಿಸಿಕೊಡುವುದು ಸಲ್ಲವೆಂಬ ಸಂಶಯಕ್ಕೆ ಆಸ್ಪದಕೊಡದಿರುವುದು ಸಾಮಾನ್ಯವಾಗಿ ಸಿದ್ಧಿಯಲ್ಲ. ಎಂತಹ ಕಣ್ಣಲ್ಲಿಯೂ ಮಣ್ಣುಗ್ಗಬೇಕಾದರೆ ಈ ಖೊಟ್ಟಿ ನಾಣ್ಯದ ಕಲಾವಿದ ಎಂತಹ ಪ್ರವೀಣನಿರಬೇಡ! ಅವನು ಸಮಯ ನೋಡುತ್ತಾನೆ; ಗಿರಾಕಿಯನ್ನು ಗುರುತಿಸುತ್ತಾನೆ; ವೇಷ ತೊಡುತ್ತಾನೆ. ನಿಮ್ಮ ಕಣ್ಣಿಗೆ ಯಾವ ಅಂಜನ ಹಚ್ಚುತ್ತಾನೊ ಏನೋ - ಎಷ್ಟು ನಿರಾಯಾಸವಾಗಿ, ಸೊಗಸಾಗಿ ಸುಲಿಗೆ ಮಾಡಿ ಸಭ್ಯತೆಯ ಸೀಮೆಯಲ್ಲಿ ನುಸುಳಿ ಹೋಗುತ್ತಾನೆ. ಮರಳಿ ಮರಳಿ ಇವನ ಭೇಟಿ ಮಾಡಿದ ನನಗೆ ಈ ಕಲೆಯ ಎಷ್ಟೋ ಹಿಡಿತಗಳು ಮನದಟ್ಟಾಗಿವೆ. ಆದರೆ ಈ ಕಲಾವಿದ ತನ್ನ ವಿದ್ಯೆಯ ಇನ್ನಾವುದೊ ಬಹು ಮೂಲ್ಯವಾದ ಒಂದು ಗುಟ್ಟನ್ನು ಮಾತ್ರ ನನಗೆ ಬಿಟ್ಟುಕೊಟ್ಟಿಲ್ಲ. ಅದು ಒಳ್ಳೆಯದೆ ಎನ್ನಿ, ಅವನ ಸ್ವಾರ್ಥ ನನ್ನ ಸಜ್ಜನಿಕೆಯನ್ನು ಕಾದಿದೆ. ನನ್ನ ವಿದ್ಯೆಯನ್ನು ನನಗವನು ಕಲಿಸಲೊಲ್ಲ. ಒಬ್ಬ ಒಳ್ಳೆಯ ಗಿರಾಕಿಯನ್ನು ಕಳೆದುಕೊಳ್ಳುವ ಭಯ ಅವನನ್ನು ಬಾಧಿಸುತ್ತಿರಬೇಕು ಅವನ ದಂಧೆ ಮುಗ್ಗಿಸುವ ಉತ್ಸುಕತೆಯೂ ನನಗಿಲ್ಲ. ಆತ್ಮ ಸಂರಕ್ಷಣೆಯಷ್ಟೆ ನನಗೆ ಬೇಕು. ಅದು ಸಾಧ್ಯವೆಂದು ತೋರಿಲ್ಲ.”[೪]

ರಾ.ಕು. ಅವರ ಗಾಳಿಪಟ. ‘ದೇವಕನ್ಯೆಯ’ ಎರಡು ಪ್ರಬಂಧ ಸಂಗ್ರಹಗಳು ಪ್ರಬಂಧ ಸಾಹಿತ್ಯಕ್ಕೆ ಮೌಲಿಕ ಕೊಡುಗೆಗಳಾಗಿವೆ. ಗೊರೂರರ ಹಾಸ್ಯ ಬಂಧದಲ್ಲಿ ಭಾಷೆಗಿಂತ ವಸ್ತುವಿನ ಗಟ್ಟಿತನ ಪ್ರಮುಖ ವಾಗಿದ್ದು, ನಗೆಬುಗ್ಗೆ ಯನ್ನೆಬ್ಬಿಸಿದರೆ, ಎ.ಎನ್.ಮೂರ್ತಿರಾಯರಲ್ಲಿ ಭಾಷೆ-ವಸ್ತು ಎರಡರ ಸಮ ಸಂಯಮವಿದ್ದರೆ, ರಾ.ಕು.ಅವರಲ್ಲಿ ಎರಡೂ ಕಣ್ಣಿಗೆ ಬಡಯುವಷ್ಟು ವರ್ಣವೈವಿಧ್ಯದಿಂದ ಅವೇಶದಿಂದ ತುಂಬಿ ಹರಿಯುತ್ತವೆ. ಭಾಷೆಯನ್ನು ಫಲವತ್ತಾಗಿ ಮಾಡಲು ರಾ.ಕು. ಹಳೆಯ-ಹೊಸ ಕವಿವಾಣಿ, ಜನರ ಪ್ರಚಲಿತ ರೂಢಭಾವಗಳು, ಸಾಮಾನ್ಯ ವಿಚಾರಸರಣಿ ಇವೆಲ್ಲವನ್ನೂ ಒಂದು ವಿಚಿತ್ರ ಮಿಶ್ರಣದಲ್ಲಿ ವಿರುದ್ಧ ದಿಕ್ಕಿನಲ್ಲಿ ಬಳಸುತ್ತಾರೆ. ವಿಮರ್ಶೆ, ಅನುಕಂಪೆ, ಅಸಡ್ಡೆ, ಅತ್ಯುಕ್ತಿ ಎಲ್ಲ ಸ್ತರಗಳಲ್ಲಿ ವಿಚಾರ ಕೊಂಡಿಯನ್ನೂರಿ ವಿಷಯ ಪ್ರತಿಪಾದನೆ ಮಾಡುತ್ತಾನೆ. ಇಂಥದೊಂದು, ಸಂಕೀರ್ಣ ಭಾಷೆಯ ಸೃಷ್ಟಿ ರಾ.ಕು. ಅವರ ವೈಯಕ್ತಿಕ ಸಾಧನೆ ಎನ್ನಬಹುದು. ಒಮ್ಮೊಮ್ಮೆ ಸಂಯಮದ ಕಟ್ಟನ್ನು ಮೀರುವ ವಿಸ್ತಾರ : (ಬಹುಶ ಶ್ರೀ ರಂಗರ ಹರಟೆಗಳಿಂದ ಪ್ರಭಾವಿತರಾಗಿ) ಪ್ರಬಂಧಗಳಲ್ಲಿ ತಾವು ಎತ್ತುವ ಸಮಸ್ಯೆಗಳಿಗೆ ತಮ್ಮದೇ ಸಲಹೆಗಳನ್ನು ಪಟ್ಟಿಮಾಡಿಕೊಡುವ ಆವಾಹಕ-ವಿಸರ್ಜಕ ತಂತ್ರಗಳ ಬಳಕೆ ಈ ಎರಡು ಲೋಪಗಳನ್ನು ಮೀರಿಯೂ ಇವರ ಪ್ರಬಂಧಗಳು ಮನ ಸೆಳೆಯುತ್ತವೆ. ಗಟ್ಟಿಯಾದ ವ್ಯವಹಾರ ಜ್ಞಾನ, ವ್ಯಂಗ್ಯಪರತೆ, ವಚನಕಾವ್ಯಮಯತೆ, ಆಳವಾದ ಭಾಷಾಜ್ಞಾನ, ವಿರೋಧಗಳನ್ನು ಅರಗಿಸಿಕೊಳ್ಳುವ ಪ್ರವೃತ್ತಿ, ಇವೆಲ್ಲಕ್ಕಿಂತ ಹೆಚ್ಚಾಗಿ ಪುಟಿದೇಳುವ ಉತ್ಸಾಹ ಈ ಗುಣಗಳಿಂದ ತುಂಬಿಕಂಡ ಇವರ ಪ್ರಬಂಧಗಳು ಕನ್ನಡ ಪ್ರಬಂಧ ವಲಯಕ್ಕೆ ಒಂದು ಹೊಸಗಾಳಿಯನ್ನು ಚಮರಿಸಿವೆ.

ಇಂಥ ಪ್ರಬಂಧಗಳಲ್ಲಿ, ಮೆಚ್ಚಬೇಕಾದ ಮುಖ್ಯ ಗುಣ ಇಲ್ಲಿಯ ಒಂದು ಬಗೆಯ ನಿರಪೇಕ್ಷ, ಆರೋಪ ಧ್ವನಿರಹಿತ, ಆರೋಗ್ಯಪೂರ್ಣ ಆತ್ಮೀಯ ನಿಲುವು. ಇಂಥ ಒಂದು ಆರೋಗ್ಯಕರ ನಿಲುವು ಮಾತ್ರವೇ ಯಾವುದೇ ಒಂದು ಲಲಿತ ಪ್ರಬಂಧವನ್ನು ಸಫಲಗೊಳಿಸಬಲ್ಲವು. ಆತ್ಮೀಯಶೈಲಿ ಎಂದಾಗ ಇನ್ನೊಂದು ಅಂಶ ನೆನಪಾಗುತ್ತದೆ. ಓದುಗರು ಎದುರಿಗೇ ಕೂತಿದ್ದಾರೇನೋ ಎಂಬಂತೆ, 'ಪ್ರಿಯ ಓದುಗ' ಅಥವಾ 'ವಾಚಕ ಮಹಾಶಯ' ಎಂಬ ನೇರ ಸಂಬೋಧನೆಯ ಶೈಲಿ ನಮಗೆ ಅಪರಿಚಿತವೇನೂ ಅಲ್ಲ(ಗಳಗಾನಾಥರಿದ್ದಾರಲ್ಲ, ಹಿಂದೆ; ಈಗ ಶಂಕರ ಮೊಕಾಶಿ ಪುಣೇಕರರೂ ಇರುವರಲ್ಲ ನಮ್ಮ ಮಧ್ಯ!). ಹೀಗಾಗಿ ವಾಚಕರೊಂದಿಗೆ ನೇರವಾಗಿ ಮಾತನಾಡುವ ರೀತಿಯನ್ನು ತಮ್ಮ ಕೆಲ ಕಾದಂಬರಿಕಾರರು ಆಗಲೇ ರೂಢಿಸಿಕೊಂಡಿದ್ದರು. ಆದರೂ ಇಲ್ಲಿಯ ಲೇಖಕ ವಾಚಕರ 'ಮುಖಾಮುಖಿ'ಯ ಮಧ್ಯ, ಅದೇ ಪರಿಚಿತರಾದ ಇಬ್ಬರು ಸಭ್ಯಗೃಹಸ್ಥರ ಮಧ್ಯದಂತಹ ಒಂದು ವಿಶಿಷ್ಟ 'ಅಂತರ' ಇದ್ದೇ ಇರುತ್ತಿತ್ತು. ಮತ್ತು ಮುಖ್ಯವೆಂದರೆ, ಬಹಳಷ್ಟು ಸಲ, ಆ ಸಂಶೋಧನೆಯ ಮಟ್ಟಿಗೆ ಮಾತ್ರವೇ ಓದುಗನ 'ಉಪಸ್ಥಿತಿ'ಯನ್ನು ಅನುಲಕ್ಷಿಸಲಾಗುತ್ತಿತ್ತು. ನಂತರ ಲೇಖಕ ಲೇಖಕನೇ, ಓದುಗ ಓದುಗನೇ. ಹೀಗಾಗಿ, ಅನಂತರ ಇನ್ನಷ್ಟು ಅಗಲ ಮತ್ತು ಕಾಯಂ ಆದರೆ, ಈ 'ಅಂತರ'ವನ್ನು ತೆಗೆದುಹಾಕಿ ಓದುಗರನ್ನು ಆತ್ಮೀಯವಾಗಿ 'ಒಳಗೊಳ್ಳುವ' ಚಾತುರ್ಯವನ್ನು ಲಲಿತ ಪ್ರಬಂಧಕಾರರು ಸಾಧಿಸಿದರು. ಬದಿಯಲ್ಲಿ ಕೂಡಿಸಿಕೊಂಡೋ, ಹೆಗಲ ಮೇಲೆ ಕೈ ಹಾಕಿಯೋ, ಬೆನ್ನು ಚಪ್ಪರಿಸಿಯೋ ಅಥವಾ ಚಪ್ಪರಿಸಿಕೊಂಡೋ, ಕುಚೋದ್ಯಗೈದು, ರೇಗಿಸಿ, ನಗಿಸಿ, ನೂರು ನೋವು ನಲಿವು ಹೇಳಿಕೊಂಡು, ಒಮ್ಮೆ ತಮ್ಮ ತೀರ ಮೌಢ್ಯ, ದೌರ್ಬಲ್ಯ, ಅಸಹಾಯಕತೆಗಳನ್ನು ಕುರಿತು ಹೇಳುತ್ತಿರುವಂತೆಯೇ, ಒಮ್ಮೆಲೇ ತಮ್ಮ ಅಪಾರ ಮುಗ್ಧತೆ, ಸಾಚಾತನ, ಸಾಮರ್ಥ್ಯಗಳನ್ನು ಕುರಿತು ಕೂಡ ಮಾತನಾಡುತ್ತ; ಆದ, ಆಗದ, ಆಗಲಿರುವ, ಆಗುತ್ತಿರುವ, ಆಗಬಹುದಾದ, ಆಗಬಾರದ, ಆಗಲೇಬೇಕಾದ, ಆಗದಿರಲೇಬಾರದ ಎಲ್ಲವನ್ನು ಕುರಿತು ವಿಶ್ಲೇಷಿಸಿ, ವಿವರಿಸಿ, ಸೋದಾಹರಣವಾಗಿ, ಸಾದ್ಯಂತವಾಗಿ ದೈಹಿಕ 'ಭಂಗಿ'ಗಳನ್ನು ಬದಲಿಸಿದಂತೆ, ಆಗೀಗ, 'ಧ್ವನಿ'ಯ ಲಯವನ್ನು ಕಾಲಾನುಸಾರ ಬದಲಿಸುತ್ತ, ಇನ್ನೇನು ಹಿಡಿದೆ ಎಂಬಂತೆ ಒಟ್ಟಾರೆ ಓದುಗನನ್ನು ಪೂರ್ತಿಯಾಗಿ ಒಳಗೊಂಡ ಒಂದು ಆತ್ಮೀಯ 'ವಾತಾವರಣವನ್ನೇ' ಸೃಷ್ಟಿಸಿಬಿಡುತ್ತಾನೆ. ಲಲಿತ ಪ್ರಬಂಧಕಾರ.

ಓದುಗನ ಈ ಬಗೆಯ 'ಒಳಗೊಳ್ಳುವಿಕೆ'ಯಿಂದಾಗುವ ಒಂದು ಅತ್ಯಂತ ಮಹತ್ವದ ಪರಿಣಾಮವೆಂದರೆ, ಲೇಖಕನ 'ಅನುಭವ'ದಲ್ಲಿ ಬರಬರುತ್ತ ತನ್ನನ್ನೇ ಕಾಣತೊಡಗುವ, 'ಅನುಭವಿಸ' ತೊಡಗುವ ಓದುಗ, 'ಅರೆ, ನನಗೂ ಹೀಗೇ ಆಗಿತ್ತಲ್ಲ' ಅಥವಾ 'ಅರೆ, ನನಗೂ ಹೀಗೇ ಹೇಳುವ ದಿತ್ತಲ್ಲ', ಅಥವಾ 'ಹೀಗೇ ಮಾಡಬಹುದಿತ್ತಲ್ಲ', 'ಹೀಗೇ ಯೋಚಿಸಬಹುದಿತ್ತಲ್ಲ' ಈ ದಿಕ್ಕಲ್ಲಿಯೂ ನೋಡಬಹುದಿತ್ತಲ್ಲ ಎಂಬೆಲ್ಲ ಅನಿಸಿಕೆಗಳೊಂದಿಗೆ ಇಡಿಯ ನಿರೂಪಿತ ಅನುಭವದೊಂದಿಗೇ ಏಕತೆ

ಅಥವಾ ತಾದಾತ್ಮ್ಯ ಹೊಂದುವುದು. ಮುಖ್ಯವಾಗಿ ತತ್‌ಕ್ಷಣ ಪ್ರತಿಸ್ಪಂದಿಸುವುದು. ಈ ಅಂಶ ಲಲಿತ ಪ್ರಬಂಧಕಾರನ ದೊಡ್ಡ ಗೆಲುವಿನ ಮಜಲು. ಓದುಗನನ್ನು ನೇರವಾಗಿ, ಓದುಗ, ವಾಚಕ ಮಹಾಶಯ ಇತ್ಯಾದಿಯಾಗಿ ಸಂಬೋಧಿಸಿ, ಲಲಿತ ಪ್ರಬಂಧದಲ್ಲಿ ಮಾತನಾಡುವ ಶೈಲಿಯನ್ನೇ ಮುಂದುವರೆಸಿದರೂ ಅವರಲ್ಲಿಯೇ ಒಂದು ಲಲಿತ ಪ್ರಬಂಧಕ್ಕೆ ಅಗತ್ಯವಾದ 'ಆತ್ಮೀಯತೆ'ಯನ್ನೂ ಸಾಧಿಸಿದರು ಹಲವರು. ಅವರಲ್ಲಿ ಮುಖ್ಯರು ರಾ.ಕು ಅವರು. ಕನ್ನಡ ಲಲಿತ ಪ್ರಬಂಧಕ್ಕೆ ರಾ.ಕು ನಿರ್ಮಿಸಿಕೊಟ್ಟ, ವಿಸ್ತರಿಸಿಕೊಟ್ಟ ಆಯಾಮ ಬಹುಮುಖ್ಯವಾಗಿದೆ. ಲಲಿತ ಪ್ರಬಂಧಕ್ಕೆ ರಾ.ಕು ಮುಖ್ಯ ಮಾದರಿಯಾಗಿದ್ದಾರೆ.

ಅಡಿಟಿಪ್ಪಣಿಗಳು

೧. ಗಾಳಿಪಟ, ರಾ.ಕು., ಮನೋಹರ ಗ್ರಂಥಮಾಲೆ ಧಾರವಾಡ, ೧೯೬೦, ಪು.೧೨೫

೨. ಅದೇ, ಪು.೫೯

೩. ಅದೇ, ಪು.೩೮

೪. ಅದೇ, ಪು.೧೦೮

ಅಧ್ಯಾಯ ೬

ಸಮಾರೋಪ

೬

ಸಮಾರೋಪ

ಲಲಿತ ಪ್ರಬಂಧ ಸಾಹಿತ್ಯವು ಕನ್ನಡಕ್ಕೆ ಬಂದದ್ದು ನವೋದಯದ ಕಾಲದಲ್ಲಿ, ಪೌರಣಿಕ ವೀರರು ಸಂತರು ಅಲ್ಲದೆ ಸಾಮಾನ್ಯ ಮನುಷ್ಯರು ಅನುಭವಗಳು ಕಥನಗಳು, ಅನಿಸಿಕೆಗಳಿಗೂ ಸಾಹಿತ್ಯದಲ್ಲಿ ಅವಕಾಶ ದೊರೆತಾಗ ಕಟ್ಟುನಿಟ್ಟಾದ ನೈತಿಕ ವಿಮರ್ಶೆಯನ್ನು ಬದಿಗಿಟ್ಟು ಸಾಹಿತ್ಯ ಮನುಷ್ಯ ಸ್ವಭಾವದಲ್ಲಿ ಅದರ ವೈವಿಧ್ಯ, ವೈಚಿತ್ರ್ಯಗಳಲ್ಲಿ ಆಸಕ್ತಿಯನ್ನು ತಳೆಯುತ್ತದೆ. ಇದಕ್ಕೆ ಲಲಿತ ಪ್ರಬಂಧ ಸಾಹಿತ್ಯ ಪ್ರಕಾರವು ಒಂದು ಉತ್ತಮ ನಿದರ್ಶನವಾಗಿದೆ. ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೆ ಬಂಗಾಳಿಯ ಅನುವಾದದ ಮೂಲಕ ಬಂದಿತು. ನವೋದಯ ಕಾಲದಲ್ಲಿ ಬಂದ ಇನ್ನುಳಿದ ಸಾಹಿತ್ಯ ರೂಪಗಳೆಲ್ಲವಕ್ಕೂ ಒಂದು ಹೊರರೂಪ ಹಾಗೂ ಒಂದು ಸ್ಪಷ್ಟ ಚೌಕಟ್ಟು ಇರುವುದು ಸರ್ವೇಸಾಮಾನ್ಯ. ಆದರೆ ಈ ಲಲಿತ ಪ್ರಬಂಧ ಸಾಹಿತ್ಯ ಪ್ರಕಾರದಲ್ಲಿ ಸ್ಪಷ್ಟವಾದ ಒಂದು ಹೊರರೂಪ, ಒಂದು ಸ್ಪಷ್ಟ ಚೌಕಟ್ಟು ನಿರ್ದಿಷ್ಟವಾಗಿಲ್ಲ. ಭಾವಗೀತೆ, ಮಹಾಕಾವ್ಯ, ಸಣ್ಣಕಥೆ ಏಕಾಂಕನಾಟಕ, ಕಾದಂಬರಿ ಯಾವುದನ್ನು ಯೋಚಿಸಿದರೂ ಥಟ್ಟನೆ ನಮಗೊಂದು ಹೊಸಸ್ವರೂಪ ಗೋಚರಿಸುತ್ತದೆ. ಆದರೆ ಲಲಿತ ಪ್ರಬಂಧಪ್ರಕಾರಕ್ಕೆ ಖಚಿತವಾದ ಕಟ್ಟುನಿಟ್ಟಿನ ಕ್ರಮಗಳು ಗೋಚರಿಸುತ್ತಿಲ್ಲ. ಎತ್ತೆಂದರತ್ತ ಬೀಸುವ ಗಾಳಿಯಂತೆ ಸಾಗುತ್ತದೆ. ಇದುವೇ ಅದರ ವೈವಿಧ್ಯತೆಯೂ ಆಗಿದೆ. ಲಲಿತ ಪ್ರಬಂಧಕಾರನ ವ್ಯಕ್ತಿತ್ವವೇ ಪ್ರಬಂಧದ ಉಗಮ ಸ್ಥಾನವಾದ್ದರಿಂದ ಒಂದು ರೀತಿಯಾಗಿ ಅವನು ತನ್ನ ವ್ಯಕ್ತಿತ್ವದ ಬಹುಮುಖಗಳನ್ನು ಓದುಗರೊಡನೆ ಹಂಚಿಕೊಳ್ಳುವುದರಿಂದ ಅವನ ಸಾಹಿತ್ಯಿಕ ವ್ಯಕ್ತಿತ್ವವನ್ನೆ ಪ್ರಬಂಧದ ಸಾಧನೆಗಳು ಅವಲಂಬಿಸಿರುತ್ತವೆ. ಇದರಿಂದ ಅದಕ್ಕೆ ಒಂದು ಚೌಕಟ್ಟಿನ ಅವಶ್ಯಕತೆ ಇರದು. ಆಗ ಅದು ಲಲಿತವಾಗಿ ಬರಲು ಸಾಧ್ಯ. ಇಂಥ ಲಕ್ಷಣವುಳ್ಳ ಅನೇಕ ಕನ್ನಡ ಲಲಿತ ಪ್ರಬಂಧಗಳು ಕಂಡುಬರುತ್ತವೆ. ಹೀಗಾಗಿ ಕನ್ನಡ ಲಲಿತ ಪ್ರಬಂಧ ಸಾಹಿತ್ಯ ಒಂದು ಪ್ರಮುಖ ಸಾಹಿತ್ಯ ರೂಪವಾಗಿ ಬೆಳೆದು ನಿಲ್ಲಲು ಸಾಧ್ಯವಾಯಿತು.

ಕೇವಲ ಲಲಿತ ಪ್ರಬಂಧಗಳನ್ನಷ್ಟೇ ಬರೆದವರಲ್ಲಿ, ರಾ.ಕು. ಎದ್ದುಕಾಣುತ್ತಾರೆ. ಅವರ 'ಗಾಳಿಪಟ' 'ದೇವಕನ್ಯೆ' ವಿಮರ್ಶಕರ ಮೆಚ್ಚುಗೆಗೆ ಪಾತ್ರವಾದ ಪ್ರಬಂಧ ಸಂಕಲನಗಳು, ಇತ್ತೀಚಿಗೆ ಬಂದ ಅವರ 'ಶೇಷವಿಶೇಷ' ನಿಸ್ಸಂದೇಹವಾಗಿ ಅವರ ಚಿಂತನೆಯ ಪಕ್ವತೆಯನ್ನು ಸೂಚಿಸುತ್ತದೆ. ಸಂಸ್ಕೃತ, ಕನ್ನಡ ಮತ್ತು ಇಂಗ್ಲಿಷ್ ಭಾಷೆಯ ಮೇಲಿನ ಪ್ರಭುತ್ವ ಈ ಗುಣಗಳಿಂದಾಗಿ ಹಾಗೂ ವಿನೋದ ವಿಡಂಬನೆಗಳನ್ನು

ಸೂಕ್ತವಾಗಿ ಬಳಸುವ ಕೌಶಲ್ಯದಿಂದಾಗಿ ರಾ.ಕು. ಅವರ ಪ್ರಬಂಧಗಳು ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ಮೇಲ್ಪಂಕ್ತಿಯಲ್ಲಿ ನಿಲ್ಲುತ್ತವೆ ಎನ್ನುವುದು ಅಧ್ಯಯನದಿಂದ ನನಗೆ ಗೋಚರಿಸಿದೆ. ರಾ.ಕು.ಅವರ ಪ್ರಬಂಧಗಳು ವಿಷಯ ವೈವಿಧ್ಯತೆ, ಆಯಾವಿಷಯಗಳ ಬಗ್ಗೆ ಅವರಿಗಿರುವ ಆಳವಾದ ಜ್ಞಾನ ವಿಷಯ ನಿರೂಪಣೆ ಮತ್ತು ಬರೆಹದ ಶೈಲಿಯು ಅತ್ಯಂತ ವಿಶಿಷ್ಟ. ಇದಕ್ಕೆ ಕಾರಣ ಅವರ ವಿಶಾಲ ಓದು. ಅನುಪಮ ಜ್ಞಾಪಕಶಕ್ತಿ. ವಿಷಯ ವಿಶ್ಲೇಷಣಾ ಸಾಮರ್ಥ್ಯ ಮತ್ತು ಸಂದರ್ಭಕ್ಕೆ ತಕ್ಕುದಾದ ಅವತರಣಿಕೆಗಳನ್ನು ಉಪಯೋಗಿಸುವ ಕಲೆ. ಈ ಮೇಲಿನ ಎಲ್ಲ ಅಂಶಗಳನ್ನು ನಾನು ರಾ.ಕು. ಅವರ ಮೂರು ಲಲಿತ ಪ್ರಬಂಧಗಳಲ್ಲಿ ಬಹುಸ್ಪಷ್ಟವಾಗಿ ಕಂಡಿದ್ದೇನೆ. ರಾ.ಕು. ಕನ್ನಡದಲ್ಲಿ ಕುವೆಂಪು, ಬೇಂದ್ರೆ, ಎ.ಎನ್ .ಮೂರ್ತಿರಾಯರು ಹಾಗೂ ಹಲವಾರು ಇಂಗ್ಲಿಷ್ ಲೇಖಕರು ತಮಗೆ ಈ ರೀತಿಯಾದ ಕೃತಿಗಳನ್ನು ರಚನೆ ಮಾಡಲು ಸ್ಫೂರ್ತಿ ನೀಡಿದರು ಎಂದು ಹೇಳಿಕೊಂಡಿದ್ದಾರೆ. ಒಟ್ಟಾರೆ ರಾ.ಕು. ಅವರ ಈ ಎಲ್ಲ ಪ್ರಬಂಧಗಳು ಜೀವಂತ ಅನುಭವವನ್ನು ಒದಗಿಸುತ್ತವೆ ಎನ್ನುವುದು ನನಗೆ ಅಧ್ಯಯನದಿಂದ ತಿಳಿದುಬಂದಿದೆ. ಒಟ್ಟಾರೆ ನಿಬಂಧ ರಚನೆಯ ಶಿಲ್ಪದ ಹಿಂದಿನ ಆಶಯವನ್ನು ಈ ಕೆಳಗಿನಂತೆ ಗ್ರಹಿಸಬಹುದಾಗಿದೆ.

೧. ರಾ.ಕು. ಅವರಂಥ ಒಬ್ಬ ಪ್ರಬುದ್ಧ ಶ್ರೇಷ್ಠ ಸಾಹಿತಿಯನ್ನು ನನ್ನ ಅಧ್ಯಯನಕ್ಕೆ ಆಯ್ದುಕೊಂಡಿರುವುದರಿಂದ ನನಗೆ ಅತಿವ ಸಂತಸವಾಗಿದ್ದು, ಕನ್ನಡ ಲಲಿತ ಪ್ರಬಂಧ ಸಾಹಿತ್ಯಕ್ಕೆ ಪರೋಕ್ಷ ಹಾಗೂ ನೇರವಾಗಿ ವಿಶಿಷ್ಟವು ಅಮೂಲ್ಯವು ಆದ ಕೊಡುಗೆಯನ್ನು ನೀಡಿ ಈ ಪ್ರಕಾರದ ಸಾಹಿತ್ಯ ಪ್ರಪಂಚದಲ್ಲಿ ಗುರುತಿಸಿಕೊಳ್ಳದೆ, ಎಲೆಮರೆಯ ಕಾಯಿಯಂತೆ ಇರುವ ರಾ.ಕು. ಅವರನ್ನು, ಸಾಹಿತ್ಯ ಕೃತಿಗಳನ್ನು ನಾನು ನನ್ನ ಅದ್ಯಯನಕ್ಕೆ ಒಳಪಡಿಸಿ ಅವುಗಳಲ್ಲಿರುವ ಮೌಲ್ಯಯುತವಾದ ಸಾಹಿತ್ಯಿಕ, ಸಾಂಸ್ಕೃತಿಕ ಅಂಶಗಳನ್ನು ಪ್ರಸ್ತುತ ಅಧ್ಯಯನಕಾರರಿಗೆ ವಿಷದಪಡಿಸಿದ್ದೇನೆ.

೨. ಕನ್ನಡ ಲಲಿತ ಪ್ರಬಂಧಕಾರರಲ್ಲಿ ಎ.ಎನ್.ಮೂರ್ತಿರಾಯರು ದಿಗ್ಗಜರೆಂದು ಕನ್ನಡದ ವಿವಿಧ ವಿಮರ್ಶಕರು ಹೇಳಿದ್ದಾರೆ. ಆದರೆ, ರಾ.ಕು. ಅವರ 'ಗಾಳಿಪಟ' ದೇವಕನ್ಯೆ 'ಶೇಷವಿಶೇಷ' ಎಂಬ ಮೂರು ಲಲಿತ ಪ್ರಬಂಧ ಕೃತಿಗಳನ್ನು ವಿವಿಧ ಮಗ್ಗಲುಗಳಿಂದ ಸಂಪೂರ್ಣವಾಗಿ ಹಾಗೂ ವಿವರಣಾತ್ಮಕ, ವಿಮರ್ಶಾತ್ಮಕವಾಗಿ ಅವರ ಲಲಿತ ಪ್ರಬಂಧಗಳ ವಿಷಯವಸ್ತು, ಭಾಷೆ, ಸಾಮಾಜಿಕಾಂಶ, ಸಾಂಸ್ಕೃತಿಕ ಅಂಶ ಮುಂತಾದ ವಿಶೇಷ ಸಂಗತಿಗಳನ್ನು ನಾನು ಕೂಲಂಕುಶವಾಗಿ ಅಧ್ಯಯನಮಾಡಿ ಎ.ಎನ್.ಮೂರ್ತಿರಾಯರ ಪ್ರಭಾವ ರಾ.ಕು. ಅವರ ಮೇಲೆ ಆಗಿದ್ದರೂ ರಾ.ಕು. ಪ್ರಬಂಧಗಳು ತಮ್ಮದೇ ಆದ ವಿಶಿಷ್ಟತೆಯನ್ನು ಹೊಂದಿವೆ ಎಂಬುದನ್ನು ಕಂಡುಕೊಂಡಿದ್ದೇನೆ(ಉದಾ. ಸ್ಥಳೀಯ ಗ್ರಾಮೀಣ ಪರಿಸರದ ಜನಸಾಮಾನ್ಯ ವಿಷಯ ವಸ್ತುವಿನ ಆಯ್ಕೆ). ಎ.ಎನ್.ಮೂರ್ತಿರಾಯರ ಲಲಿತ ಪ್ರಬಂಧಗಳನ್ನು ರಾ.ಕು.ಅವರ ಪ್ರಬಂಧಗಳೊಂದಿಗೆ ತೌಲನಿಕವಾಗಿ ವಿವೇಚಿಸಿದಾಗ ಎ.ಎನ್.ಮೂರ್ತಿ ರಾಯರಿಗಿಂತ ವೈವಿಧ್ಯಮಯವಾದ ಲಲಿತ ಪ್ರಬಂಧಗಳನ್ನು ನೀಡಿರುವುದು ಕಂಡುಬರುತ್ತದೆ.

೩. ರಾ.ಕು. ಅವರ ಬದುಕು ಯುವ ಪೀಳಿಗೆಗೆ ಮಾರ್ಗದರ್ಶಕವಾಗಿದೆ. ಅವರ ಜನನ, ಬಾಲ್ಯಜೀವನ ಶಿಕ್ಷಣ, ನಿವೃತ್ತಿಯ ನಂತರದ ಬದುಕು ಲಲಿತ ಪ್ರಬಂಧ ಸಾಹಿತ್ಯದ ಕಡೆಗೆ ಅವರ ಒಲವು ಹರಿದ ಬಗೆ, ಅತ್ಯಮೂಲ್ಯವಾದ ಘಟನೆಗಳನ್ನು ಇಲ್ಲಿ ವಿವರಿಸಿದ್ದೇನೆ. ರಾ.ಕು. ಬಾಲ್ಯದಲ್ಲಿರುವಾಗ ಅವರಿಗೆ ಬಡತನ ಎಂಬ ಭೂತವು ಬೆಂಬತ್ತಿತ್ತು. ಹಾಗೆ ರಾ.ಕು. ಅವರ ಅಜ್ಜನ ಪಟ್ಟಣ ಬದುಕಿನ ವಿರೋಧಿ ಧೋರಣೆಯ ಹಠಮಾರಿತನ ರಾ.ಕು ಅವರು ಕೆಲವು ಶೈಕ್ಷಣಿಕ ವರ್ಷಗಳನ್ನು ಕಳೆದುಕೊಳ್ಳುವಂತೆ ಮಾಡಿತು. ಆದರೂ ಧೃತಿಗೆಡದ ರಾ.ಕು. ಪ್ರತಿಭಾವಂತರಾಗಿದ್ದರಿಂದ ಶಾಲೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುತ್ತಿದ್ದರು. ಹಾಗೆಯೇ ಬಡತನವು ಅವರನ್ನು ಶಾಲೆಗೆ ಸೇರಿಸಲಾಗದಷ್ಟು ಕಾಡತೊಡಗಿತು. ಆದರೆ ಶಾಲೆಯಲ್ಲಿ ಪ್ರತಿಭಾವಂತರಿಗೆ ಕೊಡಮಾಡುವ ಶಿಷ್ಯವೇತನವನ್ನು ಪಡೆದು ಶಾಲಾ ಫೀ ತುಂಬಿ ತಮ್ಮ ಜೀವನದ ಮಹತ್ವಾಕಾಂಕ್ಷೆಯ ಉನ್ನತ ಶಿಕ್ಷಣದವರೆಗೂ ಶಿಕ್ಷಣವನ್ನು ಪಡೆದ ರೀತಿಯಂತು ಇಂದಿನ ಯುವ ಪೀಳಿಗೆಗೆ ಆದರ್ಶಪ್ರಾಯವೇ ಆಗಿದೆ. ನೌಕರಿಗಾಗಿ ಪ್ರತಿಷ್ಠಿತರ ಬೆಂಬಲವಿಲ್ಲದೆ ವಿವಿಧ ರೀತಿಯಲ್ಲಿ ಪ್ರಯತ್ನ ಮಾಡಿ ಉತ್ತಮ ಶಿಕ್ಷಕರಾಗಿ, ಸಾಹಿತ್ಯ ಪರಿಷತ್‌ನವರು ಕೈಗೊಂಡಿದ್ದ 'ಕನ್ನಡ-ಕನ್ನಡ' ನಿಘಂಟು ರಚನಾ ಸಮಿತಿಯ ಉಪಸಂಪಾದಕರಾಗಿ ಸೇವೆ ಮಾಡಿದ ಇವರ ಸಾಧನೆ ನಿಜಕ್ಕೂ ಆದರ್ಶಪ್ರಾಯವೇ ಸರಿ.

೪. ಕನ್ನಡ ಸಾಹಿತ್ಯ ಲೋಕದಲ್ಲಿ ಲಲಿತ ಪ್ರಬಂಧ ಸಾಹಿತ್ಯವು ಒಂದು ಪ್ರಬುದ್ಧ ಸಾಹಿತ್ಯವಾಗಿ ಬೆಳೆದು ಬರುವಲ್ಲಿ ಅನೇಕ ಮಹಾನ ಲಲಿತ ಪ್ರಬಂಧಕಾರರ ಕೊಡುಗೆ ಶ್ಲಾಘನೀಯವಾದದ್ದು. ಗದ್ಯರೂಪದ ಭಾವಪ್ರಧಾನವಾದ ಈ ಸಾಹಿತ್ಯ ಪ್ರಕಾರ ಆರಂಭ ಕಾಲಘಟ್ಟದಲ್ಲಿ ಸಾಹಿತ್ಯದ ಚೌಕಟ್ಟಿಗೆ ಒಳಪಡಬಹುದೇ ಎಂಬಷ್ಟು ಸಂದಿಗ್ಧತೆಯಲ್ಲಿತ್ತು. ನಂತರ ಜನಪ್ರಿಯವು ಆಯಿತು. ಬಿ.ವೆಂಕಟಾಚಾರ್ಯ, ವಿ.ಸೀತಾರಾಮಯ್ಯ ಗೋವಿಂದಪೈ, ಜಿ.ವೆಂಕಟೇಶಯ್ಯ, ಗೊರೂರು ರಾಮಸ್ವಾಮಿ, ಎ.ಎನ್. ಮೂರ್ತಿರಾಯರುಗಳಂಥ ಇನ್ನು ಹಲವು ಲೇಖಕರ ಪರಿಶ್ರಮದಿಂದಾಗಿ ಈ ಲಲಿತ ಪ್ರಬಂಧ ಸಾಹಿತ್ಯವು ಕನ್ನಡದಲ್ಲಿ ಅತ್ಯಂತ ಸಮೃದ್ಧವಾಗಿ ಬೆಳೆದು ವಿದ್ವಾಂಸರ ಅಧ್ಯಯನಕಾರರ ಗಮನ ಸೆಳೆಯಿತು. ಅಂಥವರಲ್ಲಿ ಕೇವಲ ಲಲಿತ ಪ್ರಬಂಧಗಳನ್ನು ಮಾತ್ರವೇ ರಚಿಸಿದ ರಾ.ಕು. ಅವರು ಕೂಡಾ ತಮ್ಮ ಬೆರಳೆಣಿಕೆಯ ಕೃತಿಗಳಿಂದಲೇ ಲಲಿತ ಪ್ರಬಂಧ ಕ್ಷೇತ್ರದಲ್ಲಿ ತಮ್ಮ ಛಾಪನ್ನು ಮೂಡಿಸಿದ್ದಾರೆ. ನವೋದಯ ಕಾಲದಲ್ಲಿ ಅತ್ಯಂತ ಪ್ರಬುದ್ಧವಾಗಿ ಬೆಳೆದ ಲಲಿತ ಪ್ರಬಂಧ ಕ್ಷೇತ್ರ. ನವ್ಯದಲ್ಲಿ ಸೊರಗಿಹೋಯಿತು. ಆದರೆ ಮುಂದೆ ನವೋದಯದ ಲಕ್ಷಣವನ್ನು ಸ್ವೀಕರಿಸಿದ ದಲಿತ ಬಂಡಾಯ ಕಾಲದಲ್ಲಿ ಮತ್ತೆ ಈ ಪ್ರಕಾರವು ಬೆಳೆಯಿತು. ಈ ಹಿನ್ನೆಲೆಯಲ್ಲಿ ನಾನು ಸಂಶೋಧಕನಾಗಿ ಎರಡು ಬಹುಮುಖ್ಯ ಅಂಶಗಳನ್ನು ಈ ಅಧ್ಯಯನದಲ್ಲಿ ಕಂಡುಕೊಂಡಿದ್ದೇನೆ.

೧. ಪ್ರಬಂಧ ರಚನೆಯ ಶೈಲಿಯ ಕುರಿತಾಗಿ ಎ.ಎನ್ .ಮೂರ್ತಿರಾಯರ ಹಾಗೂ ಕುವೆಂಪು, ಕಾರಂತರ ಸಾಹಿತ್ಯ ಸಮಿಶ್ರಣ ಶೈಲಿಯನ್ನು ರಾ.ಕು. ಅವರಲ್ಲಿ ಕಂಡುಕೊಂಡಿದ್ದೇನೆ. 'ಲಲಿತ ಗಂಭೀರ' ಎಂಬ ರಚನಾ ಶೈಲಿಯ ಜನಕನೆಂದು ನನಗೆ ನನ್ನ ಅಧ್ಯಯನದಿಂದ ತಿಳಿದುಬಂದಿದೆ.

೨. 'ಸ್ತ್ರೀವಾದಿ ಪರಂಪರೆಯನ್ನು ಲಲಿತ ಪ್ರಬಂಧದಲ್ಲಿ ನಾನು ನನ್ನ ಅಧ್ಯಯನದ ಬಹುಮುಖ್ಯ ಫಲಿತವೆಂದು ಹೇಳುವುದರ ಜೊತೆಗೆ ಮುಂದೆ ಬರುವ ಸಂಶೋಧಕರಿಗೆ ಇದರ ಕಡೆಗೆ ಹೆಚ್ಚಿನ ಗಮನ ಹರಿಸುವಂತೆ ಈ ಅಧ್ಯಯನದಲ್ಲಿ ವಿವೇಚಿಸಿದ್ದೇನೆ.

೫. ಸಾಂಸ್ಕೃತಿಕ ಹಾಗೂ ಸಾಮಾಜಿಕ ಆಯಾಮಗಳನ್ನು ರಾ.ಕು. ಪ್ರಬಂಧಗಳ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಚರ್ಚಿಸಲಾಗಿ, ರಾ.ಕು. ಹೆಚ್ಚು ಪ್ರಚಲಿತ ಸಾಮಾಜಿಕ ಸಮಸ್ಯೆಗಳಾದ 'ದಾರಿದ್ರ್ಯ, ಮೂಢನಂಬಿಕೆ, ವರ್ಣಭೇದ, ವಸಾಹತುಶಾಹಿ ಪ್ರೇರಣೆ, ಕೌಟುಂಬಿಕ ನೆಲೆಯಲ್ಲಿ ಕಂಡುಬರುವ ಕೆಲವು ಸೂಕ್ಷ್ಮ ವಿಚಾರಗಳು ವಿಶೇಷವಾಗಿ ಸಮಾಜದಲ್ಲಿನ ತತ್ ಕ್ಷಣದ ವ್ಯವಸ್ಥೆಯನ್ನು ಕುರಿತು ಹೇಳುವುದರೊಂದಿಗೆ ಇಂದಿನ ಯುವ ಪೀಳಿಗೆಗೆ ರಾ.ಕು. ಅವರು ತಮ್ಮ ಮೂರು ಪ್ರಬಂಧ ಕೃತಿಗಳಲ್ಲಿಯು ನೀತಿ ಬೋಧನೆಯನ್ನು ಬಹು ಪ್ರಬಲವಾಗಿ ಬೋಧಿಸಿದ್ದಾರೆ. ಸಮಾಜಕ್ಕೆ ಅಹಿತ ಚಟುವಟಿಕೆಗಳಾದ ಭಯೋತ್ಪಾದನೆ, ಧೂಮಪಾನ, ಜೂಜಾಟ ಭ್ರಷ್ಟಾಚಾರಗಳಂಥ ವಿಷಯಗಳಿಂದ ಇಂದಿನ ನಮ್ಮ ಯುವ ಪೀಳಿಗೆ ನಮ್ಮ ಬದುಕನ್ನು ಹಾಳುಮಾಡಿಕೊಳ್ಳುತ್ತಿರುವುದನ್ನು ತಮ್ಮ ನೀತಿ ಬೋಧನೆಯ ಲಲಿತ ಪ್ರಬಂಧಗಳ ಮೂಲಕ ವಿಡಂಬಿಸಿದ್ದಾರೆ.

೬. ರಾ.ಕು. ಉತ್ತರ ಕರ್ನಾಟಕದವರಾದ ಕಾರಣ ಅವರ ರಚನೆಗಳಲ್ಲಿ ಪ್ರಾದೇಶಿಕ ಭಾಷೆಯು ಸೊಬಗಿನಿಂದ ಕೂಡಿದ್ದು, ಇವರು ಸಂದರ್ಭಕ್ಕೆ ತಕ್ಕಂತೆ ಆಡುಭಾಷೆಯನ್ನು ವ್ಯವಹಾರಿಕ ಶಿಷ್ಟ ಭಾಷೆಯನ್ನು ಧಾರಾಳವಾಗಿ ತಮ್ಮ ಲಲಿತ ಪ್ರಬಂಧಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅದುವೇ ಒಬ್ಬ ಲಲಿತ ಪ್ರಬಂಧಕಾರನ ಜೀವಾಳವಾಗಿದೆ. ರಾ.ಕು. ತಮ್ಮದೇ ಆದ ಭಾಷೆ ಅನನ್ಯತೆಯನ್ನು ಬಿಂಬಿಸಿದ್ದಾರೆ ಎಂಬಂಶವನ್ನು ನನ್ನ ಅಧ್ಯಯನದಲ್ಲಿ ಗುರುತಿಸಲಾಗಿದೆ. ರಾ.ಕು. ಅವರು ತಮ್ಮ ಪ್ರಬಂಧಗಳ ಉದ್ದಕ್ಕೂ ಕಾವ್ಯಮಯವಾದ ಪಂಕ್ತಿಗಳನ್ನು ಅತ್ಯಂತ ಮಹತ್ವಪೂರ್ಣವಾಗಿ ಬಳಸಿದ್ದು, ಅನುಕರಣ ವಾಚಕಗಳು, ಪ್ರಬಂಧಗಳ ಕಾವ್ಯ ಸೌಂದರ್ಯಕ್ಕೆ ಪೂರಕವಾಗುತ್ತವೆ. ರಾ.ಕು. ಅವರು ಸಂದರ್ಭಕ್ಕೆ ತಕ್ಕಂತೆ ದ್ವಿರುಕ್ತಿಗಳನ್ನು, ಪ್ರತಿಮೆ, ಉಪಮೆಗಳನ್ನು ಸಹಿತ ಬಳಸುತ್ತಾರೆ. ಇವರು ಬಳಿಸಿದ ಕೆಲವು ಪದಗಳು ಕನ್ನಡದ ಯಾವ ನಿಘಂಟಿನಲ್ಲಿಯೂ ದಾಖಲಿಲ್ಲ ಎಂಬುವುದು ಗಮನಾರ್ಹವಾದ ಸಂಗತಿ. ಇಂಥ ಶಬ್ದಗಳ ಅರ್ಥವನ್ನು ಗ್ರಹಿಸಿ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ್ದೇನೆ. ಸಾಹಿತ್ಯೀಕರಿಸಿದ ಕ್ರಮ, ವ್ಯಂಗ್ಯ ವಿಡಂಬನೆ, ತರ್ಕ, ಕಟೋಕ್ತಿ, ಸಮಂಜನ ಹಾಸ್ಯ ಸಮೀಕರಣ, ಹಳಗನ್ನಡದ ಕಾವ್ಯೋಕ್ತಿಗಳನ್ನು ಅತ್ಯಂತ ಪೂರಕವಾಗಿ, ವ್ಯವಸ್ಥಿತವಾಗಿ ಬಳಸಿಕೊಳ್ಳುವಿಕೆ, ನಿರೂಪಣಾ ಶೈಲಿ ಮೊದಲಾದ ವೈವಿಧ್ಯಮಯ ಭಾಷಾಂಶಗಳನ್ನು ಕುರಿತು ಪ್ರಸ್ತುತ ನಿಬಂಧದಲ್ಲಿ ಚರ್ಚಿಸಲಾಗಿದೆ.

ಅನುಬಂಧಗಳು

೧. ರಾ.ಕು.ಅವರ ಜೀವನದ ಮುಖ್ಯ ಘಟನೆಗಳು

೨. ರಾ.ಕು.ಅವರ ಪ್ರಬಂಧಗಳ ಬಗೆಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳು

೩. ರಾ.ಕು.ಅವರ ಕೃತಿಸೂಚಿ

೪. ರಾ.ಕು.ಅವರ ವಂಶಾವಳಿ

೫. ಪರಾಮರ್ಶನ ಗ್ರಂಥಗಳು

ಅನುಬಂಧ ೧

ರಾ.ಕು. ಅವರ ಜೀವನದ ಮುಖ್ಯ ಘಟನೆಗಳು

ರಾ.ಕು	:	ರಾಮಚಂದ್ರ ಕುಲಕರ್ಣಿ
೪-೧-೧೯೧೮	:	ಧಾರವಾಡ ಜಿಲ್ಲೆಯ ಹುಬ್ಬಳ್ಳಿಯಲ್ಲಿ ಜನನ. ತಂದೆ : ವೆಂಕಟೇಶ, ತಾಯಿ : ಯಮುನಾಬಾಯಿ
೧೯೨೪-೩೧	:	ಪ್ರಾಥಮಿಕ ಶಿಕ್ಷಣ ಗದಗ
೧೯೩೧	:	ಪ್ರೌಢಶಿಕ್ಷಣ ಗದಗ
೧೯೪೨	:	ಸಾಂಗ್ಲಿಯ ವಿಲ್ಲಿಂಗ್ಡನ್ ಕಾಲೇಜಿನಿಂದ ಬಿ.ಎ. ಆನರ್ಸ ಪದವಿ. ಇಲ್ಲಿ ಇಂಗ್ಲಿಷ್ ವಿಭಾಗದ ಕಾರ್ಯದರ್ಶಿ.
೧೯೪೩	:	ಸಾಂಗ್ಲಿಯಲ್ಲಿ ವಿಲ್ಲಿಂಗ್ಡನ್ ಕಾಲೇಜನಲ್ಲಿ ಒಂದು ವರ್ಷ ಟ್ಯೂಟರ್ ಆಗಿ ನೇಮಕ
೧೯೪೪	:	ಬಳ್ಳಾರಿ ಜಿಲ್ಲೆಯ ಸಂಡೂರಿನ ಹೈಸ್ಕೂಲಿನಲ್ಲಿ ಶಿಕ್ಷಕರಾಗಿ ಒಂದು ವರ್ಷ ಸೇವೆ.
೧೯೪೫	:	ಧಾರವಾಡದ ಕೆ.ಇ.ಬೋರ್ಡ್ಸ್ ಸಂಸ್ಥೆಯ ವಿದ್ಯಾರಣ್ಯ ಶಾಲೆಯಲ್ಲಿ ಶಿಕ್ಷಕರಾಗಿ ಸೇವೆ ಜೊತೆಯಲ್ಲಿ ಉನ್ನತ ಶಿಕ್ಷಣ.
೧೯೪೫	:	ಮುಂಬಯಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿನ ಆಗೀನ ಧಾರವಾಡ ಸ್ನಾತಕೋತ್ತರ ಕೇಂದ್ರದಿಂದ ಎಂ.ಎ. ಪದವಿಯನ್ನು, 'ಕನ್ನಡ ಮತ್ತು ಸಂಸ್ಕೃತ' ವಿಷಯದಲ್ಲಿ.
೧೯೪೫	:	ಅಬ್ಬಿಗೇರಿಯ ಸೀತಾಬಾಯಿ ಜೊತೆ ವಿವಾಹ
೧೯೪೬	:	ಕೊಲ್ಹಾಪುರದ ಪ್ರಾಚ್ಯಶಾಸ್ತ್ರ ಇಲಾಖೆಯಲ್ಲಿ ಸಂಶೋಧಕರಾಗಿ ಸೇವೆ.
೧೯೪೭	:	ಮೊದಲ ಮಗನ ಜನನ
೧೯೪೮	:	ಮೊದಲ ಮಗನ ಮರಣ (ಒಂದು ವರ್ಷದಲ್ಲಿ)
೧೯೪೯	:	ಹಾವೇರಿಯ ಮುನ್ಸಿಪಲ್ ಹೈಸ್ಕೂಲಿಗೆ ಕನ್ನಡ, ಇಂಗ್ಲಿಷ್ ಶಿಕ್ಷಕರಾಗಿ ನೇಮಕ, ಸೇವೆ ಪ್ರಾರಂಭ.
೧೦-೦೪-೧೯೫೧	:	ಮಗಳು ಶೋಭಾ ಜನನ
೧೯೫೨	:	ಕರ್ನಾಟಕ ವಿಶ್ವವಿದ್ಯಾಲಯದಿಂದ ಬಿ.ಇಡಿ. ಪದವಿ
೧೯-೧೦-೧೯೫೩	:	ಮಗ ಚಂದ್ರಕಾಂತ ಜನನ
೨೮-೨-೧೯೫೫	:	ಮಗ ರಾಜೀವನ ಜನನ
೧-೦೬-೧೯೫೮	:	ಎರಡನೆ ಮಗಳು ಜಯಶ್ರೀ ಜನನ

೩೦-೦೪-೧೯೬೦ : ಮಗ ಸೋಮನಾಥನ ಜನನ

೧೯೬೦ : ಪ್ರಪಥಮ ಪ್ರಬಂಧ ಸಂಕಲನ ‘ಗಾಳಿಪಟ’ ಮನೋಹರ ಗ್ರಂಥಮಾಲೆ ಧಾರವಾಡದಿಂದ ಪ್ರಕಟ

೧೮-೧೦-೧೯೬೨ : ಮಗ ಗಿರೀಶನ ಜನನ

೩೦-೦೪-೧೯೬೩ : ಕೊನೆಯ ಮಗ ದತ್ತಾತ್ರೇಯನ ಜನನ

೧೯೬೭ : ಕನ್ನಡ-ಕನ್ನಡ ನಿಘಂಟಿನ ಕಾರ್ಯಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರಿಗೆ ಪಯಣ

೧೯೭೦ : ಗಾಳಿಪಟ ಐದನೆಯ ಮುದ್ರಣ

೧೯೭೦ : ‘ದೇವಕನ್ಯೆ’ ಪ್ರಬಂಧ ಸಂಕಲನ’ ಪ್ರಕಟ ಲೋಟಸ್ ಪ್ರಿಂಟರ್ಸ್ ಬೆಂಗಳೂರು

೧೯೭೫ : ಕನ್ನಡ ನಿಘಂಟು ಉಪಸಂಪಾದಕರಾಗಿ ನೇಮಕ

೧೯೭೫ : ಸರಕಾರಿ ನಿಯಮದಂತೆ ಅಧಿಕೃತ ನಿವೃತ್ತಿ ಆದೇಶ

೧೯೭೫ : ನಿಘಂಟು ರಚನಾ ಮಂಡಳಿಯ ಪ್ರಧಾನ ಸಂಪಾದಕರಾದ ಜಿ.ವೆಂಕಟಸುಬ್ಬಯ್ಯನವರ ಆಗ್ರಹದ ಮೇರೆಗೆ ನಿಘಂಟಿನ ಕಾರ್ಯಕ್ಕೆ ಮತ್ತೆ ದಿನಗೂಲಿಯಾಧಾರದ ಮೇಲೆ ಮರು ನೇಮಕ.

೦೪-೦೫-೧೯೮೩ : ರಾ.ಕು. ಅವರ ಧರ್ಮಪತ್ನಿ ಸೀತಾಬಾಯಿ ಬ್ರೇನ್ ಹೆಮರೆಜ್ ನಿಂದ ನಿಧನ.

೧೯೮೫ : ನಿಘಂಟು ರಚನಾ ಮಂಡಳಿಯಿಂದ ಸಂಪೂರ್ಣವಾಗಿ ನಿವೃತ್ತಿ. ಇದೇ ವರ್ಷ ಮರಳಿ ಮತ್ತೆ ಹಾವೇರಿಯತ್ತ ಪಯಣ. ಸಾಹಿತ್ಯ ಕೃಷಿಯಲ್ಲಿ ಚಿಂತನೆ.

೧೯೯೯ : ಮೂರನೆಯ ಲಲಿತ ಪ್ರಬಂಧ ಸಂಕಲನ. ‘ಶೇಷವಿಶೇಷ’ ಪ್ರಕಟ. ತಾಲೂಕ ಕನ್ನಡ ಸಾಹಿತ್ಯ ಪರಿಷತ್ ಹಾವೇರಿ, ರಾ.ಕು ಅಭಿಮಾನಿಗಳ ಬಳಗ ಮತ್ತು ಶಿಷ್ಯವೃಂದ

೧೯೯೯ : ಸಿಂದಗಿಯ ಅಂಬಿಕಾತನಯದತ್ತ ವೇದಿಕೆಯವರು ಕೊಡ ಮಾಡುವ ಬೇಂದ್ರೆ ಸ್ಮಾರಕ ಪ್ರಶಸ್ತಿ, ೧೯೯೯, ‘ಶೇಷವಿಶೇಷ’ ಸಂಕಲನಕ್ಕೆ.

೧೯೯೯ : ಕನ್ನಡ ಸಾಹಿತ್ಯ ಅಕಾಡೆಮಿಯ ಉತ್ತಮ ಲಲಿತ ಪ್ರಬಂಧವಾಗಿ ‘ಶೇಷವಿಶೇಷ’ ಸಂಕಲನ ಆಯ್ಕೆ.

೨೦೦೨ : ‘ಗಾಳಿಪಟ’ ಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ

೨೩-೧೨-೨೦೦೬ : ರಾ.ಕು.ಅವರ ನಿಧನ(ಶನಿವಾರ)

ಅನುಬಂಧ ೨

ರಾ.ಕು. ಅವರ ಪ್ರಬಂಧಗಳ ಬಗೆಗೆ ವಿವಿಧ ವಿದ್ವಾಂಸರ ಅಭಿಪ್ರಾಯಗಳು

"ಗಾಳಿಪಟ"ವು ರಿಕ್ತತೆಯ ಲಘುವೃತ್ತಿಯದಲ್ಲ. ಇಲ್ಲಿಯ ಮಾತಿನ ರೀತಿ;

ಲಘು ಸಂದೇಶಪದಾ ಸರಸ್ವತೀ
ಹೃದಿ ಜೈನಾಮುಪಧಾತು ಮರ್ಹಸೆ

ಎಂದು ಬಣ್ಣನೆ ಪಡೆಯುವಂತಹುದು, ಎಷ್ಟು ಸರಸ್ವತಿಗಳ ನೀರು ಕುಡಿದಿದೆ ಈ ಶೈಲಿ!

ರಾ.ಕು. ಅವರ 'ಗಾಳಿಪಟ'ವು ಎಂಥ ಮಂಕನನ್ನೂ ತಲೆದೂಗಿಸದೆ ಬಿಡದು. ರಾ.ಕು.ಅವರ ವಾಣಿವಿಲಾಸ ಇಂದಿನ ಕನ್ನಡಕ್ಕೆ ಹೊಸಬೆಡಗು, ಬಿನ್ನಾಣ, ಬಿಬ್ಬೋಕ, ಮುರುಕ, ಹಗಣ ಹಗುರುಗತ್ತಿನಿಂದ ತಿಳಿಸಿಕೊಟ್ಟಿದೆ."

ಡಾ.ದ.ರಾ.ಬೇಂದ್ರೆ (ಗಾಳಿಪಟ ಮುನ್ನುಡಿ)

"ಪ್ರತಿದಿನ ಮುಂಜಾನೆ, ಮಧ್ಯಾಹ್ನ ನಡೆಯುವ ಮಾತು, ಕೌಟುಂಬಿಕ ಸಲುಗೆಯ ಹರಟೆ, ಸಂಜೆ ತಿರುಗಾಟದ ತಿಳಿನಗೆಯ ಮೋಜು-ಇಂಥ ಪ್ರಸಂಗಗಳ ಆರೋಗ್ಯಪೂರ್ಣ ತಿಳಿಭಾವನೆಗಳಿಗೆ ರಾ.ಕು.ಗಂಟಲಕೊಟ್ಟು ಮಾತನಾಡಿಸಿದ್ದಾರೆ. ಮಾತು ಮಾತಿಗೆ 'ಚಾರ್ಲಸ್ ಲ್ಯಾಂಬ್ ಹೇಳಿದಂತೆ, ರಾಬರ್ಟ್‌ಲಿಂಡ್ ಹೇಳಿದಂತೆ' ಎನ್ನುವ ಚಟ ಕಡಿಮೆಯಾಗಿ 'ರಾ.ಕು.ಹೇಳಿದಂತೆ' ಎನ್ನುವ ವಾಡಿಕೆ ನಮ್ಮ ಹುಡುಗರಲ್ಲಿ ಬೆಳೆದು ಬಂದರೆ ನಾವೇನೂ ಆಶ್ಚರ್ಯಪಡಬೇಕಿಲ್ಲ."

ಜಿ.ಬಿ.ಜೋಶಿ, ಸಂಪಾದಕರು

(ಗಾಳಿಪಟ ಮೊದಲ ಆವೃತ್ತಿಯ ಸಂಪಾದಕರ ಮಾತು)

"ಕನ್ನಡ ಲಲಿತ ಪ್ರಬಂಧಕಾರರಲ್ಲಿ ರಾ.ಕು.ಮರೆಯಲಾರದ ಹೆಸರು. ಹೆಚ್ಚು ಬರೆಯದಿದ್ದರೂ ಬರೆದಿದ್ದೆಲ್ಲಾ ಬಂಗಾರವಾಗುವಂತೆ ನೋಡಿಕೊಂಡರಲ್ಲ ಅಷ್ಟೇ ಸಾಕು."

-ಚನ್ನವೀರ ಕಣವಿ. ಧಾರವಾಡ

"......ಅವರ ಬರವಣಿಗೆಯ ತಂತ್ರರಲ್ಲಿ ಒಂದು ವಿದಗ್ಧ ಸರಣಿಯಿದೆ. ಮಾರ್ಮಿಕ ನರ್ಮವಿದೆ. ಸಂಸ್ಕೃತ ಮತ್ತು ಕನ್ನಡ ಸಾಹಿತ್ಯದ ವಾಚನದಿಂದ ಅವರ ಮೇಲಾದ ಗಾಢ ಸಂಸ್ಕಾರವು ಅವರ ಬರೆಹಗಳಲ್ಲಿ ಹಲವಾರು ರೀತಿಯಲ್ಲಿ ಹರಡಿಕೊಂಡಿದೆ. ಆದ್ದರಿಂದ ಅವರ ಪ್ರಬಂಧಗಳನ್ನು ಪೂರ್ತಿಯಾಗಿ

ಅರ್ಥಮಾಡಿಕೊಳ್ಳಬೇಕಾದರೆ ವಿಶಿಷ್ಟವಾದ ಸಾಹಿತ್ಯ ಸಂಸ್ಕಾರವನ್ನು ಪಡೆದಿರಬೇಕಾಗುತ್ತದೆ. ಅಲ್ಲಲ್ಲಿ ತುಣುಕು ತುಣುಕಾಗಿ ತೂರಿಕೊಂಡು ಬಂದಿರುವ ಆವತರಣಿಕಗಳು ಅರಿಯದವರಿಗೆ ಅರ್ಥಶೂನ್ಯವಾಗುತ್ತವೆ. ಅರಿತವರಿಗೆ ಅಸ್ವಾಧ್ಯವಾಗುತ್ತವೆ. ಇಲ್ಲಿ ಒಂದು ಎಚ್ಚರದ ಗಂಟೆಯನ್ನು ಬಾರಿಸಬಹುದೆಂದು ತೋರುತ್ತದೆ. ಆವತರಣಿಕೆಗಳಿಂದ ಪ್ರಬಂಧ ಲೇಖನದ ಪ್ರೌಢಿಮೆಗೆ ಮತ್ತು ವ್ಯಂಗ್ಯಗುಣಕ್ಕೆ ಕಳೆಕಟ್ಟುವುದು. ನಿಜವಾದರೂ ಅವು ಅಸಹಜವೆನ್ನುವಷ್ಟು ಎಳೆದುತಂದಂತೆ ಅತಿಯಾಗಬಾರದು. ಅವುಗಳಿಂದ ನುಡಿಗಟ್ಟು ಗಂಟುಗಂಟಾಗಬಾರದು. ಒಬ್ಬ ಸಾಮಾನ್ಯ ವಿದ್ಯಾವಂತ ವಾಚಕನು ಅರ್ಥಮಾಡಿಕೊಳ್ಳುವಂತೆ ಅವು ಪ್ರಸಾದಗುಣವನ್ನು ಹೊಂದಿರಬೇಕು. ಇಲ್ಲಿಯ ಸಂಗ್ರಹವನ್ನು ಬಹುಮಟ್ಟಿಗೆ ಈ ಗುಣ ಪ್ರಕಟವಾಗಿದೆಯೆಂದು ನಾನು ವಿಶೇಷವಾಗಿ ಸಂತೋಷಪಡುತ್ತೇನೆ.''

-ಡಾ.ರಂ.ಶ್ರೀ.ಮುಗಳಿ

(ದೇವಕನ್ಯೆಗೆ ಬರೆದ ಮುನ್ನುಡಿ)

ರಾ.ಕು. ಅವರ ಪ್ರಬಂಧಗಳನ್ನು ಓದುವುದೆಂದರೆ ಕಾವ್ಯವನ್ನೇ ಓದಿದ ಅನುಭವ. ಈ ಪ್ರಬಂಧಗಳನ್ನು ಓದಿ ನಾನು ತುಂಬಾ ಸುಖಿಸಿದ್ದೇನೆ. ಅವರು ಇನ್ನಷ್ಟು ಬರೆಯಲಿಲ್ಲವಲ್ಲ! ಎಂದು ವ್ಯಥೆಪಟ್ಟಿದ್ದೇನೆ.

-ಹಾ.ಮಾ.ನಾಯಕ

''ಗದ್ಯ ಬಂತು ಪದ್ಯಹೋಯ್ತು, ನಿಘಂಟು ಬಂತು, ಗದ್ಯ ಹೋಯ್ತು''

(ರಾ.ಕು.ನಿಘಂಟು ರಚನೆಯಲ್ಲಿ ತೊಡಗಿಸಿಕೊಂಡಾಗ ಪ್ರಬಂಧ ರಚನೆ ಕಡಿಮೆಯಾದ ಕಾರಣ ಹೀಗೆ ಹೇಳಿದ್ದು)

-ತಿ.ನಂ.ಶ್ರೀ

''ಶುಭ್ರವಾದ ಮನದ ವಿಲಾಸವನ್ನು ನಾವಿಲ್ಲಿ ಕಾಣಬಹುದು. ವಾಕ್‌ಸುದ್ದಿ ಅರ್ತವಿಸ್ತಾರ ಮತ್ತು ಕಲ್ಪನಾ ಚಮತ್ಕಾರಗಳಿಂದ ಈ ಪ್ರಬಂಧಗಳು ಕನ್ನಡ ಪ್ರಬಂಧಕಾರರ ರಚನೆಗಳಲ್ಲಿ ಸಾರ್ವಜನಿಕ ವಿಶ್ವಾಸವನ್ನು ರಸಿಕರ ಮೆಚ್ಚುಗೆಯನ್ನು ಪಡೆಯುತ್ತವೆಂಬುದರಲ್ಲಿ ಸಂಶಯವಿಲ್ಲ.''

-ಜಿ.ವೆಂಕಟಸುಬ್ಬಯ್ಯ

''ಕಾನೂರು ಹೆಗ್ಗಡತಿ'' ಚಿತ್ರದ ಕೆಲಸದ ಮುಕ್ತಾಯ ಹಂತದ ಗಡಿಬಿಡಿಯಲ್ಲಿದ್ದರೂ ''ಶೇಷ ವಿಶೇಷ'' ಕೈಸೇರಿದ ಕೂಡಲೇ ಓದಲಾರಂಭಿಸಿದೆ ಒಂದೇ ಓಟಕ್ಕೆ ಓದಿ ಮುಗಿಸಿಬಿಟ್ಟೆ.

ನಿಮ್ಮ 'ಗಾಳಿಪಟ' ನಾನು ಓದಿದ್ದು ಇಂಗ್ಲೆಂಡಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಓದಿ ಎಷ್ಟು ಉಲ್ಲಾಸಗೊಂಡಿದ್ದೆ! ನನಗಿನ್ನೂ ನೆನಪಿದೆ. ನಿಮಗೆ ತಕ್ಷಣ ಪತ್ರ ಬರೆದು ತಿಳಿಸಿದ್ದೆ ಕೂಡ.

'ಗಾಳಿಪಟ'ವನ್ನೋದಿ ಎಷ್ಟು ಹಿಗ್ಗಿದ್ದೇನೋ ಅಷ್ಟೇ ಶೇಷವಿಶೇಷ ಓದಿ ಹಿಗ್ಗಿದೆ. ನಿಮ್ಮ ಬರವಣಿಗೆಯ ಮೋಡಿ ಇನ್ನೂ ಅಷ್ಟೇ ಅದ್ಭುತವಾಗಿದೆ! ನಿಮ್ಮ ಹಾಸ್ಯ, ವಿಷಯಗಳನ್ನು ಹೊಸಬೆಳಕಿನಲ್ಲಿ ಕಾಣಬಲ್ಲ ದೃಷ್ಟಿ, ಜೀವನದ ಬಗ್ಗೆ ಇದ್ದ ಶ್ರದ್ಧೆ ಇನ್ನೂ ಹಾಗೆಯೇ ಮಂತ್ರಮುಗ್ಧಗೊಳಿಸುತ್ತದೆ! ನನ್ನ ಹೃತ್ಪೂರ್ವಕ ಅಭಿನಂದನೆಗಳು!''

- 'ಗಿರೀಶ್ ಕಾರ್ನಾಡ'

ಕನ್ನಡ ಲಲಿತ ಪ್ರಬಂಧ ಸಾಹಿತ್ಯದಲ್ಲಿ ರಾ.ಕು. ಅವರ ಸ್ಥಾನ ವಿಶಿಷ್ಟವಾದುದು. ಅವರ 'ಗಾಳಿಪಟ' ಮತ್ತು 'ದೇವಕನ್ಯೆ' ಪ್ರಬಂಧ ಸಂಕಲನಗಳು ಕನ್ನಡ ಸಾಹಿತ್ಯ ಭಂಡಾರದ ಮೌಲ್ಯವನ್ನು ಹೆಚ್ಚಿಸಿವೆ.

ಪ್ರಕಾಶಕರ ನುಡಿ

(ಶೇಷವಿಶೇಷ ಪ್ರಬಂಧ ಸಂಕಲನ)

ಅನುಬಂಧ ೩

ರಾ.ಕು. ಅವರ ಕೃತಿಗಳು

	ಕೃತಿ	ಪ್ರಕಟಿತ ವರ್ಷ
೧.	"ಗಾಳಿಪಟ" ಪ್ರಬಂಧಸಂಕಲನ ಮನೋಹಗ್ರಂಥಮಾಲೆ ಧಾರವಾಡ	೧೯೬೦
೨.	"ದೇವಕನ್ಯೆ" ಪ್ರಬಂಧ ಸಂಕಲನ, ಲೋಟಸ ಪ್ರಿಂಟಸ್ ರಾಜಾಜಿನಗರ, ಬೆಂಗಳೂರು-೧೦	೧೯೭೦
೩.	"ಶೇಷವಿಶೇಷ" ಪ್ರಬಂಧ ಸಂಕಲನ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತು ಹಾವೇರಿ, ರಾ.ಕು.ಅಭಿಮಾನಿಬಳಗ ಮತ್ತು ಶಿಷ್ಯವೃಂದ, ಹಾವೇರಿ	೧೯೯೯

ಗದ್ಯಾನುವಾದ ಕೃತಿಗಳು

೪. "ಅಂಡಯ್ಯನ ಕಬ್ಬಿಗರ ಕಾವ್ಯಂ"
ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತ್ , ಬೆಂಗಳೂರು

೫. "ನೇಮಿನಾಥ ಪುರಾಣ ಸಂಪುಟ" ೧ - ೨
ರಾಜ್ಯ ಕನ್ನಡ ಸಾಹಿತ್ಯ ಪರಿಷತ್ , ಬೆಂಗಳೂರು

೬. "ಶಾಂತೇಶ್ವರ ಪುರಾಣಂ"
ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೭. "ಚಂದ್ರ ಪ್ರಭಪುರಾಣಂ"
ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೮. "ಅರ್ಧನೇಮಿ ಪುರಾಣಂ"

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೯. "ಸಾಹಸ ಭೀಮವಿಜಯಂ"

ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಅನುಪಲಬ್ಧ ಕೈಬರಹಗಳು

೧. ಶ್ರೀ ಗಣೇಶ ನಾಟಕ

೨. ಕಳ್ಳ ನಾಟಕ

೩. ಸರಸಮ್ಮನ ಸಮಾದಿ ರೇಡಿಯೋ ನಾಟಕ

೪. ಕುಮಾರವ್ಯಾಸನ ಭಾಷಾ ಪರಿಕರ

೫. ಶ್ರೀ.ಶಂ.ಬಾ.ಜೋಶಿ ಅವರ ಭಾಷಾದೃಷ್ಟಿ

೬. ಸಾಹಿತ್ಯದ ಕಾರ್ಯ ಹಾಗೂ ಪ್ರವೃತ್ತಿ

೭. ಧಾವಕ ವಿಲಾಸ

೮. ಧಾರವಾಡ ಜಿಲ್ಲೆಯ ಕನ್ನಡ


೯. ಪತ್ರ ಪ್ರಪಂಚ

೧೦. ಮೂಷಕ ನಿಗ್ರಹ

೧೧. ಅಷುದ್ರ ರೋಗ

ಅನುಬಂಧ ೪

ರಾ.ಕು.ಅವರ ವಂಶಾವಳಿ



ಅನುಬಂಧ ೫

ಗ್ರಂಥಋಣ

೧. ಕೀರ್ತಿನಾಥ ಕುರ್ತಕೋಟಿ, ಬಯಲು-ಆಲಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೬೭

೨. ಗುರುಲಿಂಗ ಕಾಪಸೆ(ಸಂ), ಶತಮಾನದ ಲಲಿತ ಪ್ರಬಂಧ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧,

೩. ಚೌಧರಿ ವ್ಹಿ.ಆರ್.(ಸಂ), ವಿಮರ್ಶ ಸಂಪದ, ಪ್ರಸಾರಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬,

೪. ನಾಗೇಶ ಎಚ್.ವಿ.(ಸಂ), ಪ್ರಬಂಧ ಪ್ರಪಂಚ, ಡಾ.ರಾ.ಯ.ಧಾರವಾಡಕರ, ಸನ್ಮಾನ ಸಮಿತಿ ಧಾರವಾಡ, ೧೯೯೦

೫. ಪುರುಷೋತ್ತಮ ಬಿಳಿಮಲೆ(ಸಂ), ಪ್ರಬಂಧ ೧೯೮೮, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೯

೬. ಮಳಲಿ ವಸಂತ ಕುಮಾರ, ಪ್ರಬಂಧ ಸಾಹಿತ್ಯ, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೮

೭. ಮುರಿಗೆಪ್ಪ ಎ., ಭಾಷೆಯ ಸ್ವರೂಪ ಮತ್ತು ಐತಿಹಾಸಿಕತೆ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೦

೮. ಮುಕ್ಕಣ್ಣನವರ ಕೆ.ಎಚ್.(ಸಂ), ಪ್ರಬಂಧ ಸಂಚಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೬,

೯. ರಾಜಪ್ಪಾ ದಳವಾಯಿ(ಸಂ), ಕನ್ನಡ ಸಾಹಿತ್ಯ ಕೋಶ, ದಳವಾಯಿ ಪ್ರಕಾಶನ ಬೆಂಗಳೂರು, ೨೦೦೮

೧೦. ವೆಂಕಟಸುಬ್ಬಯ್ಯ ಜಿ.(ಸಂ), ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು, ೧೯೭೫

೧೧. ಶ್ರೀನಿವಾಸ ಎಸ್, ಬಂಧ ಪ್ರಬಂಧ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೦೫

೧೨. ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ, ಕನ್ನಡ ಸಾಹಿತ್ಯ, ಬೆಂಗಳೂರು, ೧೯೮೮

ಪತ್ರಿಕೆಗಳು, ಲೇಖನಗಳು

೧. ನಾಗನೂರ ಶಿವಾನಂದ, **ಸಾಹಿತ್ಯ ಸೌರಭ**, ಹಾವೇರಿ ಜಿಲ್ಲಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನ ಸಮಿತಿ, ೨೦೦೧

೨. **ಪ್ರಜಾವಾಣಿ ಪತ್ರಿಕೆ**, ೨೪-೧೨-೨೦೦೬, ರವಿವಾರ

೩. ಪಾಟೀಲ ರಾಘವೇಂದ್ರ(ಸಂ), **ಸಾಹಿತ್ಯ ಸಂವಾದ**, ಜನವರಿ-ಮಾರ್ಚ್, ಸಂವಾದ ಪ್ರಕಾಶನ, ಮಲ್ಲಾಡಹಳ್ಳಿ, ೨೦೦೬

೪. **ಸಂಯುಕ್ತ ಕರ್ನಾಟಕ**, ಜಿಲ್ಲಾ ವಾರ್ತಾವಿಶೇಷ ಸಂಚಿಕೆ, ೨೨-೨-೨೦೦೧